ಕರ್ಮವೀರ

ಸಂಪಾದಕರು: ಹ. ರಾ. ಪುರೋಹಿತ ಎಂ. ಎ.

—ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ—

Editor: H. R. Purohit, M. A.

—(ಸಂಪುಟ ೧೯)— ಹುಬ್ಬಳ್ಳಿ ಸೋಮವಾರ ತಾರೀಖು ೧೧—೮—೧೯೪೭ —(ಸಂಚಿಕೆ ೧೯)—

ಹೈದರಾಬಾದ ಸಂಸ್ಥಾನದ ಒಳನೋಟ

ನಿಜಾಮರ ಕೋಶಬಲ- ಬ್ರಿಟಿಶರ ಸ್ವಾರ್ಥಬುದ್ಧಿ- ಜಮೀನುದಾರರ ಪಾಳೆಯಗಾರಿಕೆ- ಪೋಲೀಸ ದರಬಾರು- ಜನತೆಯ ಆರ್ತಸ್ಥಿತಿ- ಮಜ್ಲಿಸ, ಕಮ್ಯುನಿಸ್ಟ, ಕಾಂಗ್ರೆಸ ಪಕ್ಷಗಳ ಸ್ಪರ್ಧೆ—

ಭಾರತದಿಂದ ಪಾಕಿಸ್ತಾನದ ತುಂಡನ್ನು ಕತ್ತರಿಸಿ ತೆಗೆಯುತ್ತಿರುವ ಈ ನೋವಿನ ಸಮಯದಲ್ಲಿ ಹೈದರಾಬಾದಿನ ನರೇಂದ್ರರು ಹಿಂದೀ ಒಕ್ಕೂಟದಿಂದ ಆದಷ್ಟು ವಿಷಯಗಳಲ್ಲಿ ಸ್ವತಂತ್ರರಾಗಿ ಉಳಿಯುವ ಯತ್ನನಡೆಸುತ್ತಿರುವುದನ್ನು ನೋಡಿದರೆ ಅವರ ಆಡಳಿತದಲ್ಲಿ ಹಣ್ಣಾದ ಜನಸಾಮಾನ್ಯರು ತಾಳ್ಮೆಗೆಟ್ಟು ಯಾವ ನಿಮಿಷದಲ್ಲಿ ಚಳವಳ ಹೂಡುವರೆಂಬುದನ್ನು ಹೇಳಬರುವಂತಿಲ್ಲವೆಂದು ಅಮೇರಿಕದ ಪ್ರಸಿದ್ಧ ಪತ್ರಿಕಾ ವ್ಯವಸಾಯಿಗಳಾದ ಶ್ರೀ ಆಂಡ್ರ್ಯೂ ರಾಥ್ ಎಂಬವರು ಹೈದರಾಬಾದಿನ ಸ್ಥಿತಿಯನ್ನು ಸ್ವತಃ ಕಂಡುಬರೆಯುತ್ತಾರೆ. ಕೆಳಗೆ ಅವರ ಅಭಿಪ್ರಾಯಗಳ ಸಾರವನ್ನು ಕೊಡಲಾಗಿದೆ.

ನಿಜಾಮರ ಮಹತ್ವಾಕಾಂಕ್ಷೆ

ಚಿನ್ನ ಬೆಳ್ಳಿ ಮುತ್ತು ರತ್ನಗಳ ೬ ಲಕ್ಷ ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಸ್ವಂತ ಆಸ್ತಿಯುಳ್ಳ ನಿಜಾಮಸಾಹೇಬರ ರಾಜಕೀಯ ಮಹತ್ವಾಕಾಂಕ್ಷೆಯು ಸಣ್ಣದಿಲ್ಲ. ಹೆಚ್ಚುಕಡಿಮೆ ಇನ್ನೂರು ವರುಷಗಳ ಹಿಂದೆ ನಿಜಾಮ ಮನೆತನದ ಮೂಲಪುರುಷನು ಅಳಿದು ಹೋಗುತ್ತಿದ್ದ ಮೊಗಲಸಾಮ್ರಾಜ್ಯದಿಂದ ತನಗೆ ಬೇಕಾದಷ್ಟು ಭಾಗವನ್ನು ವಶಪಡಿಸಿಕೊಂಡು ಆಳತೊಡಗಿದನು. ಇಂದಿನ ನಿಜಾಮರೂ ಹಾಗೇ ಚರಿತ್ರೆಯ ಪುನರಾವೃತ್ತಿಯನ್ನು ಮಾಡಲು ಹವಣಿಸುತ್ತಿದ್ದಾರೆಂಬುದು ಅಗಲೇ ಸ್ಪಷ್ಟವಾಗಿದೆ.

ಮೇಲಿನ ಮಾತಿಗೆ ನಿಜಾಮರು ಅಗಲೇ ಫ್ರಾನ್ಸ್ ದೇಶದಷ್ಟು ವಿಸ್ತಾರವುಳ್ಳ ಮತ್ತು ೧ ಕೋಟಿ ೮೦ ಲಕ್ಷ ಪ್ರಜೆಗಳಿರುವ ಹೈದರಾಬಾದಿಗೆ ವರ್ಹಾಡವನ್ನು ಸೇರಿಸಲು ಪ್ರಯತ್ನ ಪಡುತ್ತಿರುವುದು ಮತ್ತು ಮಚ್ಛಲೀಪಟ್ಟಣ, ಪೋರ್ತುಗೀಸ, ಗೋವೆ ಹಾಗೂ ವಿಶಾಖಪಟ್ಟಣ ಬಂದರುಗಳ ಒಡೆಯತನವನ್ನು ಇಲ್ಲವೆ ಅಲ್ಲಿ ವಿಶೇಷಸವಲತ್ತುಗಳನ್ನು ಪಡೆಯಲು ಹೊಂಚು ಹಾಕಿರುವುದು ಸಾಕ್ಷಿಯಾಗಿದೆ.

ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಯಾವುದೊಂದನ್ನು ಸೇರಿದರೂ ಹಿಂದು ಮುಸಲ್ಮಾನ ಪಕ್ಷಗಳಲ್ಲಿ ಯಾವುದಾದರೊಂದಕ್ಕೆ ಅತೃಪ್ತಿಯಾಗದಿರದೆಂಬ ನೆವವೊಡ್ಡಿ ನಿಜಾಮರು ತಮ್ಮ ಸ್ವಾತಂತ್ರ್ಯವನ್ನು ಸಮರ್ಥಿಸಿಕೊಂಡರೆ, ಹೈದರಾಬಾದು ಹಿಂದುಸ್ತಾನಕ್ಕೆ ಸೇರಿದರೆ ಅಗಲೇ ಕುಬ್ಜಸ್ವರೂಪದಲ್ಲಿರುವ ಪಾಕಿಸ್ತಾನವು ಮತ್ತಷ್ಟು ಕುಬ್ಜವಾಗುವುದೆಂಬ ಹೆದರಿಕೆಯಿಂದ ಜಿನ್ನಾ ಸಾಹೇಬರು ನಿಜಾಮರ ಸ್ವಾತಂತ್ರ್ಯಕ್ಕೆ ಬೆಂಬಲ ನಿತ್ತಿದ್ದಾರೆ.

ಮಜ್ಲಿಸ್ ಇತ್ತಿಹಾದುಲ್ ಮುಸ್ಲಿಮೀನ್

ಎಲ್ಲರಿಗಿಂತ ಅತ್ಯಧಿಕ ಆಸಕ್ತಿಯಿಂದ ಹೈದರಾಬಾದ ಸ್ವತಂತ್ರವಾಗಲು ಬೆಂಬಲವೀಯುವ ಪಕ್ಷವೆಂದರೆ ಮೇಲಿನದೇ. ಹೈದರಾಬಾದಿನಲ್ಲಿ ಮುಸ್ಲಿಮರ ಸಂಖ್ಯೆ ಕೇವಲ ನೂರಕ್ಕೆ ೧೩ ಯಷ್ಟಿದ್ದರೂ ದೊಡ್ಡ ದೊಡ್ಡ ಸರಕಾರಿ ಹುದ್ದೆಗಳಲ್ಲಿ ಐದನೆಯ ನಾಲ್ಕರಷ್ಟನ್ನು ಮುಸಲ್ಮಾನರಿಗೇ ಮೀಸಲಿಡಲಾಗಿದೆ. ಶಿಕ್ಷಣ, ಕಾರಕೂನಿ ಮತ್ತು ಪೋಲೀಸು ನವಕರಿಗಳಲ್ಲಿ ಮುಸಲ್ಮಾನರೇ ಅತ್ಯಧಿಕವಾಗಿ ತುಂಬಿದ್ದಾರೆ. ಅದಲ್ಲದೆ ಅತ್ಯಂತ ದೊಡ್ಡ ಜಮೀನುದಾರರಲ್ಲಿ ಬಹುಸಂಖ್ಯಾಕರು ಮುಸ್ಲಿಮರೇ ಆಗಿದ್ದಾರೆ. ಒಬ್ಬ ಮಜ್ಲಿಸ ಮುಖಂಡನು ಹೈದರಾಬಾದಿನಲ್ಲಿ ಹಿಂದು ಮುಸ್ಲಿಮ ಎಂಬ ೨ ಜನಾಂಗಗಳನ್ನು ಪ್ರತ್ಯೇಕವಾಗಿ ಸ್ಥಾಪಿಸಬೇಕೆಂದು ಮಾತಾಡುತ್ತಿದ್ದಾಗ ನಾನು ಮುಸ್ಲಿಮರ ಆಳಿಕೆ ಅವರು ಬಹುಸಂಖ್ಯಾಕರಾಗಿದ್ದಲ್ಲಿ ಮಾತ್ರವೆಂದು ಜಿನ್ನಾ ಸಾಹೇಬರ ತತ್ವವಿದೆಯಲ್ಲವೇ? ಎಂದರೆ ಅವನು ಅದಕ್ಕೆ ಪ್ರತಿಯಾಗಿ- ನೀವು ನಿಮ್ಮ ಹಿತಕ್ಕನುಗುಣವಾಗಿ ಮಾತಾಡುತ್ತೀರಿ. ಈ ಹೈದರಾಬಾದಿನಲ್ಲಿ ಮುಸ್ಲಿಮರಾದ ನಾವು ೬೦೦ ವರ್ಷಗಳಿಂದ ಗೆದ್ದ ಹಕ್ಕಿನಿಂದ ಆಳುತ್ತಿದ್ದೇವೆ. ಹಿಂದು ಮುಸ್ಲಿಮರ ಕಲಹವೆಲ್ಲ ಪ್ರಭುತ್ವಕ್ಕಾಗಿ. ನಾವು ಸರ್ವ ಪ್ರಯತ್ನದಿಂದ ನಮ್ಮ ಪ್ರಭುತ್ವವನ್ನು ಉಳಿಸಿಕೊಳ್ಳಲು ಹೆಣಗುತ್ತೇವೆ. ಮುಸ್ಲಿಮರ ಆಳಿಕೆಯು ಮೂರ್ತಸ್ವರೂಪದಂತಿರುವುದರಿಂದಲೇ ನಾವು ನಿಜಾಮರಿಗೆ ಬೆಂಬಲ ಕೊಡುತ್ತೇವೆ ಎಂದು ಬಾಯಿಬಿಟ್ಟು ಹೇಳಿಬಿಟ್ಟನು.

ಮೇಲೆ ಹೇಳಿದ ಪಕ್ಷ ಎಷ್ಟು ಬೆಂಬಲವನ್ನು ಮಧ್ಯಮ ವರ್ಗದವರಿಂದ ಪಡೆದರೂ ಮುಸ್ಲಿಮ ರೈತರು ಹಾಗೂ ಕೆಲಸಗಾರರ ಸಹಾನುಭೂತಿಯನ್ನು ಪಡೆಯದಾಗಿದೆ. ಕಳೆದ ಶರತ್ಕಾಲದಲ್ಲಿ ಒಂದು ಬಟ್ಟೆಯ ಗಿರಣಿಯಲ್ಲಿ ಮುಷ್ಕರ ನಡೆದಾಗ ಮಜ್ಲಿಸ್ ಮುಖಂಡನೊಬ್ಬನು- ರಾಜವಂಶದವರಾದ ನೀವು ಬೀದಿಗಿಳಿಕ್ಕೆ ಹೊರಡಬಾರದು- ಎಂದು ಮುಸ್ಲಿಂ ಕೆಲಸಗಾರರಿಗೆ ಹೇಳಿದಾಗ ಅಲ್ಲಿಯ ಒಬ್ಬ- ನೋಡಿರಿ ನಿಮ್ಮ ಮುಂದೆ ನಿಂತಿದ್ದಾನೆ ರಾಜವಂಶೀಯ, ದಿವಸಕ್ಕೆ ಎಂಟಾಣೆ ದುಡಿಯುತ್ತಾನೆ!— ಎಂದು ಎಲ್ಲರೊಡನೆ ಹೋ ಎಂದು ನಗೆಯಾಡಿದನು.

ಬ್ರಿಟಿಶರ ಪ್ರಚೋದನೆ

ಈ ಮಜ್ಲಿಸ್ ಪಕ್ಷವು ಮೊದಲಿನ ಸಲ ಛತ್ತಾರಿನವಾಬರ ಮತ್ತು ಅನಂತರ ಮಿರ್ಜಾ ಇಸ್ಮಾಯಿಲರವರ ಪದಭ್ರಂಶಕ್ಕೆ ಮೂಲಕಾರಣವಾಯಿತು. ಮಂತ್ರಿನಿರ್ಮಾಪಕ ಶಕ್ತಿಯುಳ್ಳ ಮಜ್ಲಿಸ್ ಪಕ್ಷವು ಹೈದರಾಬಾದಿನಲ್ಲಿ ಪ್ರಜಾಶಕ್ತಿಯನ್ನು ಎಂದೂ ಪ್ರವೇಶಿಸಗೊಡಲು ಸಿದ್ಧವಿಲ್ಲ. ಇದರ ಜೊತೆಗೆ ಬ್ರಿಟನ್ನು ಕೂಡ ಹೈದರಾಬಾದಿನ ಸ್ವಾತಂತ್ರ್ಯಕ್ಕೆ ಒಳಗೊಳಗೇ ಪ್ರಚೋದನೆ ಕೊಟ್ಟಿದೆಯೆಂಬ ಊಹೆಯುಂಟು. ಪರಂಪರೆಯಿಂದ ಬೆಳೆದುಬಂದ ಬುದ್ಧಿಯಂತೆ ಬ್ರಿಟಿಶ ಅಧಿಕಾರಿಗಳು ಹೈದರಾಬಾದಿನಲ್ಲಿ ಬ್ರಿಟಿಶ ವರ್ಚಸ್ಸು ಉಳಿಯಬೇಕೆಂದು ಬಯಸುವುದು ಅಸ್ವಾಭಾವಿಕವಲ್ಲ. ಕಳೆದ ವರ್ಷದ ವರೆಗೆ, ಎಂದರೆ ಸುಮಾರು ೧೫೦ ವರ್ಷ ಪರ್ಯಂತ ಭಾರತ ಉಪಖಂಡದಲ್ಲಿ ಸಿಕಂದರಾಬಾದು ಸುಪ್ರಸಿದ್ಧವಾದ ಸೈನ್ಯದ ದೊಡ್ಡ ಠಾಣೆಯಾಗಿ ಬ್ರಿಟಿಶರ ವಶದಲ್ಲಿತ್ತು. ಅಲ್ಲದೆ ೧೮೫೭ರ ಸಿಪಾಯಿ ದಂಗೆಯಲ್ಲಿ ಬ್ರಿಟಿಶರಿಗೆ ಸಹಾಯ ಮಾಡಿದುದರಿಂದಲೂ ೧೯೧೪-೧೮ ರಲ್ಲಿ ಮುಸ್ಲಿಮರ ಒಟ್ಟೋಮನ್ ಸಾಮ್ರಾಜ್ಯದ ವಿರುದ್ಧವಾಗಿ ಹಿಂದೀ ಮುಸ್ಲೀಮರನ್ನು ಬ್ರಿಟಿಶ ದಳಕ್ಕೆ ನೆರವೀಯಲು ಒದಗಿಸಿ ಕೊಟ್ಟುದರಿಂದಲೂ ನಿಜಾಮರಿಗೆ "ಬ್ರಿಟಿಶ ಸರಕಾರದ ವಿಶ್ವಸ್ತ ಸಹಕಾರಿ" ಯೆಂಬ ಬಿರುದು ಬೇರೆ ಇದೆ. ಇತ್ತೀಚೆಗೆ ಸರ್ ರಿಜಿನಾಲ್ಡ್ ಕೂಪಲಂಡರು ಹಿಂದೀ ಸಂಸ್ಥಾನಗಳಲ್ಲಿ ಬ್ರಿಟಿಶ ವಿಮಾನ ದಳದ ತುಂಡುಗಳು ಇರುವುದು ಬ್ರಿಟಿಶ ಶಾಮನವೆಲ್ಲಿನ ಸಮರಶಾಸ್ತ್ರದ ಅವಶ್ಯಕತೆಯನ್ನು ಪೂರಯಿಸಬಲ್ಲದೆಂದು ಅಭಿಪ್ರಾಯಪಟ್ಟಿದ್ದಾರೆ.

ಇದರ ಮೇಲೆ ಬ್ರಿಟಿಶರ ಇಂದಿನ ಆರ್ಥಿಕ ದುಸ್ಥಿತಿಯೂ ಮೇಲೆ ಹೇಳಿದಂತೆ ವರ್ತಿಸಲು ಅವರನ್ನು ಪ್ರೇರಿಸಬಹುದು. ಹೈದರಾಬಾದಿನಲ್ಲಿ ನಿಜಾಮರ ಸ್ವಂತ ಐಶ್ವರ್ಯವನ್ನು ಬಿಟ್ಟೇ ಸರಕಾರೀ ಕೋಶಾಗಾರದಲ್ಲಿ ಅತ್ಯಧಿಕ ಧನವಿದೆ; ಅದು ಇಡಿಯ ದೂರ ಪ್ರಾಚ್ಯದಲ್ಲೇ ಪ್ರಥಮ ಸ್ಥಾನ ಪಡೆದಿದೆ. ಅದುದರಿಂದ ಹೈದರಾಬಾದಿನ ೩೦೦ ಕೋಟಿ ರೂಪಾಯಿಗಳ ಕೈಗಾರಿಕೆಯ ಯೋಜನೆ ಮತ್ತು ಇತರ ಯೋಜನೆಗಳಿಗೆ ಒಟ್ಟು ಬೇಕಾದ ಸುಮಾರು ೧೦೦ ಲಕ್ಷ ಕೋಟಿ ರೂಪಾಯಿಗಳ ಸಾಮಾನುಗಳನ್ನು ಬ್ರಿಟನ್ನಿನಿಂದಲೇ ಹೈದರಾಬಾದು ತರಿಸಿಕೊಳ್ಳಬಹುದೆಂದು ಆಶಿಸಲಾಗಿದೆ.

ಗುಪ್ತ ದಂಡನೀತಿ

ವಾಸ್ತವವಾದಿಗಳಾದ ಇಂದಿನ ಬ್ರಿಟಿಶ ಧೋರಣದ ಶಿಲ್ಪಿಗಳು ಪ್ರಕಾಶವಾಗಿ ಹೈದರಾಬಾದು ಕಾಶ್ಮೀರಗಳಂತಹ ದೊಡ್ಡ ಸಂಸ್ಥಾನಗಳನ್ನು ತಮ್ಮ ವಶದಲ್ಲಿಟ್ಟುಕೊಳ್ಳಲಸಾಧ್ಯವೆಂದು ತಿಳಿದಿದ್ದಾರೆ. ಮತ್ತು ಅದರಿಂದಲೇ ಹಿಂದುಸ್ತಾನ ಮತ್ತು ಪಾಕಿಸ್ತಾನ ಸರಕಾರಗಳ ಕಣ್ಣಿಗೆ ಮಣ್ಣೆರಚಲು ಬ್ರಿಟಿಶ ಸೈನ್ಯವನ್ನು ವಾಪಸು ಕರೆಸಿಕೊಳ್ಳಲಾಗಿದೆ. ಅದರೆ ಸಂಸ್ಥಾನದ ಸೈನ್ಯಕ್ಕೆ ಶಿಕ್ಷಕರೂ ಸಾಮಗ್ರಿಗಳೂ ಬ್ರಿಟನ್ನಿನಿಂದಲೇ ಬರಬೇಕೆಂದು ತೀರ್ಮಾನವಾಗಿದೆ. ಈ ದೃಷ್ಟಿಯಿಂದ ಬ್ರಿಟಿಶ ಸರಕಾರವು ಗುಪ್ತವಾಗಿ ನಿಜಾಮರು ಹಿಂದೀ ಒಕ್ಕೂಟವನ್ನು ಸೇರಬೇಕೆಂದೂ ಅದರೆ ಅದಷ್ಟು ಮಟ್ಟಿಗೆ "ಬ್ರಿಟಿಶ ಸರಕಾರದ ವಿಶ್ವಸ್ತ ಸಹಕಾರಿ" ಎಂಬ ಬಿರುದಿನಂತವನ್ನು ಉಳಿಸಿಕೊಳ್ಳಲು ಪ್ರಯತ್ನಿಸಬೇಕೆಂದೂ ಸೂಚನೆಕೊಟ್ಟಿದೆಯೆಂದು ಸುದ್ದಿ.

ಸಂಸ್ಥಾನ ಕಾಂಗ್ರೆಸ್ಸು ಹೋರಾಟ ಹೂಡುವುದೇ ?

ಹಿಂದೀ ಒಕ್ಕೂಟವನ್ನು ಸೇರದಿದ್ದರೆ ಹೈದ್ರಾಬಾದನ್ನೂ ಅದರ ಸ್ವಾತಂತ್ರ್ಯವನ್ನೂ ಮನ್ನಿಸಿದರೆ ಬ್ರಿ. ಸರಕಾರವನ್ನೂ ಶತ್ರುಸಮಾನರೆಂದು ಎಣಿಸಬೇಕಾಗುತ್ತದೆಂದು ಪಂ. ಜವಾಹರರು ಹೇಳಿದ್ದಾರೆ. ಕಳೆದ ಜೂನಿನ ಸಂಸ್ಥಾನಕಾಂಗ್ರೆಸ್ಸಿನ ಸಭೆಯಲ್ಲಿ ಸುಮಾರು ಲಕ್ಷಕ್ಕೆ ಮಿಕ್ಕಿದಷ್ಟು ಜನರು ಒಕ್ಕೊರಲಿಂದ ನಿಜಾಮರು ಪ್ರಜಾ ಸರಕಾರ ಸ್ಥಾಪಿಸಗೊಡದಿದ್ದರೆ ಸಾರ್ವಜನಿಕ ಅಸಹಕಾರ ಚಳವಳ ಹೂಡುವುದಾಗಿ ಘೋಷಿಸಿದರು. ಸುಮಾರು ೨½ ಲಕ್ಷ ಸದಸ್ಯರುಳ್ಳ ಸಂಸ್ಥಾನ ಕಾಂಗ್ರೆಸ್ಸು ಎಲ್ಲಕ್ಕಿಂತ ಪ್ರಬಲವಾದ ಪಕ್ಷವೆನಿಸಿದೆ. ಅದಕ್ಕೆ ನೂರಕ್ಕೆ ೨೫ ರಷ್ಟಿರುವ ಅಸ್ಪೃಶ್ಯ ಮತ್ತು ೧೩ ರಷ್ಟಿರುವ ಮುಸ್ಲಿಮರ ಬೆಂಬಲ ಮಾತ್ರ ಇಲ್ಲವಾಗಿದೆ. ದಲಿತವರ್ಗದ ಮುಖಂಡರು ಹಾಗೂ ಕಮ್ಯುನಿಸ್ಟರು ಅನೇಕ ವಿಷಯಗಳಲ್ಲಿ ಪರಸ್ಪರವಾಗಿ ಮತ್ತು ಕಾಂಗ್ರೆಸ್ಸಿನೊಡನೆ ಭಿನ್ನಾಭಿಪ್ರಾಯ ತಳೆದಿದ್ದರೂ ನಿಜಾಮರ ಸ್ವಾತಂತ್ರ್ಯ ಹಿಡಾನೆಯನ್ನು ವಿರೋಧಿಸುವದರಲ್ಲಿ ಈ ಎಲ್ಲ ಪಕ್ಷಗಳೂ ಒಮ್ಮತವಾಗಿವೆ. ಅದುದರಿಂದ ಕಾಂಗ್ರೆಸ್ಸಿನ ಪ್ರತ್ಯಕ್ಷ ಹೋರಾಟದ ಬೆದರಿಕೆ ನಿಜವಾಗಬಹುದೇ?

ಪೋಲೀಸರ ಪುಂಡಾಟಿಕೆ

ಕಳೆದ ಮೇ ತಿಂಗಳಲ್ಲಿ ಶ್ರೀ. ಜಯಪ್ರಕಾಶರನ್ನು ಸಂಸ್ಥಾನದಿಂದ ಹೊರದೂಡಿದಾಗ ಅವರ ಮತಪ್ರದರ್ಶನ ಪಡೆದಾಗ ಅನೇಕ ಪ್ರಜೆಗಳು ಪೋಲೀಸರ ಗುಂಡಿಗೆ ತುತ್ತಾದರು. ಶಾಂತಿ ಕಾಲದಲ್ಲಿ ಕೂಡ ಪೋಲೀಸರ ಕ್ರೌರ್ಯದ ಒಂದು ಪರಂಪರೆಯೇ ರೂಢಿಯಾಗಿ ಬಿಟ್ಟಿದೆ. ಕಳೆದ ವರ್ಷ ಹೈದರಾಬಾದಿನಲ್ಲಿ ಜನ್ಮತಳೆದ ಶ್ರೀಮತಿ ಸರೋಜಿನೀನಾಯುಡುರವರ ಮಗಳಾದ ಶ್ರೀಮತಿ ಪದ್ಮಜಾ ನಾಯುಡುರವರು ಪೋಲೀಸರ ಹಿಂಸೆಯನ್ನು ಅಭ್ಯಸಿಸತೊಡಗಿದಾಗ ಒಂದು ಹಳ್ಳಿಯಲ್ಲಿ ಕಂದಾಯ ಅಲ್ಪಸ್ವಲ್ಪ ಬಾಕಿ ಇದ್ದದ್ದಕ್ಕೆ ಇಡೀ ಹಳ್ಳಿಯ ಧಾನ್ಯ ಸಂಗ್ರಹವನ್ನು ಜಪ್ತಿ ಮಾಡಲು ಕಲೆಕ್ಟರರು ಅಪ್ಪಣೆಯಿತ್ತುದು ತಿಳಿದು ಬಂದಿತು. ಪೋಲೀಸರು ಒಂದು ಮುಸ್ಲಿಮರೆಲ್ಲರ ಮನೆಯೊಳಗೆ ನುಗ್ಗಿ ಧಾನ್ಯಾದಿಗಳನ್ನು ವಸೂಲು ಮಾಡಿದರು. ಒಂದು ಕಡೆ ಮದುವೆ ಮಂಟಪದಲ್ಲಿ ಹೊಕ್ಕು ಅಕ್ಕಿಗಳನ್ನು ಹೊಡೆದು ಅದರಿಂದ ಜನ ಸಿಟ್ಟಿಗೆದ್ದು ಕಲೆಕ್ಟರರ ಮೇಲೆ ಏರಿ ಹೋದಾಗ ಅವರು ಹೊಸ ಸೈನ್ಯವನ್ನು ತರಿಸಿ ಪ್ರತೀಕಾರ ಮಾಡಿದರು— ಇಷ್ಟೆಲ್ಲ ನಡುರಾತ್ರಿಯಲ್ಲಿ ನಡೆದದ್ದು! ಹೆಂಗಸರಿಬ್ಬರ ಮೇಲೆ ಅತ್ಯಾಚಾರಮಾಡಿದ ಕತೆಗಳಂತೂ ಬೇಕಾದಷ್ಟಿವೆ ನೋಡಲು ಹೆದರಿದರೂ ಒಕ್ಕಲಿಗರು ಈಗ ಪಟ್ಟು ತಿಂದು ಗಟ್ಟಿಯಾಗಿ ಧೈರ್ಯಪಡೆದಿದ್ದಾರೆ. ಅದುದರಿಂದ ಅವರು ಈಗ ಮೊದಲಿನಷ್ಟು ಹೆದರುವುದಿಲ್ಲ.


ಕಾಂಗ್ರೆಸಿನ ಪ್ರಬಲ ಆಯುಧ

ಇಂದು ನಿಜಾಮರ ಸ್ವಾತಂತ್ರ್ಯದ ವಿರುದ್ಧ ಕಾಂಗ್ರೆಸ್ಸು ಒಂದು ಪ್ರಬಲವಾದ ಅಸ್ತ್ರ ಹೂಡಲಿರುವುದೆಂದರೆ, "ಪ್ರಾದೇಶಿಕ ರಾಜಭಕ್ತಿ" ಯೆಂಬುದೇ ಆಗಿದೆ. ಅದರ ಪ್ರಕಾರ ನೂರಕ್ಕೆ ೫೦ ರಷ್ಟಿರುವ ತೆಲುಗರು ಆಂಧ್ರ ಪ್ರಾಂತವನ್ನೂ ೨೫ ರಷ್ಟಿರುವ ಮರಾಠಿಗರು ಮಹಾರಾಷ್ಟ್ರವನ್ನೂ ಮತ್ತು ೧೫ ರಷ್ಟು ಕನ್ನಡಿಗರು ಕರ್ನಾಟಕ ಪ್ರಾಂತವನ್ನೂ ಸೇರುತ್ತೇವೆಂದು ಹೆದರಿಸುವುದೇ ಆ ಆಯುಧ. ಇದರಿಂದ ನಿಜಾಮ ಸಾಹೇಬರ ರಾಜ್ಯವೇ ಅಸ್ತಿತ್ವದಿಂದ ಹೋದೀತು, ಹೋಗಬಹುದಾಗಿದೆ. ಈ ಚಳವಳ ಹೂಡಿದ್ದೇ ಆದರೆ ಮುಸ್ಲಿಮೇತರ ಗಡಿಯ ೩೦ ಜಿಲ್ಲೆಗಳು ಬೆಂಬಲ ಕೊಡಲು ಸಿದ್ಧವಿವೆ; ಆದರೆ ಪಂ. ನೆಹರೂರವರ ಸೂಚನೆಯಿಲ್ಲದೆ ಸಂಸ್ಥಾನ ಕಾಂಗ್ರೆಸ್ಸು ಯಾವ ಉಗ್ರ ಕಾರ್ಯಕ್ರಮವನ್ನೂ ಕೈಕೊಳ್ಳುವುದಿಲ್ಲ. ಹೈದರಾಬಾದು ಹಿಂದೀ ಒಕ್ಕೂಟವನ್ನು ಸೇರಿದರೆ ಒಕ್ಕೂಟದ ಪರಿಷ್ಕಾಧಿಕಾರ ಅಥವಾ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳಬೇಕಾಗುತ್ತದೆಂದು ಪಂ. ನೆಹರೂರವರು ಹೇಳಿದ್ದಾರೆ. ಅದರಿಂದ ನಿಜಾಮರು ಒಕ್ಕೂಟವನ್ನು ಸೇರುವ ಹೊತ್ತು ಬಂದಿತು.

ಜಮೀನುದಾರರ ರಾಜ್ಯ

ಹೈದರಾಬಾದಿನಲ್ಲಿ ನೂರಕ್ಕೆ ೮೦ ರಷ್ಟು ಜನರು ಒಕ್ಕಲತನ ಮಾಡುವವರು— [illegible] ಮಧ್ಯಯುಗದ ಒಂದು [illegible] ತೋರುತ್ತದೆ. ಇವರನ್ನು [illegible]; ಅದೆಲ್ಲವೂ ಮುಖ್ಯವಾಗಿ ಜಮೀನುದಾರರೇ [illegible]. ನಿಜಾಮರಿಗೇ ಸ್ವತಃ ೮,೦೧೮ ಇದರ [illegible] ಸ್ವಂತ ಆಸ್ತಿಯಿದೆ. ಅದರಿಂದ ೨ ಕೋಟಿ ರೂಪಾಯಿಗಳ ಉತ್ಪತ್ತಿಯಿದೆ. ಸುಮಾರು ೧೧೦೦ ಜನ ಜಮೀನುದಾರರು ನೂರಕ್ಕೆ ೪೨ ರಷ್ಟು ಭೂಮಿಯನ್ನು ಆಳುತ್ತಿದ್ದಾರೆ. [illegible] ೬ ಕೋಟಿ ರೂಪಾಯಿಗಳ [illegible] ಪಡೆಯುತ್ತಾರೆ. [illegible] ದೈವದಿಂದ [illegible] ಪಡೆಯುತ್ತಾರೆ. [illegible]

—[illegible]



ಶ್ರೀಸುಮಧ್ವವಿಜಯ

ಕನ್ನಡ ಭಾಮಿನಿ ಷಟ್ಪದಿ ಸಹಿತ. ಶ್ರೀ ಜಯವಿಜಯದಾಸಾರ್ಯ ನಿಜಗುಣದಾಸ ಶ್ರೀ ವರದಕುಂದರ ವೆಂಕಟೇಶ ಕೃತ. ಪ್ರಕಾಶಕರು ಶ್ರೀ ಹನುಮಂತರಾವ ಕುಲಕರ್ಣಿ ಗೋರಾಬಾಳ ವಕೀಲ ಲಿಂಗಸುಗೂರು. ಭಾಗ. ೫-೬ ಒಟ್ಟು ಆರೂ ಭಾಗಗಳು ಪುಟ ೧೧೨೫. ಬೆಲೆ ೫ ರೂಪಾಯಿ ಟಪಾಲ ವೆಚ್ಚ ಬೇರೆ— ಇಡೀ ಗ್ರಂಥ ೬ ಭಾಗಗಳಲ್ಲಿ ಮುಗಿದಂತಾಯಿತು.

ಶ್ರೀ ನಾರಾಯಣ ಪಂಡಿತಾಚಾರ್ಯರು ಬರೆದ ಶ್ರೀ ಸುಮಧ್ವವಿಜಯ ಕಾವ್ಯ ಮಾಧ್ವರಿಗೆಲ್ಲ ಪರಿಚಿತ ಗ್ರಂಥ. ದ್ವೈತಸಿದ್ಧಾಂತ ಪ್ರತಿಷ್ಠಾಪನಾಚಾರ್ಯರಾದ ಶ್ರೀಮದಾನಂದತೀರ್ಥರ ದಿವ್ಯ ಚರಿತ್ರ, ಮಾಡಿದ ಅವತಾರ ಕಾರ್ಯ ಮೊದಲಾದವು ಸುಂದರ ರೀತಿಯಿಂದ ಈ ಹದಿನಾರು ಸರ್ಗಗಳಲ್ಲಿ ವರ್ಣಿತವಾಗಿವೆ ದ್ವೈತ ಸಿದ್ಧಾಂತದ ತಿರುಳನ್ನೂ ಸ್ವಲ್ಪದರಲ್ಲಿ ತಿಳಿಸಲಾಗಿದೆ. ಇಂಥ ಮಹಾಕಾವ್ಯವನ್ನು ಪ್ರತಿಯೊಬ್ಬ ಮಾಧ್ವ ಓದಿ ಅದರ ಸಾರವನ್ನು ಗ್ರಹಿಸುವದು, ನಿತ್ಯವೂ ಪಾರಾಯಣ ಮಾಡುವದು ಅವಶ್ಯ. ಇಂಥ ಮಹಾಕಾವ್ಯದ ಸವಿಯನ್ನು ಸಂಸ್ಕೃತ ಬಾರದಿದ್ದವರಿಗೆ ಸವಿಯಲು ಅವಕಾಶ ಮಾಡಿ ಕೊಡಲು ದಾಸವರ್ಯರು ಭಾಮಿನೀ ಷಟ್ಪದಿಯಲ್ಲಿ ತಿಳಿಯಾಗಿ ಕನ್ನಡದಲ್ಲಿ ಅನುವಾದಿಸಿದ್ದಾರೆ ಈ ಕನ್ನಡ ಅನುವಾದವು ಸುಲಲಿತವೂ ಅರ್ಥಗಂಭೀರವೂ ಆಗಿದ್ದು ಪ್ರತಿಯೊಬ್ಬನೂ ಇದನ್ನು ಓದಿ ಕೊಳ್ಳಬಹುದಾಗಿದೆ. ಇಂಥ ಉದ್ಗ್ರಂಥವನ್ನು ಶ್ರೀ ಗೋರಾಬಾಳ ವಕೀಲರು ಒಳ್ಳೇ ಪರಿಶ್ರಮದಿಂದ ಸಂಗ್ರಹಿಸಿ ಸಂಶೋಧನ ಮಾಡಿ ಪ್ರಕಟಿಸಿದ್ದು ಅತ್ಯಂತ ಅಭಿನಂದನೀಯವಾಗಿದೆ. ಇಂಥ ದೊಡ್ಡ ಪುಸ್ತಕದ ಬೆಲೆಯೂ ಕಡಮೆಯೆಂದೇ ಹೇಳಬಹುದು. ಮಾಧ್ವರೆಲ್ಲರೂ ಈ ಗ್ರಂಥವನ್ನು ಕೊಂಡು ಶ್ರೀ. ಗೋರಾಬಾಳರ ಪರಿಶ್ರಮವನ್ನು ಸಾರ್ಥಕಗೊಳಿಸುವುದಲ್ಲದೆ ಸುಮಧ್ವ ವಿಜಯದ ಸಾರವನ್ನು ಕನ್ನಡದಲ್ಲಿ ಸವಿದು ಪುನೀತರಾಗಬೇಕಾಗಿ ಸೂಚಿಸಬಯಸುತ್ತೇವೆ. ೬ನೇ ಭಾಗದ ಕೊನೆಯಲ್ಲಿ ಫಲಶ್ರುತಿ, ಅರ್ಪಣ, ಸಂಪ್ರದಾಯ ಪದ್ಧತಿ, ಹನುಮ, ಭೀಮ, ಮಧ್ವ ಸುವ್ವಾಲಿ, ಮಧ್ವಕವಚ, ಅಣು ಮಧ್ವಚರಿತ, ಮಂಗಳ ಮೊದಲಾದ್ದನ್ನು ಕೊಟ್ಟು ಹೆಚ್ಚು ಉಪಯುಕ್ತ ಮಾಡಲಾಗಿದೆ.

ಸಾಹಿತ್ಯ ವಿಹಾರ ಪುಸ್ತಕ ೨

ಶಿಕ್ಷಣಪ್ರಚಾರ ಸಾಹಿತ್ಯ ಸಮಿತಿ ವಿಜಾಪೂರ. ಕ್ರೌನ ಅಷ್ಟಪತ್ರದ೧೧೮+೯೨ ಪುಟಗಳು; ಬೆಲೆ ೧ ೧೪—೦ ಮಾರಾಟದ ಪೂರ್ಣ ಅಧಿಕಾರ ಪಡೆದವರು ಯುನಿಕ್ ಸ್ಟೋರ್ಟ್ಸ ವಿಜಾಪುರ.

ವಿಜಾಪುರದಲ್ಲಿ ಶ್ರೀ. ವಾ. ಹು. ನಾಗರಹಳ್ಳಿ, ಮಂಗಲಗಿ ಪ್ರಭೃತಿಗಳು ಕೂಡಿ ಶಿಕ್ಷಣ ಪ್ರಚಾರ ಸಾಹಿತ್ಯ ಸಮಿತಿಯನ್ನು ಸ್ಥಾಪಿಸಿಕೊಂಡು ವಿವಿಧ ರೀತಿಯಿಂದ ಕನ್ನಡ ಸಾಹಿತ್ಯದ ಪ್ರಚಾರ ಮಾಡುತಿರುವರು. ಆ ಸಮಿತಿಯ ಮೊದಲನೆಯ ಪ್ರಕಟನೆಯಾಗಿ ಈ ಪುಸ್ತಕ ಪ್ರಕಟವಾಗಿದೆ. ಕನ್ನಡ ಸಾಹಿತ್ಯದಲ್ಲಿ ಇಂಥ ಸಂಕಲನ ಗ್ರಂಥಗಳು ಕಡಮೆ. ಆ ದಿಸೆಯಲ್ಲಿ ಪ್ರಯತ್ನ ನಡೆಯುವದು ಅವಶ್ಯವಾಗಿದೆ. ವಿವಿಧ ಲೇಖಕರ ಭಾಷಾ ಶೈಲಿ. ವಿವಿಧ ವಿಷಯಗಳ ಪರಿಚಯ ಮೊದಲಾದವೆಲ್ಲ ಗೊತ್ತಾಗಬೇಕಾದರೆ ಇಂಥ ಸಂಕಲನ ಗ್ರಂಥಗಳು ಬೇಕು. ಗದ್ಯ ಭಾಗದಲ್ಲಿ ಕೇವಲ ಆಧುನಿಕ ಪ್ರಮುಖ ಲೇಖಕರ ಲೇಖನಗಳನ್ನು ಸಂಗ್ರಹಿಸಿದ್ದಾರೆ. ಪದ್ಯ ಭಾಗದಲ್ಲಿ ಹರಿಹರ, ಲಕ್ಷ್ಮೀಶ, ಕುಮಾರವ್ಯಾಸ ಮೊದಲಾದ ಹಳೆಯ ಕವಿಗಳ ಕಾವ್ಯಗಳ ಜೊತೆಗೆ ವಿ. ಸಿ. ಸಾಲಿ ರಾಮಚಂದ್ರರಾಯ, ಬೇಂದ್ರೆ ಮೊದಲಾದ ಆಧುನಿಕ ಕವಿಗಳ ಕವನಗಳನ್ನೂ ಸೇರಿಸಿದ್ದಾರೆ. ಲೇಖಕರಸಂಕ್ಷಿಪ್ತ ಪರಿಚಯ, ಸಾಮಾನ್ಯ ಪ್ರಶ್ನೆಗಳು ಮೊದಲಾದ್ದನ್ನು ಕೊಟ್ಟದ್ದರಿಂದ ವಿದ್ಯಾರ್ಥಿಗಳಿಗೆ ಅಭ್ಯಾಸಕ್ಕೆ ಅನುಕೂಲವಾಗಿದೆ. ಮಾಧ್ಯಮಿಕ ಶಾಲೆಗಳಲ್ಲಿ ಟ್ರೇನಿಂಗ ಕಾಲೇಜುಗಳಲ್ಲಿ ಅಭ್ಯಾಸಕ್ಕೆ ಅನುಕೂಲವಾಗಿದೆಂದು ಹೇಳಬಹುದು. ಆಯಾ ಶಾಲೆಗಳವರು ಇದರ ಉಪಯೋಗ ಮಾಡಿ ಕೊಂಡು ಸಮಿತಿಯವರು ಇದೇ ಬಗೆಯ ಸಾಹಿತ್ಯ ಸೇವೆಯನ್ನು ಮಾಡಲು ಅವರನ್ನು ಪ್ರೋತ್ಸಾಹಿಸಬೇಕಾಗಿ ಸೂಚಿಸುತ್ತೇವೆ.

ಗೋವಾಯಾತ್ರೆ

ಲೇಖಕರು ಶ್ರೀ ಎನ್. ಎಸ್. ಗದಗಕರರು. ಪ್ರಕಾಶಕರು ಶ್ರೀ ಬೆಳಗಾವಿ ರಾಮಚಂದ್ರರಾಯರು, ಮನೋರಂಜನ ಪ್ರಕಾಶನ ಸಮಿತಿ, ರೈಟರ ಓಣಿ, ಧಾರವಾಡ. ಪುಟ ೬೯, ಬೆಲೆ ೧ ರೂಪಾಯಿ.

ಮೇಲಿನದೊಂದು ಹರಟೆಗಳ ಸಂಗ್ರಹ. ಅದರಲ್ಲಿ ಗೋವಾಯಾತ್ರೆ, ಸಮಾಜ ಸಪ್ತರಂಗ, ಅಗಲಿಕೆ, ಸಲೂನ, ಮೂಗಿನ ಸಮಸ್ಯೆ, ಶಿರಸ್ತ್ರಾಣ, ಅಕೆ ಸೇಡು, ಕಿವಿ, ಭಾಷಣವೊ ಕಂಠಶೋಷಣವೊ?, ನಾನು ಟಾಂಗಾಸವಾರಿಯಲ್ಲಿದ್ದಾಗ ಎಂಬ ೧೧ ಪ್ರಬಂಧಗಳಿವೆ. ಮುನ್ನುಡಿಯಲ್ಲಿ ಹೇಳಿರುವಂತೆ ಲೇಖಕರು ಎಲ್ಲ ಕಡೆಯೂ ತಮ್ಮ ಹರಟೆಯ ಹದವನ್ನು ಕಾಯ್ದುಕೊಂಡಿದ್ದಾರೆ. ಈ ಹರಟೆಗಳು ಹಗುರು ಬರೆಹಗಳಲ್ಲಿ ಉತ್ತಮ ವರ್ಗಕ್ಕೆ ಸೇರಬಹುದಾಗಿವೆ. ಪುಸ್ತಕ ಒಟ್ಟಿನ ಮೇಲೆ ಚೆನ್ನಾಗಿದೆ. ಬರೆಹದ ಶೈಲಿ ಒಳ್ಳೆಯ ಮಾದರಿಯದಾಗಿದೆ.

ಶ್ರೀ ಬದರೀ ನಾರಾಯಣನ ಯಾತ್ರೆ

ಲೇಖಕರು ಶ್ರೀ ಕೃ. ನಾ. ಗೋಸಾವಿ, ಭಾರತಸಂಚಾರಿ ಅವರು. ಪ್ರಕಾಶಕರು ಶ್ರೀ ಕೆ. ಎಸ್. ಕುಲಕರ್ಣಿ, ಬುಕ್ ಡಿಪೋ, ಸ್ಟೇಶನರೋಡ್ ಹುಬ್ಬಳ್ಳಿ. ಪುಟ ೩೦. ಬೆಲೆ ಎಂಟಾಣೆ.

ಇದೊಂದು ಯಾತ್ರಾ ಸಾಹಿತ್ಯ. ಇದರಲ್ಲಿ ೧೦ ಪ್ರಕರಣಗಳಿವೆ. ಹಿಮಾಲಯ, ಹರಿದ್ವಾರ, ಹೃಷೀಕೇಶ, ಲಕ್ಷ್ಮಣ ಝೂಲಾ, ದೇವಪ್ರಯಾಗ ಶ್ರೀನಗರ, ರುದ್ರಪ್ರಯಾಗ, ತ್ರಿಯುಗೀನಾರಾಯಣ, ಕೇದಾರ ನಾಥ, ಊಖೀಮಠ, ತುಂಗನಾಥ, ಚಮೋಲಿ, ಜೋಶೀಮಠ, ವಿಷ್ಣುಪ್ರಯಾಗ, ಪಾಂಡುಕೇಶ್ವರ, ಬದರಿ, ವಸುಧಾರಾ, ನಂದಪ್ರಯಾಗ, ಕರ್ಣಪ್ರಯಾಗ, ಈ ಸ್ಥಳಗಳ ವರ್ಣನೆಯಿದೆ; ಯಾತ್ರಿಕರಿಗೂ ವಿದ್ಯಾರ್ಥಿಗಳಿಗೂ ಇತರ ಪ್ರವಾಸಿಕರಿಗೂ ರಸಿಕರಿಗೂ ಬೇಕಾದ ವಿಷಯ ವಿವರಗಳಿಂದ ಕೂಡಿದೆ. ಹಿಂದುಸ್ತಾನದ ಹಿಂದುಗಳು ಕಲಕಲಾಂತರದಿಂದ ಪುಣ್ಯಸ್ಥಳಗಳೆಂದು ತಿಳಿದ ಪ್ರಕೃತಿಮನೋಹರವಾದ ಸ್ಥಳಗಳ ಪರಿಚಯ ಮಾಡಿಕೊಡುವ ಈ ಗ್ರಂಥವು ಸ್ವಾಗತಾರ್ಹವಿದೆ.

ವಿಪರ್ಯಾಸ

ಬರೆದವರು ಪರ್ವತವಾಣಿ ಅವರು. ಪ್ರಕಾಶಿಸಿದವರು ಛಾಯಾ ಪ್ರಕಟನಾಲಯ, ಬೆಂಗಳೂರು ಅವರು. ಪುಟ ೩೪, ಬೆಲೆ ಎಂಟಾಣೆ.

“ ವಿಪರ್ಯಾಸ ” ವು ಶೇಕ್ಸ್‌ಪಿಯರನ “Comedy of Errors” ಎಂಬ ನಾಟಕದ ಅನುವಾದ. ಇದು ಉಕ್ತ ನಾಟಕದ ಪೂರ್ಣಾನುವಾದವಲ್ಲವೆಂದೂ ಮೂಲದಲ್ಲಿಯ ಸನ್ನಿವೇಶವನ್ನು ಇಲ್ಲಿ ಇದ್ದಕ್ಕಿದ್ದ ಹಾಗೆ ತರುವುದು ಕಷ್ಟವಾದುದರಿಂದ ಬೇರೆ ರೀತಿಯಿಂದ ನಿರೂಪಿಸಲಾಗಿದೆಯೆಂದೂ ಶ್ರೀ ಪರ್ವತವಾಣಿಯವರೇ ಮೊದಲ ಮಾತಿನಲ್ಲಿ ಒಪ್ಪಿಕೊಂಡಿದ್ದಾರೆ. ಹಾಸ್ಯಪ್ರಧಾನವಾದ ಈ ಪ್ರಹಸನವು ಚೆನ್ನಾಗಿದೆ.

ಪಟಾಚಾರಾ

ಬರೆದವರು ಶ್ರೀ ಜಿ. ಪಿ. ರಾಜರತ್ನಂ ಅವರು. ಪ್ರಕಾಶಕರು ಸತ್ಯಶೋಧನ ಪುಸ್ತಕ ಭಾಂಡಾರ, ಕೋಟೆ ಬೆಂಗಳೂರು ಅವರು. ಪುಟ ೧೦೮. ಬೆಲೆ ೧ ರೂ.

ಇದೊಂದು ಬೌದ್ಧಧರ್ಮ ಗ್ರಂಥಗಳಿಂದ ಆಯ್ದ ಕಥೆಗಳ ಸಂಗ್ರಹ. ಸಂಗ್ರಹದಲ್ಲಿ ಒಟ್ಟು ೧೬ ಕಥೆಗಳಿವೆ. ಇಲ್ಲಿ ಬೌದ್ಧ ತತ್ವಗಳನ್ನು ಸುಲಭಗ್ರಾಹ್ಯವಾಗಿ ಕಥೆಗಳ ಮೂಲಕ ವಿವರಿಸಲಾಗಿದೆ. ಹಳೆಯ ನೀತಿ ಕಥೆಗಳ ಮಾದರಿಯವಿವು; ಧರ್ಮನೀತಿಗಳನ್ನು ಚೆನ್ನಾಗಿ ಸ್ವಾರಸ್ಯವಾಗಿ ಮುಂದಿಟ್ಟು ಮಾಡಿಕೊಡುತ್ತವೆ. ಈ ದೃಷ್ಟಿಯಿಂದ ಸಂಗ್ರಹವನ್ನು ಎಲ್ಲರೂ ಓದಬೇಕು. ಬೌದ್ಧಸಾಹಿತ್ಯದ ಅನೇಕ ರತ್ನಗಳನ್ನು ಕನ್ನಡಕ್ಕೊದಗಿಸಿಕೊಟ್ಟ ಶ್ರೀ ಜಿ. ಪಿ ರಾಜರತ್ನಂರವರ ಸಾಂಪ್ರತ ಪ್ರಯತ್ನವು ಶ್ಲಾಘ್ಯವಾದುದು.

ಕಥಾವಳಿ (ವಾರ್ಷಿಕ ಸಂಚಿಕೆ)

ಸಂಪಾದಕರು ಮತ್ತು ಪ್ರಕಾಶಕರು ಶ್ರೀ. ಟಿ. ವಿ. ಗುಪ್ತ. ಮೋಹನ ಪ್ರೆಸ್, ಬೆಂಗಳೂರು ನಗರ. ಪುಟ ೨೨೯. ಬೆಲೆ ೧ ರೂಪಾಯಿ.

ಮಾನ್ಯ ಲೇಖಕರ ಕಥೆ ಕವಿತೆ ಪ್ರಬಂಧಗಳಿಂದಲೂ ಭಾವಚಿತ್ರಗಳಿಂದಲೂ ತುಂಬಿದ ಈ ವಿಶೇಷಾಂಕಕ್ಕೆ ಸುಸ್ವಾಗತ. ನಂದಾದೀಪ, ಕೆಚ್ಚು ಮೊದಲಾದ ಕವಿತೆಗಳೂ ಹರಿಗೋಲು, ದಫೇದಾರ ಅಜೀಜಖಾನ್ ಮುಂತಾದ ಸೊಗಸಾದ ಕಥೆಗಳೂ ಏಳಿದು ಹುಚ್ಚು, ಮನಸ್ಸಿದ್ದಲ್ಲಿ ಮಾರ್ಗ ಎಂಬ ಹರಟೆಗಳೂ ಅಹಂಕಾರ ಮತ್ತು ಸಮತಾವಾದ, ಸ್ತ್ರೀಯರಿಗೆ ವ್ಯಕ್ತಿತ್ವವಿಲ್ಲವೆ? ಎಂಬ ವಿಚಾರಗಾಂಭೀರ್ಯವುಳ್ಳ ಪ್ರಬಂಧಗಳೂ ಈ ಸಂಚಿಕೆಯನ್ನಲಂಕರಿಸಿವೆ. ಬಹಳ ಅಂದವಾಗಿ ಮುದ್ರಿಸಿದ ವರ್ಣಚಿತ್ರ ರಂಜಿತವಾದ ‘ಕಥಾವಳಿ’ ಬಹಳ ಮುದ್ದಾಗಿದೆ; ಕನ್ನಡಿಗರೆಲ್ಲರೂ ಓದಿ ಸಂತೋಷಪಡಬಹುದಾಗಿದೆ.

ಅಂತರಾತ್ಮ (ಮಾಸಿಕ)

ಸಂಪಾದಕರು ಮತ್ತು ಪ್ರಕಾಶಕರು ಸ್ವಾಮಿ ಮುರುಘಾನಂದರವರು. ಪುಟ ೨೨, ಬೆಲೆ ಎಂಟಾಣೆ: ವಾ ಚ. ೬॥ ರೂ.

ಮೇಲಿನದೊಂದು ಮುಂಬಯಿಯಿಂದ ಹೊರಟ ಹೊಸ ಮಾಸಿಕ ಪತ್ರಿಕೆ; ಧಾರ್ಮಿಕ ವಿಷಯಗಳಿಗೆ ಮೀಸಲಾಗಿದೆ. ಮೊದಲನೆಯ ಸಂಚಿಕೆಯು ಪದ್ಯ ಮತ್ತು ಪ್ರಬಂಧಗಳಿಂದ ತುಂಬಿದೆ. ಮುಖಪತ್ರದ ವಿವೇಕಾನಂದರ ಭಾವಚಿತ್ರದ ಕೆಳಗೆ “ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ನಿಬೋಧತ” ಎಂಬ ಸಂಸ್ಕೃತದ ಸಾಲು ಮುಂದಿನ ಸಂಚಿಕೆಯಲ್ಲಾದರೂ ಶುದ್ಧ ರೂಪದಲ್ಲಿ ಮುದ್ರಿತವಾದೀತೆಂದು ಆಶಿಸುತ್ತೇವೆ. ಇಂತಹ ಮುದ್ರಾದೋಷಗಳು ತ್ಯಾಜ್ಯ. ಉಳಿದುದು ಎಲ್ಲ ಚೆನ್ನಾಗಿದೆ.

ವಿದ್ಯಾದಾಯಿನಿ ಹೈಸ್ಕೂಲು ಸುರತ್ಕಲ್, ದ. ಕ.

೧೯೪೬—೪೭ ರ ವರದಿ

ಈ ವಾರ್ಷಿಕ ವರದಿಯಲ್ಲಿ ಹೈಸ್ಕೂಲಿನ ಪರ್ಣೋತ್ಸವ, ಹೊಸ ತರಗತಿಗಳು, ಅಡತಿತ, ಉಪಾಧ್ಯಾಯವರ್ಗ, ಶಾಲೆಯ ವಿವಿಧ ಕಾರ್ಯಕಲಾಪಗಳು, ವಿದ್ಯಾರ್ಥಿ ವಸತಿಗೃಹ ಮೊದಲಾದುವುಗಳ ವಿವರಕೊಟ್ಟಿದೆ. ಶಾಲೆಯ ಪ್ರಗತಿಯನ್ನು ತಿಳಿಯಬಯಸುವವರು ಇದನ್ನು ಆಗತ್ಯವಾಗಿ ಓದಬೇಕು.



೫ ಪ್ರಶ್ನೆಗಳು

೫ ಪ್ರಶ್ನೆಗಳನ್ನು ಬರೆದು ಕವರನಲ್ಲಿಟ್ಟು ಸೀಲ್ ಮಾಡಿ ಕಳುಹಿಸಿದರೆ ದೇವೀ ಮಹಿಮೆಯಿಂದ ಉತ್ತರ ರೂಪದಲ್ಲಿ ಭವಿಷ್ಯ ಬರೆದು, ಅದೇ ನಿಮ್ಮ ಕವರಿನೊಂದಿಗೆ ರೂ. ೨ಕ್ಕೆ ವ್ಹಿ. ಪಿ. ಮಾಡಲಾಗುವದು.

ಸಿದ್ಧಾಂತಿ ಎಂ. ಆರ್. ಸುಬ್ಬಯ್ಯ,
ನಂ. ೧೨, ಕೆಂಚನಾಯಕನಗಲ್ಲಿ
ಗಾಣಿಗರಪೇಟೆ, ಬೆಂಗಳೂರು ಸಿಟಿ.

ಚಂದಾದಾರರಲ್ಲಿ ವಿನಂತಿ

—೦—

ಯಾವದೇ ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ. ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ತಿರಸ್ಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆ ವೆಚ್ಚ ಸಹಿತ ಚಂದಾ ಹಣ ಮುಂಗಡ

೧ ವರ್ಷಕ್ಕೆ	೬—೪—೦
೬ ತಿಂಗಳಿಗೆ	೩—೪—೦
೩ ,,	೧—೧೨—೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೬ ಆಣೆ ಹೆಚ್ಚಿಗೆ ಬೀಳುವದು.

ವ್ಯವಸ್ಥಾಪಕ.

ಸಾದರ ಸ್ವೀಕಾರ

೧) ಸಚಿತ್ರ ನವೀನ ವ್ಯಾಕರಣ ಪಾಠಗಳು

ಲೇಖಕರು— ಬಿ. ಚಿಕ್ಕಣ್ಣಯ್ಯ. ಪ್ರಕಾಶಕರು— ಎಸ್. ಎಸ್. ಎನ್. ಬುಕ್ ಡಿಪೋ ಬೆಂಗಳೂರ ನಗರ. ಪುಟ ೯೦, ಬೆಲೆ ೦—೮—೦

೨) ಅರ್ಜುನ ವಿಜಯ

ಲೇಖಕರು— ಎಂ. ಜಿ. ನಂಜುಂಡಾರಾಧ್ಯ, ಪ್ರಾಧ್ಯಾಪಕರು ಸಂಸ್ಕೃತ ಕಾಲೇಜ ಬೆಂಗಳೂರ. ಪ್ರಕಾಶಕರು – ಪ್ರಬೋಧ ಪುಸ್ತಕ ಮಾಲೆ ಬೆಂಗಳೂರ. ಪುಟ ೧೦೦ ಬೆಲೆ ೧-೦-೦

೩) ರಾಬಿನ್ ಹುಡ್

ಲೇಖಕರು— ಜಿ. ಪಿ. ರಾಜರತ್ನಂ. ಪ್ರಕಾಶಕರು— ಎಸ್. ಎಸ್. ಎನ್ ಬುಕ್‌ಡಿಪೋ ನ್ಯೂ ಮಾರ್ಕೆಟ ಬೆಂಗಳೂರ ನಗರ. ಪುಟಗಳು ೧೩೬, ಬೆಲೆ ೧-೮-೦.

೪) ಆಲಿವರ್ ಟ್ವಿಸ್ಟ

ಸಂಗ್ರಹಕಾರರು— ಜಿ. ಪಿ. ರಾಜರತ್ನಂ, ಪ್ರಕಾಶಕರು— ಎಸ್. ಎಸ್. ಎನ್. ಬುಕ್ ಡಿಪೋ. ಪುಟಗಳು ೧೬೦, ಬೆಲೆ ೧-೮-೦

೫) ಕರ್ನಾಟಕದ ಹಿತಚಿಂತನೆ

ಲೇಖಕರು— ಆ. ನ. ಕೃಷ್ಣರಾಯರು ಪ್ರಕಾಶನ— ಎಸ್. ಎಸ್. ಎನ್. ಬುಕ್ ಡಿಪೋ. ಪುಟಗಳು ೯೩ ಬೆಲೆ ೧-೦-೦

೬) ಕನ್ನಡದಲ್ಲಿ ವಿಡಂಬನ ಸಾಹಿತ್ಯ

ಲೇಖಕರು— ಎಚ್. ಎಸ್. ಕೃಷ್ಣಸ್ವಾಮಿ ಪ್ರಕಾಶಕರು— ಎಸ್. ಎಸ್. ಎನ್. ಬುಕ್‌ಡಿಪೋ. ಪುಟಗಳು ೪೦ ಬೆಲೆ ೦-೬-೦.

೭) ಕಲಿ ಕರ್ಣ

ಲೇಖಕರು— ಜಿ. ವರದರಾಜರಾವ ಎಂ. ಎ. ಪ್ರಕಾಶಕರು— ಎಸ್. ಎಸ್. ಎನ್. ಬುಕ್‌ಡಿಪೋ. ಪುಟಗಳು ೧೫೦,
ಬೆಲೆ ೧-೮-೦.

೮) ಸೊಹ್ರಾಬ್ ಮತ್ತು ರುಸ್ತುಮ್

ಅನುವಾದ— ಎಲ್. ಗುಂಡಪ್ಪ ಎಂ. ಎ. ಪ್ರಕಾಶಕರು— ಎಸ್. ಎಸ್. ಎಸ್. ಬುಕ್‌ಡಿಪೋ. ಪುಟಗಳು ೧೦೦ ಬೆಲೆ ೧-೪-೦

೯) ಪುಣ್ಯ ಭೂಮಿ

ಲೇಖಕರು— ಎಸ್. ಎಸ್. ವೀರಪ್ಪ ಪ್ರಕಾಶಕರು— ಎಸ್. ಎಸ್. ಎನ್. ಬುಕ್‌ಡಿಪೋ. ಪುಟಗಳು ೧೯೦,
ಬೆಲೆ ೨-೦-೦.

೧೦) ರಘುನಾಥನ ಸಾಹಸ

ಲೇಖಕರು— ಸಿ. ಕೆ. ವೆಂಕಟರಾಮಯ್ಯ ಎಂ. ಎ. ಎಲ್. ಎಲ್. ಬಿ. ಪ್ರಕಾಶಕರು— ಎಸ್. ಎಸ್. ಎನ್. ಬುಕ್‌ಡಿಪೋ.
ಪುಟಗಳು ೧೩೦ ಬೆಲೆ ೧—೪—೦

೧೧) ಸಂಸ್ಕೃತ ನಾಟಕ ಕಥೆಗಳು

(ಭಾಗ ೨)

ಲೇಖಕರು— ಎಂ. ಎಸ್. ಸುಬ್ರಹ್ಮಣ್ಯ ಶಾಸ್ತ್ರಿ. ಪ್ರಕಾಶಕರು—ಎಸ್. ಎಸ್. ಎನ್. ಬುಕ್‌ಡಿಪೋ. ಪುಟಗಳು ೧೫೦,
ಬೆಲೆ ೧-೮-೦

೧೨) ಮಕ್ಕಳ ಪದ್ಯಾವಲಿ

(ಭಾಗ ಒಂದು)

ಬರೆದವರು— ಚೆನ್ನಪ್ಪ ಬಸಲಿಂಗಪ್ಪ ಪಾವಟೆ, ಶಿಕ್ಷಕರು ಟ್ರೇನಿಂಗ ಕಾಲೇಜ ಧಾರವಾಡ. ಬಸವರಾಜ ಅಂಗಡಿ ಉಪಶಿಕ್ಷಕರು ಬಂಕಾಪುರ. ಪ್ರಕಾಶಕರು— ಬಿ. ಪಿ. ಕಾಳೆ. ಮದಿಹಾಳ ಧಾರವಾಡ.
ಪುಟ ೬೦ ಬೆಲೆ ೦—೫—೦

೧೩) ವಿಶ್ವಮೇಧ

ಲೇಖಕರು—. ಡಿ. ರೇಣುಕಾಚಾರ್ಯ. ಪ್ರಕಾಶಕರು— ಭಾರತೀ ಪ್ರಕಟನಾಲಯ ಅವೆನ್ಯೂ ರೋಡ ಬೆಂಗಳೂರ.
ಪುಟ ೧೦೬ ಬೆಲೆ ೧-೮-೦

ಸ್ವಾತಂತ್ರ್ಯೋತ್ಸವಕ್ಕೆ ಗೋದಿ

ಜನತೆಯ ಬೇಡಿಕೆಯನ್ನು ಮನ್ನಿಸಿ ಧಾರವಾಡ ಜಿಲ್ಲಾ ಕಲೆಕ್ಟರರು ಸ್ವಾತಂತ್ರ್ಯೋತ್ಸವಕ್ಕಾಗಿ ಪ್ರತಿ ಯುನಿಟ್ಟಿಗೆ ಕಾಲು ಶೇರಿನಂತೆ ಗೋದಿ—ಗೋದಿ ಹಿಟ್ಟು ಕೊಡುವದನ್ನು ನಿರ್ಧರಿಸಿದ್ದಾರೆ. ಇದೇ ರವಿವಾರದಿಂದ ಈ ಗೋದಿ ಸಿಕ್ಕುವದು

ಸಂಪಾದಕೀಯ ಟೀಕೆಟಿಪ್ಪಣಿಗಳು

ಕರ್ನಾಟಕದ ಸಮಸ್ಯೆಗಳು

ಅಗಸ್ಟ ೧೫ ರಿಂದ ಸ್ಥಾಪಿತವಾಗುವ ಸಾಮಂತ ಸರಕಾರ ಭಾಷಾನ್ವಯ ಪ್ರಾಂತರಚನೆಯ ಕ್ರಮವನ್ನು ಕೈಕೊಳ್ಳುವ ಗೊತ್ತುವಳಿಯನ್ನು ಸ್ವೀಕರಿಸಬೇಕೆಂದು ಘಟನಾ ಸಮಿತಿಯ ಸಂಯುಕ್ತ ಸಮಿತಿಯವರು ಕೇಳಿಕೊಂಡಿರುವರು. ಸಾಮಂತ ಸರಕಾರದವರು ಆ ಬಗೆಯ ಗೊತ್ತುವಳಿಯನ್ನು ಮಾಡಿದ್ದಾದರೆ ಕರ್ನಾಟಕವು ೧೯೪೮ ರಲ್ಲೊ ೪೯ ರಲ್ಲೊ ಸ್ವತಂತ್ರ ಪ್ರಾಂತವಾಗಬಲ್ಲುದು. ಆ ಸ್ವತಂತ್ರ ಪ್ರಾಂತವಾಗಬೇಕಾದರೆ, ಆದಾಗ, ಆಡಳಿತವನ್ನು ಸುಸೂತ್ರ ಸಾಗಿಸಿಕೊಂಡು ಹೋಗಬೇಕಾದರೆ ಕನ್ನಡಿಗರು ಈಗಿನಿಂದಲೆ ಸಿದ್ಧತೆಯನ್ನು ಮಾಡಬೇಕಾದುದು ಅತ್ಯವಶ್ಯವಾಗಿದೆ. ಸ್ವತಂತ್ರ ಆಡಳಿತವನ್ನು ಸಾಗಿಸಿಕೊಂಡು ಹೋಗಬೇಕಾದರೆ ಎಷ್ಟೊಂದು ಅನುಕೂಲತೆಗಳು ಸೌಕರ್ಯಗಳು ಬೇಕು, ಅಡ್ಡಿ ಅಡಚಣೆಗಳೇನು ಮುಂತಾದ್ದನ್ನು ಪಾಕಿಸ್ತಾನ ಸ್ಥಾಪಕರು ಈಗ ಅನುಭವಿಸುತ್ತಿರುವುದರಿಂದ ಕಂಡುಕೊಳ್ಳಬಹುದಾಗಿದೆ. ಈ ಸಂಬಂಧದಲ್ಲಿ ಶ್ರೀ ಪಾಟೀಲ ಕಲ್ಲನಗೌಡರು ಹುಬ್ಬಳ್ಳಿ ವಾಣಿಜ್ಯ ಕಾಲೇಜಿನ ಕರ್ನಾಟಕ ಸಂಘದ ಪ್ರಾರಂಭೋತ್ಸವವನ್ನು ಜರುಗಿಸುತ್ತ ಒಳ್ಳೆ ಮನನೀಯ ವಿಚಾರಗಳನ್ನು ಹೇಳಿರುವರು. ಸ್ವತಂತ್ರಪ್ರಾಂತವಾಗಲಿರುವ ಕರ್ನಾಟಕದ ರಾಜಧಾನಿಯಾಗತಕ್ಕ ಸ್ಥಳವಾವುದು, ಅದಕ್ಕೆ ಎಲ್ಲ ಬಗೆಯ ಅನುಕೂಲತೆಗಳಿವೆಯೋ? ಕರ್ನಾಟಕದಲ್ಲಿ ಸೇರತಕ್ಕ ಮಂಗಳೂರು, ಕೊಡಗು ಮೊದಲಾದ ಭಾಗಗಳಿಗೆ ಈ ರಾಜಧಾನಿ ನಗರದಿಂದ ಸಂಪರ್ಕ ಸೌಕರ್ಯವಿದೆಯೆ, ಆಡಳಿತವನ್ನು ಸಾಗಿಸಿಕೊಂಡು ಹೋಗಬೇಕಾದರೆ ಕರ್ನಾಟಕದ ಕಾರ್ಯಕರ್ತರು ಮೇಲಧಿಕಾರಿಗಳು ಎಷ್ಟು ಬೇಕು, ಎಷ್ಟು ಜನರಿರುವರು ಇದೆಲ್ಲವನ್ನು ಅಂಕಿಸಂಖ್ಯೆಗಳಿಂದ ಸಿದ್ಧಪಡಿಸಬೇಕಾಗಿಲ್ಲವೆ? ವಿಶ್ವವಿದ್ಯಾಲಯ, ಅದಕ್ಕೆ ಪೋಷಕವಾಗುವಂಥ ವಿವಿಧ ಕಾಲೇಜುಗಳ ಸ್ಥಾಪನೆ ಅವಶ್ಯವಾಗಿಲ್ಲವೆ? ಇವೆಲ್ಲ ಸಮಸ್ಯೆಗಳನ್ನು ಪರಿಶೀಲಿಸಿ ಕಾರ್ಯಪ್ರವೃತ್ತರಾಗಬೇಕಾದರೆ ಅಧಿಕಾರೀತರ ಸೆಕ್ರೆಟರಿಯೆಟ ಈಗಿನಿಂದಲೆ ಕಾರ್ಯಪ್ರವೃತ್ತವಾಗಬೇಕು; ಇಷ್ಟೇ ಅಲ್ಲ, ಪ್ರಾದೇಶಿಕ ಮಂತ್ರಿಮಂಡಳ ಕೂಡ ಸ್ಥಾಪಿತವಾಗಿ ಆ ದಿಸೆಯಲ್ಲಿ ಕಾರ್ಯವನ್ನು ಪ್ರಾರಂಭಿಸಬೇಕು. ತಜ್ಞರ ಸಮಿತಿಗಳು ಕೆಲಸವನ್ನು ಪ್ರಾರಂಭಿಸಬೇಕು, ಪ್ರಚಾರ ಕಾರ್ಯವೂ ನಡೆಯಬೇಕು ಎಂದು ಮುಂತಾಗಿ ಶ್ರೀ ಕಲ್ಲನಗೌಡರು ಹೇಳಿದರು. ಇವೆಲ್ಲ ಸಮಸ್ಯೆಗಳ ಬಗೆಗೆ ಕರ್ನಾಟಕದ ಕಾರ್ಯಕರ್ತರು ವಿಚಾರ ಮಾಡಿ ಭಾವೀ ಸ್ವತಂತ್ರ ಕರ್ನಾಟಕ ಪ್ರಾಂತದ ಸಿದ್ಧತೆಯನ್ನು ಈಗಿನಿಂದಲೆ ಮಾಡಲು ಮುಂದಾಗುವದು ಮುತ್ಸದ್ದಿತನವಲ್ಲವೆ?

ಸಕಾಲಿಕ ಎಚ್ಚರಿಕೆ

ಪರಕೀಯರ ಆಡಳಿತದ ದೋಷದಿಂದಲೊ ಯುದ್ಧಜನ್ಯ ಪರಿಸ್ಥಿತಿ ಮೂಲಕವೊ ಮತ್ತಾವ ಕಾರಣಕ್ಕಾಗಿಯೊ ಇಂದು ಹಿಂದುಸ್ತಾನದಲ್ಲಿ ಲಂಚಗುಳಿತನ ತಾಂಡವನೃತ್ಯ ನಡೆಸಿದೆ. ದೇಶದಲ್ಲಿ ಬೇರೂರಿದ ಲಂಚಗುಳಿತನದ ಬಗ್ಗೆ ರಿಜರ್ವ ಬ್ಯಾಂಕಿನವರು ಸರಕಾರಕ್ಕೆ ಎಚ್ಚರಿಕೆ ಕೊಟ್ಟಿರುತ್ತಾರೆ. ಸರಕಾರದ ಆರ್ಥಿಕ ಆಡಳಿತವನ್ನು ನಡೆಸುವ ಭಾರ ಸಾಧಾರಣವಾಗಿ ರಿಜರ್ವ ಬ್ಯಾಂಕಿನ ಮೇಲೆಯೆ ಇದೆ. ಇಂಥ ರಿಜರ್ವಬ್ಯಾಂಕಿನವರು ಕೊಟ್ಟ ಎಚ್ಚರಿಕೆಯನ್ನು ಕಡೆಗಣಿಸುವದು ಇಷ್ಟವಾಗಲಾರದು. ಪರದೇಶಗಳಿಗೆ ಕಳಿಸುವ ಸರಕುಗಳ ಬೆಲೆಯು ಅಲ್ಲಿಂದ ಬರುವ ಸರಕುಗಳ ಬೆಲೆಗಿಂತ ಕಡಿಮೆಯಾದರೆ ಆ ದೇಶಕ್ಕೆ ವಿಪರೀತ ಹಾನಿ ಸಂಭವಿಸುವದುಂಟು. ರಿಜರ್ವ ಬ್ಯಾಂಕಿನವರು ಪ್ರಕಟಿಸಿದ ಅಂಕೆ ಸಂಖ್ಯೆಗಳನ್ನು ನೋಡಿದರೆ ಪರದೇಶದ ಕೂಡ ಹಿಂದುಸ್ತಾನ ನಡೆಸಿದ ವ್ಯಾಪಾರ ಕಡಿಮೆಯಾಗಿದೆಂಬುದು ಕಂಡು ಬರುವದು. ೧೯೪೭ ನೇ ಮಾರ್ಚಕ್ಕೆ ಮುಗಿಯುವ ಒಂಭತ್ತು ತಿಂಗಳಲ್ಲಿ ೪೮೦ ಕೋಟಿ ರೂಪಾಯಿಗಳ ಸರಕು ಹಿಂದುಸ್ತಾನಕ್ಕೆ ಬಂದಿತು; ಕಳೆದ ವರ್ಷ ಇದೇ ಅವಧಿಯಲ್ಲಿ ೩೯೦ ಕೋಟಿ ರೂಪಾಯಿಗಳ ಸರಕು ಹಿಂದುಸ್ತಾನಕ್ಕೆ ಬಂದಿತ್ತು. ಇದನ್ನು ನೋಡಿದರೆ ಈ ವರ್ಷ ಭಾರತವು ೯೦ ಕೋಟಿ ರೂಪಾಯಿಗಳನ್ನು ಪರದೇಶಗಳಿಗೆ ಹೆಚ್ಚಿಗೆ ಕಳಿಸಿತೆಂಬುದು ಗೊತ್ತಾಗುವದು. ನಮ್ಮಲ್ಲಿಂದ ಪರದೇಶಗಳಿಗೆ ಕಳಿಸಿದ ಸರಕುಗಳ ಬೆಲೆ ೯೦ ಲಕ್ಷ ರೂಪಾಯಿ ಮಾತ್ರ! ಅದರ ಹಿಂದಿನ ವರುಷದಲ್ಲಿ ೩೫ ಕೋಟಿ ರೂ. ಗಳ ಸರಕನ್ನು ಪರದೇಶಗಳಿಗೆ ಕಳಿಸಲಾಗಿತ್ತು. ಅಂದರೆ ೩೪ ಕೋಟಿ ರೂಪಾಯಿಗಿಂತ ಹೆಚ್ಚು ಹಣ ನಮ್ಮ ದೇಶಕ್ಕೆ ಬಂದಿತ್ತೆಂಬುದು ಇದರಿಂದ ಗೊತ್ತಾಗುವದು. ನಮ್ಮ ವ್ಯಾಪಾರ ಎಷ್ಟು ಕುಗ್ಗಿದೆಂಬುದು ಇದರಿಂದ ಗೊತ್ತಾಗುವದು. ಆಹಾರ ಪದಾರ್ಥಗಳನ್ನು ಕೂಡ ನಾವು ಪರದೇಶಗಳಿಂದ ತರಿಸುವ ಅನಿಷ್ಟ ಪ್ರಸಂಗ ಬಂದುದನ್ನು ನೋಡಿದರೆ ಯಾವ ಸ್ವಾಭಿಮಾನಿ ಭಾರತೀಯನ ಅಂತಃಕರಣ ದುಃಖದಿಂದ ಉಕ್ಕಿ ಬರಲಿಕ್ಕಿಲ್ಲ!! ನೋಟುಗಳ ಚಲಾವಣೆ ಹೆಚ್ಚಿದಂತೆ ಬೆಲೆಗಳು ಏರುತ್ತವೆ, ಆಹಾರದ ಧಾನ್ಯಗಳ ಕೊರತೆ ಹೆಚ್ಚಿದಂತೆ ಬೆಲೆಗಳು ಏರುತ್ತವೆ ಮತ್ತು ಬೆಲೆ ನಿಯಂತ್ರಣ ಅವಶ್ಯವಾಗುತ್ತದೆ. ಈ ನಿಯಂತ್ರಣದ ಆಡಳಿತ ಚೆನ್ನಾಗಿ ಸಾಗದ್ದರಿಂದ ಲಂಚಗುಳಿತನ ಹೆಚ್ಚುತಿದೆ, ಹೆಚ್ಚಿದೆ. ಅದರ ಜತೆಗೆ ಕಳ್ಳಪೇಟೆಯೂ ಸಾಗುತಿದೆ, ಯಥೇಷ್ಟ ಸಾಗಿದೆ. ಹುಟ್ಟುವಳಿಯ ಪ್ರಮಾಣ ಇಳಿದದ್ದರಿಂದ ಕೊರತೆ ಹೆಚ್ಚಿದೆ. ಇದೆಲ್ಲದರ ಹೊಣೆ ಸರಕಾರದ ಮೇಲಿದೆಂದು ರಿಜರ್ವ ಬ್ಯಾಂಕಿನವರು ಹೇಳಿದ್ದು ಉಚಿತವಾಗಿದೆ. ಇಷ್ಟು ದಿನ ಪರಕೀಯ ಸರಕಾರವಿದ್ದಿತು, ಏನೋ ಆಗಿ ಹೋಯಿತು. ಈಗ ನಮ್ಮ ಸರಕಾರವೆ ಬಂದುದರಿಂದ ಇದೆಲ್ಲ ಅನರ್ಥಪರಂಪರೆ ಮಾಯವಾಗಿ ಲಂಚಗುಳಿತನ ಹೋಗಿ ಕಳ್ಳಪೇಟೆ ಇಲ್ಲದಂತಾಗಿ ಹಿಂದುಸ್ತಾನದ ವ್ಯಾಪಾರೋದ್ಯೋಗಾಭಿವೃದ್ಧಿಯಾಗಲೆಂದು ಹಾರಯಿಸಬೇಕಾಗಿದೆ.

ಸೂಕ್ತ ಸಲಹೆ

ಹಿಂದುಸ್ತಾನದ ವ್ಯಾಪಾರೋದ್ಯೋಗಗಳ ಅಭಿವೃದ್ಧಿಯ ಸಂಬಂಧದಲ್ಲಿ ರಿಝರ್ವ ಬ್ಯಾಂಕಿನ ಗವರ್ನರರಾದ ಸರ್ ಚಿಂತಾಮಣ ದೇಶಮುಖರವರು ಕೆಲ ಮಹತ್ವದ ಸೂಚನೆಗಳನ್ನು ಮಾಡಿರುವರು. ಆರ್ಥಿಕ ಪ್ರಪಂಚದಲ್ಲಿ ಹಿಂದುಸ್ತಾನ ಅಖಂಡವಾಗಿರಬೇಕೆಂದು ಅವರು ಅತ್ಯಂತ ಮಹತ್ವದ ಸೂಚನೆಮಾಡಿದ್ದಾರೆ. ಶಾಂತಿ ಅವಿಭಾಜ್ಯವಾಗಿದ್ದಂತೆ ಆರ್ಥಿಕ ಅಭಿವೃದ್ಧಿಯೂ ಅವಿಭಾಜ್ಯವಾಗಿದೆಂದು ಅವರು ಹೇಳಿದ್ದು ಅತ್ಯಂತ ಉಚಿತವಾಗಿದೆ, ಅರ್ಥಪೂರ್ಣವಾಗಿದೆ. ಈ ಆರ್ಥಿಕ ಪ್ರಪಂಚದಲ್ಲಿ ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಐಕಮತ್ಯವಿಲ್ಲದಿದ್ದರೆ, ಸ್ಪರ್ಧೆ ನಡೆದರೆ ಯುರೋಪಿನಲ್ಲಿಯಂತೆ ಅನರ್ಥ ಪರಂಪರೆಗಳು ಇಲ್ಲಿಯೂ ಪ್ರಾರಂಭವಾಗುವವೆಂಬಲ್ಲಿಸಂದೇಹವಿಲ್ಲ. ಸ್ಟರ್ಲಿಂಗ ಶಿಲಕುಗಳನ್ನು ಬಗೆಹರಿಸಿಕೊಳ್ಳುವಲ್ಲಿ, ದೇಶದ ಪುನರ್ಯೋಜನೆಯ ಸಂಬಂಧದಲ್ಲಿ ಹಿಂದುಸ್ತಾನ ಪಾಕಿಸ್ತಾನಗಳೆರಡೂ ಒಂದೇ ಬಗೆಯ ಧೋರಣೆಯನ್ನಿಟ್ಟುಕೊಂಡು ಅದಷ್ಟು ಮಟ್ಟಿಗೆ ಆರ್ಥಿಕ ಪುನರ್ರಚನೆಗೆ ಅನುಕೂಲವಾಗುವಂತೆ ಯೋಜಿಸಿದ್ದಾದರೆ ಎರಡೂ ರಾಷ್ಟ್ರಗಳಿಗೆ ಹಿತವಾಗದಿರದು. ಸರ್ ಚಿಂತಾಮಣರಾಯರು ಹೇಳಿದ ಈ ಮಹತ್ವದ ಮಾತುಗಳನ್ನು ಹಿಂದುಸ್ತಾನದ ಸಾಮಂತ ಸರಕಾರಗಳು ವಿಶೇಷತಃ ಪಾಕಿಸ್ತಾನ ಸರಕಾರದವರು ನಿರ್ವಿಕಾರ ಮನಸ್ಸಿನಿಂದ ವಿಚಾರ ಮಾಡುವದಕ್ಕವಶ್ಯವಾಗಿದೆಂದು ಹೇಳಬೇಕಾಗಿದೆ. ಸರಕುಗಳ ಬೆಲೆ ಯುದ್ಧಕಾಲದಲ್ಲಿಗಿಂತ ಹೆಚ್ಚಾದುದಕ್ಕೆ ಹುಟ್ಟುವಳಿಯಾದರೂ ಕಡಿಮೆಯಾಗಿರಬೇಕು ಇಲ್ಲವೆ ಹಂಚಿಕೆಯಲ್ಲಾದರೂ ದೋಷವಿರಬೇಕು. ಬಂಡವಲುಗಾರರು ಸಂಘಗಳ ಮೇಲೆ ಎಲ್ಲ ಹೊಣೆ ಹೊರಿಸುವುದುಂಟು ಆದರೆ ಬಂಡವಲುಗಾರರು ತಮಗೆ ಹೆಚ್ಚು ಲಾಭದಾಯಕವಾದ ಕಳ್ಳಪೇಟೆಗೆ ಅನುಕೂಲವಾಗುವಂಥ ಸರಕುಗಳನ್ನು ಸಿದ್ಧಪಡಿಸುವದಲ್ಲದೆ ರಾಷ್ಟ್ರಕ್ಕೆ ಬೇಕಾದ ಸರಕುಗಳನ್ನು ಹೆಚ್ಚಿಗೆ ಸಿದ್ಧಪಡಿಸುವದಿಲ್ಲೆಂದು ಇತರರ ವಾದ. ಜನತೆಗೆ ಅವಶ್ಯ ಬೇಕಾದ ಸರಕುಗಳ ಹುಟ್ಟುವಳಿ ಕಡಿಮೆಯಾಗುವದಕ್ಕೆ ಕಾರಣಗಳೇನೆಂಬುದನ್ನು ಕಂಡುಹಿಡಿಯುವದು ಕರ್ತವ್ಯವಾಗಿದೆ. ನಿಯಂತ್ರಣ ಮೂಲಕ ಅಧಿಕಾರಿಗಳಲ್ಲಿ ಲಂಚಗುಳಿತನ ಹೆಚ್ಚಿ ಹಂಚಿಕೆಯಲ್ಲಿ ಪಕ್ಷಪಾತ ನಡೆಯುತಿರುವದು ಈ ದುರವಸ್ಥೆಗೆ ಕಾರಣವೆಂದು ಹೇಳಬಹುದಾಗಿದೆ. ಇದೆಲ್ಲವನ್ನು ಸರಿಪಡಿಸುವದು ಅವಶ್ಯವಾಗಿದೆ. ಸ್ಟರ್ಲಿಂಗ ಸಾಲವನ್ನು ಮುಟ್ಟಿಸಿಕೊಳ್ಳುವ ಬಗೆಯಲ್ಲಿಯೂ ಎರಡೂ ಸರಕಾರಗಳು ಕೂಡಿ ವಿಚಾರ ಮಾಡಬೇಕಾಗಿದೆ. ದೇಶದ ಔದ್ಯೋಗಿಕ ಉನ್ನತಿಗೆ ಅವಶ್ಯವಾದ ಯಂತ್ರ ಯಂತ್ರೋಪಕರಣ ತರಿಸುವಲ್ಲಿಯೇ ಈ ಸ್ಟರ್ಲಿಂಗ ಹಣದ ಉಪಯೋಗ ಮಾಡಬೇಕಲ್ಲದೆ ಬರಿ ಚೈನಿ ಪದಾರ್ಥಗಳನ್ನು ತರಿಸುವಲ್ಲಿ ಇದರ ವಿನಿಯೋಗವಾಗಬಾರದು. ಈಗಾಗಲೆ ಇಂಥ ಚೈನೀ ವಸ್ತುಗಳಲ್ಲಿ ಈ ಹಣ ವ್ಯಯವಾಗುತಿರುವುದು ಕಂಡುಬಂದದ್ದರಿಂದ ಸರ್ ದೇಶಮುಖರು ಈ ರೀತಿ ಎಚ್ಚರಿಕೆ ಕೊಟ್ಟಿದ್ದಾರೆ. ಎರಡೂ ಸರಕಾರಗಳು ಈ ಎಚ್ಚರಿಕೆಯ ಮಾತನ್ನು ಪಡೆದು ಸೂಕ್ತ ಉಪಾಯ ಕೈಕೊಳ್ಳಬೇಕು.

ಹೊಸ ಗವರ್ನರರು

ಇದೇ ೧೫ ರಿಂದ ಅಸ್ತಿತ್ವದಲ್ಲಿ ಬರುವ ಹಿಂದುಸ್ತಾನ ಮತ್ತು ಪಾಕಿಸ್ತಾನ ಪ್ರಾಂತಗಳಿಗೆ ಅರಸರು ಹೊಸ ಗವರ್ನರರನ್ನು ನೇಮಿಸಿದ್ದಾರೆ. ಪೂರ್ವಬಂಗಾಲವೊಂದನ್ನು ಬಿಟ್ಟು ಉಳಿದೆಲ್ಲ ಪ್ರಾಂತಗಳಿಗೆ ಗವರ್ನರರನ್ನು ನೇಮಿಸಿದ್ದಾಗಿದೆ. ಹೊಸ ಕಾಯದೆ ಪ್ರಕಾರ ಶಾಸನ ಸಭೆಗಳು ಅಸ್ತಿತ್ವದಲ್ಲಿ ಬಂದು ಗವರ್ನರರ ಆಯ್ಕೆಯಾಗುವ ವರೆಗೆ ಬ್ರಿಟಿಶ್ ಅರಸರೇ ಗವರ್ನರರನ್ನು ನೇಮಿಸಬೇಕಾಗಿದ್ದರಿಂದ ಈ ನೇಮಕಕ್ಕೂ ಹಿಂದಿನ ನೇಮಕಗಳಿಗೂ ಮಹತ್ವದ ಭೇದವಿದೆಂಬಲ್ಲಿ ಸಂದೇಹವಿಲ್ಲ. ಹಿಂದೆ ಬ್ರಿಟಿಶ ಸರಕಾರದವರು ಸ್ವಚ್ಛಂದ ರೀತಿಯಿಂದ ಗವರ್ನರರನ್ನು ನೇಮಿಸುತಿದ್ದರು. ಆದರೀಗ ಪ್ರಾಂತೀಯ ಮಂತ್ರಿಮಂಡಳಗಳ ಸಲಹೆ ಸೂಚನೆಗಳನ್ನಯ ಅರಸರು ಗವರ್ನರರನ್ನು ನೇಮಿಸಿದ್ದಾರೆ. ಮುಂಬಯಿ ಮದ್ರಾಸ ಪ್ರಾಂತಗಳಿಗೆ ಸದ್ಯಕ್ಕಿದ್ದ ಗವರ್ನರರೇ ನೇಮಿಸಲ್ಪಟ್ಟಿರುವರು. ಅದೇ ರೀತಿಯಾಗಿ ಪಶ್ಚಿಮ ಪಂಜಾಬ ಮತ್ತು ವಾಯುವ್ಯ ಸರಹದ್ದ ಪ್ರಾಂತಗಳಿಗೂ ಬ್ರಿಟಿಶ ಗವರ್ನರರೆ ಉಳಿದಿರುವರು. ಹಿಂದುಸ್ತಾನದ ಒಕ್ಕೂಟದಲ್ಲಿಯ ಗವರ್ನರರು ಆಯ. ಸಿ. ಎಸ್. ಅಧಿಕಾರಿಗಳಲ್ಲ, ಬ್ರಿಟನ್‌ದಲ್ಲಿಯ ಸಾರ್ವಜನಿಕ ಪ್ರತಿಷ್ಠಿತ ವ್ಯಕ್ತಿಗಳು. ಆದರೆ ಪಾಕಿಸ್ತಾನ ಪ್ರಾಂತಗಳಲ್ಲಿ ನೇಮಿಸಲ್ಪಟ್ಟ ಗವರ್ನರರು ಆಯ. ಸಿ. ಎಸ್. [illegible] ವ್ಯಕ್ತಿಗಳು. [illegible] ಮೌಂಟಬ್ಯಾಟನ್‌ರನ್ನು ಹಿಂದುಸ್ತಾನ ಒಕ್ಕೂಟದವರು ಗವರ್ನರ ಜನರಲ್‌ರನ್ನಾಗಿಟ್ಟುಕೊಂಡಂತೆ [illegible] ಮಾಡಿದ್ದ [illegible] ಪ್ರಶ್ನೆಗಳು ಈಗ [illegible] ಇಂಗ್ಲಂಡದಿಂದ ಪ್ರತಿಗಾಮಿಗಳನ್ನು ಪಶ್ಚಿಮ ಪಂಜಾಬ ಸರಹದ್ದ ಗಳಿಗೆ ನೇಮಿಸಿಕೊಂಡದ್ದೇಕೋ ತಿಳಿಯದು. ಆ ಪ್ರಾಂತದಲ್ಲಿಯ ಮುಸಲ್ಮಾನರೆಲ್ಲರು ಪ್ರತಿಸ್ಪರ್ಧಿಗಳಾಗಿ ಮಾತ್ರ ಉಳಿದದ್ದೇ! ಇಂಗ್ಲಂಡಿನವರನ್ನು ಸರಹದ್ದಕ್ಕೆ ನೇಮಿಸಿದ್ದು ಅತ್ಯಂತ ಅನುಚಿತವೆಂದು ಬೇರೆ ಹೇಳಬೇಕಿಲ್ಲ. ಇಂಗ್ಲಂಡಿನವರು ಪಠಾಣಸ್ಥಾನದಲ್ಲಿ ಯಾವ ಬಗೆಯ ಆಡಳಿತವನ್ನು ನಡೆಸಿದರೆಂಬುದು ಎಲ್ಲರಿಗೂ ಗೊತ್ತಿದ್ದ ಮಾತು. ಇಂಥ ಪ್ರತಿಗಾಮಿಗಳನ್ನೆ ಮತ್ತೆ ಅಲ್ಲಿ ಗವರ್ನರರನ್ನಾಗಿ ನೇಮಿಸಿದ್ದರಿಂದ ಗಡಿನಾಡಿನ ಪರಿಸ್ಥಿತಿ ಶಾಂತವಾಗಲಾರದೆಂಬುದು ಸ್ಪಷ್ಟ ತೋರುತ್ತದೆ. ಪಾಕಿಸ್ತಾನವನ್ನು ಉತ್ಸಾಹದಿಂದ ಹೇರಿದ್ದರಿಂದ ಕೊಟ್ಟಿಗೆದ್ದ ಪಠಾಣರ ಮೇಲೆ ಇಂಗ್ಲಂಡಿನವರನ್ನು ಹೇರಿದ್ದು ಅಶಾಂತಿಯನ್ನು ಬರಮಾಡಿಕೊಂಡಂತೆ ಎಂಬಲ್ಲಿ ಸಂದೇಹವಿಲ್ಲ. ಸಿಂಧಕ್ಕೆ ಅಲ್ಲಿನ ಮುಖ್ಯ ಮಂತ್ರಿಗಳನ್ನೇ ಗವರ್ನರರನ್ನಾಗಿ ನೇಮಿಸಿದ್ದೂ ಯೋಗ್ಯವಾಗಲಿಲ್ಲ. ಹೊರಗಿನವರನ್ನು ನೇಮಿಸಿದ್ದರೆ ನಿಷ್ಪಕ್ಷಪಾತ ರೀತಿಯಿಂದ ಆಡಳಿತ ಸಾಗಿಸಲು ಹೆಚ್ಚು ಅನುಕೂಲವಾಗುತಿತ್ತು. ಹಿಂದುಸ್ತಾನ ಒಕ್ಕೂಟದಲ್ಲಿ ನೇಮಿಸಲ್ಪಟ್ಟ ಗವರ್ನರರು ಅತ್ಯಂತ ಯೋಗ್ಯರೂ ಕಾರ್ಯಕ್ಷಮರೂ ಆಗಿದ್ದಾರೆ. ಈ ಹೊಸ ಆಡಳಿತದಿಂದ ಎಲ್ಲೆಲ್ಲಿಯೂ ಶಾಂತಿ ಪ್ರಸ್ಥಾಪಿತವಾಗಲಿ.

ಬ್ರಿಟನ್‌ದ ಆರ್ಥಿಕ ದುಃಸ್ಥಿತಿ

ಯುದ್ಧಾನಂತರ ಬ್ರಿಟನ್ನದ ಆರ್ಥಿಕ ಪರಿಸ್ಥಿತಿ ಅತ್ಯಂತ [illegible]ವಾಗಿದೆ. ಆಹಾರ ಪದಾರ್ಥಗಳ ಕೊರತೆಯೂ ವಿಪರೀತವಾಗಿದ್ದು ಸೀದಾ ಪ್ರಮಾಣವನ್ನು ಇನ್ನೂ ಇಳಿಸಲಿರುವರೆಂದು ತಿಳಿಯುತ್ತದೆ. ಬ್ರಿಟನ್ನು ಈ ದುರಂತ ಪರಿಸ್ಥಿತಿಯನ್ನು ಅತ್ಯಂತ ಧೈರ್ಯದಿಂದ ಎದುರಿಸುತಿರುವದೆಂದು ಪ್ರಸಿದ್ಧವಾಗುತಿರುವ ಸುದ್ದಿಗಳಿಂದ ಗೊತ್ತಾಗುತ್ತದೆ. ಚೈನೀ ಪದಾರ್ಥಗಳನ್ನೆಲ್ಲ ಬಿಟ್ಟುಗೊಟ್ಟು ಕೇವಲ ಅವಶ್ಯಕ ಪದಾರ್ಥಗಳನ್ನಷ್ಟೇ ಸಿದ್ಧಪಡಿಸುತಿರುವರಲ್ಲದೆ ಪರದೇಶಗಳಿಗೆ ಹೋಗುವ ಪದಾರ್ಥಗಳ ಉತ್ಪಾದನೆಯನ್ನೂ ಹೆಚ್ಚಿಸುತಿರುವರು. ಆಯಾತವನ್ನು ಕಡಿಮೆ ಮಾಡಿ ನಿರ್ಯಾತವನ್ನು ಹೆಚ್ಚಿಸಿ ಈ ಆರ್ಥಿಕ ದುಃಸ್ಥಿತಿಯನ್ನು ದೂರ ಮಾಡಿಕೊಳ್ಳಬೇಕೆಂದು ಬ್ರಿಟಿಶರು ಹವಣಿಸಿದ್ದಾರೆ. ಮುಖ್ಯ ಮಂತ್ರಿಗಳಾದ ಅಟ್ಲಿಯವರು ಈ ಸಂಬಂಧದಲ್ಲಿ ಮಸೂದೆಯೊಂದನ್ನು ಪಾರ್ಲಮೆಂಟಿನಲ್ಲಿ ತಂದಿದ್ದು ಈ ಸಂಚಿಕೆ ವಾಚಕರ ಕೈಸೇರುವ ಹೊತ್ತಿಗೆ ಅದರ [illegible] ಆಗಿ ಹೋಗುವದು. ಜಾಗತಿಕ ಯುದ್ಧದಲ್ಲಿ ವಿಜಯಿಗಳಾದ, ಬ್ರಿಟಿಶರೀಗ 'ಹೊಸ ಯುದ್ಧ'ದಲ್ಲಿ ಹೋರಾಡಬೇಕಾಗಿದೆ. ಉದ್ಯೋಗ ಧಂದೆಗಳು ಮತ್ತು ಆಹಾರ ಪದಾರ್ಥಗಳು ಇವೇ ಯುದ್ಧದ ಎರಡು ರಂಗಗಳು. ಉತ್ಪಾದನೆಯನ್ನು ಹೆಚ್ಚಿಸುವದಕ್ಕಾಗಿ ಕೂಲಿಕಾರರಲ್ಲಿ ದಿನಾಲು ಅರ್ಧ ಗಂಟೆ ಹೆಚ್ಚು ದುಡಿಯಬೇಕು, ಉಕ್ಕು ಮತ್ತು ಕಲ್ಲಿದ್ದಲಿ ಉತ್ಪಾದನೆಯನ್ನು ಹೆಚ್ಚಿಸಬೇಕು. ಆಹಾರ ಪದಾರ್ಥಗಳನ್ನು ಬ್ರಿಟನ್ನದಲ್ಲಿ ಚೆನ್ನಾಗಿ ಬೆಳೆಯಬೇಕಲ್ಲದೆ ವಸಾಹತುಗಳಲ್ಲಿ ಸಿಕ್ಕಬಹುದಾದ ಆಹಾರ ಪದಾರ್ಥಗಳನ್ನೆಲ್ಲ ಸಂಗ್ರಹಿಸಬೇಕು ಮತ್ತು ಸೀದಾ ಪ್ರಮಾಣವನ್ನು ಕಡಿಮೆ ಮಾಡಬೇಕು ಮೊದಲಾಗಿ ಯೋಜಿಸಲಾಗಿದೆ. ದೇಶದಲ್ಲಿಯ ಎಲ್ಲ ಜನಬಲವನ್ನೂ ಕಾರ್ಯೋನ್ಮುಖ ಮಾಡಬೇಕಾಗಿದೆ. ಈ ಸಂಬಂಧದಲ್ಲಿ ಪಾರ್ಲಮೆಂಟಿನಲ್ಲಿ ಮಂಡಿಸಿದ ಮಸೂದೆಯಲ್ಲಿ ಈ ಬಗೆಯ ಯೋಜನೆ ಮಾಡಿದೆ. ಉಪಹಾರಗೃಹ ಭೋಜನಾಲಯಗಳಲ್ಲಿ ಚೈನೀ ಪದಾರ್ಥಗಳನ್ನೆಲ್ಲ ಖರ್ಚ ಮಾಡಬೇಕೆಂದು ವಿಧಿಸಲಾಗುವದು. ಆಯಾತವನ್ನು ಕಡಿಮೆ ಮಾಡಿ ನಿರ್ಯಾತವನ್ನು ಹೆಚ್ಚಿಸುವದನ್ನು ಯೋಜಿಸಲಾಗಿದೆ. ಪರದೇಶೀ ಪೇಟೆಗಳೆಲ್ಲ ಬ್ರಿಟಿಶ ವಸ್ತುಗಳಿಂದ ತುಂಬಿಬರಲಾಗುವವೆಂಬುದು ಇದರಿಂದ ಸ್ಪಷ್ಟವಾಗುವದು; ಹಿಂದುಸ್ತಾನಕ್ಕೆ ಈಗ ಪ್ಲಾಸ್ಟಿಕ್ ಪದಾರ್ಥಗಳು, ಇನ್ನಿತರ ಚೈನೀ ಪದಾರ್ಥಗಳು ಹೇರಳವಾಗಿ ಬಂದಿವೆ. ಭಾರತೀಯರು ಈ ಬಗ್ಗೆ ಜಾಗ್ರತರಾಗಿರಬೇಕೆಂದು ಸರ್ ಚಿಂತಾಮಣರಾಯರು ಈಗಾಗಲೆ ಎಚ್ಚರಿಕೆ ಕೊಟ್ಟಿದ್ದಾರೆ. ಬ್ರಿಟನ್ ತನ್ನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವಾಗ ಹಿಂದುಸ್ತಾನದ ಆರ್ಥಿಕ ಪರಿಸ್ಥಿತಿ ಕೆಡದಂತೆ ಭಾರತೀಯರು ಈಗಿನಿಂದಲೆ ಜಾಗ್ರತೆ ವಹಿಸುವದು ಅತ್ಯವಶ್ಯವೆಂದು ಬೇರೆ ಹೇಳಬೇಕಿಲ್ಲ.

ಒಕ್ಕೂಟ ಪ್ರಾಂತಗಳಲ್ಲಿ ಹಿಂದೀ ಗವರ್ನರರ ನೇಮಕ

ರಾಜಾಜಿ, ಮಂಗಲದಾಸ ಪಕ್ವಾಸಾ, ದೌಲತರಾಮ ಮೊದಲಾದವರಿಗೆ ಗವರ್ನರ ಪದ— ಅಗಸ್ಟ್ ೧೪ ಮಧ್ಯರಾತ್ರಿಗೆ ಅಧಿಕಾರ ಹಸ್ತಾಂತರ— ೨೨ ಸಂಸ್ಥಾನಗಳು ಒಕ್ಕೂಟ ಸೇರಿದವು

ಅಗಸ್ಟ್ ೧೪--೧೫

ಹಿಂದೀಯರ ಕೈಗೆ ಬ್ರಿಟಿಶರು ಅಧಿಕಾರ ಬಿಟ್ಟು ಕೊಡುವ ಸಮಾರಂಭದ ನಿರ್ದಿಷ್ಟ ವಿವರಗಳು ಈಗ ತಿಳಿದುಬಂದಿವೆ. ಅಗಸ್ಟ ೧೫ ಮುಂಜಾನೆ ಹಿಂದುಸ್ತಾನದ ಡೋಮಿನಿಯನ್ ಮಂತ್ರಿಮಂಡಳದ ಪ್ರತಿಜ್ಞಾವಿಧಿ ಜರಗಬೇಕೆಂದಿದ್ದುದು ಬದಲಾಗಿ ಅಗಸ್ಟ ೧೪ ಮಧ್ಯರಾತ್ರಿ ಕಳೆದು ಒಂದು ನಿಮಿಷಕ್ಕೆ ಔಪಚಾರಿಕ ವಿಧಿಗಳು ಪೂರ್ಣವಾಗಬೇಕೆಂದು ನಿರ್ಧರಿಸಲ್ಪಟ್ಟಿದೆ. ಮುಂಜಾನೆ ಗ್ರಹಬಲ ಪ್ರಶಸ್ತವಾಗಿಲ್ಲೆಂದು ಜ್ಯೋತಿಷಿಗಳ ಸೂಚನೆ ಬಂತಂತೆ. ನಿಮಲಾ ಹರಿ ಹತ್ತು ಅಯಶಸ್ವಿಯಾಗುವದೆಂದು ನುಡಿದ ಜ್ಯೋತಿಷಿಯೇ ಈ ಸೂಚನೆ ಕೊಟ್ಟದ್ದರಿಂದ ಅದನ್ನು ಉಲ್ಲಂಘಿಸಲು ಮುಂದಾಳುಗಳು ಬಯಸಿರಲಿಕ್ಕಿಲ್ಲ. ನಡುರಾತ್ರಿ ಕಳೆದೊಂದು ನಿಮಿಷಕ್ಕೆ ವಿಧಿ ಜರುಗುವದರಿಂದ ಬ್ರಿಟಿಶ ಪಾರ್ಲಮೆಂಟಿನ ಕಾಯದೆಯೂ ಪಾಲಿಸಲ್ಪಟ್ಟಂತಾಗುವದು, ಜ್ಯೋತಿಷಿಯ ಮಾತೂ ಪೂರ್ತಿ ಮಾಡಿದಂತಾಗುವದು. ಅದ್ದರಿಂದ ಅಗಸ್ಟ ೧೪ ರಾತ್ರಿ ೧೧-೩೦ ಕ್ಕೆ ಘಟನಾ ಸಮಿತಿಯು ಸಭೆ ಸೇರಿ ನಡುರಾತ್ರಿ ಹೊತ್ತಿಗೆ ಧುರೀಣನನ್ನಾರಿಸುವದು- ಅವನೇ ತಾತ್ಕಾಲಿಕ ಸರಕಾರದ ಮುಖ್ಯ ಮಂತ್ರಿಯಾಗುವನು. ಅವನು ಗವರ್ನರ ಜನರಲ್ಲರ ಬಿಡಾರಕ್ಕೆ ಹೋಗಿ ಅವರ ನೇಮಕಕ್ಕೆ ಘಟನಾ ಸಮಿತಿಯ ಸಮ್ಮತಿಯನ್ನು ತಿಳಿಸಿ ತನ್ನ ಮಂತ್ರಿಗಳ ಯಾದಿಯನ್ನೊಪ್ಪಿಸುವನು. ಮುಂಜಾನೆ ೮—೩೦ ಕ್ಕೆ ಗವರ್ನರ ಜನರಲ್ ಮತ್ತು ಮಂತ್ರಿಗಳ ಪ್ರತಿಜ್ಞಾವಿಧಿ ಜರಗಿ ಆ ಮೇಲೆ ವಿವಿಧ ಉತ್ಸವಗಳು ನೆರವೇರುವವು.

ಪಾಕಿಸ್ತಾನ ಘಟನಾ ಸಮಿತಿಗೆ ಅಧಿಕಾರ ವೊಪ್ಪಿಸಲು ವೈಸರಾಯ ಮೌಂಟಬ್ಯಾಟನ್ನರು ತಾ.೧೩ಕ್ಕೆ ಕರಾಚಿಗೆ ಹೋಗುವರು. ಪಾಕಿಸ್ತಾನ ಘಟನಾ ಸಮಿತಿಯಲ್ಲಿ ಅವರು ಭಾಷಣ ಮಾಡುವರು. ತಾ. ೧೪ ಕ್ಕೆ ಅವರು ದಿಲ್ಲಿಗೆ ಬರುವರು. ಪಾಕಿಸ್ತಾನ ಗವರ್ನರ ಜನರಲ್ಲರಾಗಿ ಜಿನ್ನಾ ಸಾಹೇಬರ ಪ್ರತಿಜ್ಞಾವಿಧಿ ಮುಖ್ಯ ನ್ಯಾಯಾಧೀಶರ ಸಮ್ಮುಖದಲ್ಲಿ ಜರುಗಲಿದೆ.

ಪ್ರಾಂತಗಳ ಗವರ್ನರರು

"ಸ್ವರಾಜ್ಯ"ವಾಗುವ ಎಲ್ಲಕ್ಕಿಂತ ದೊಡ್ಡ ಬದಲಾವಣೆಯೆಂದರೆ ಪ್ರಾಂತಿಕ ಗವರ್ನರರಲ್ಲಾಗುವ ಅಮೂಲಾಗ್ರ ಬದಲಾವಣೆ. ಮದ್ರಾಸ ಮುಂಬಯಿ ಆಸಾಮುಗಳ ಆಯ. ಸಿ. ಎಸ್ಸೇತರ ಗವರ್ನರರನ್ನು ಬಿಟ್ಟರೆ ಒಕ್ಕೂಟ ಪ್ರಾಂತಗಳ ಬೇರೆಲ್ಲ ಗವರ್ನರರು ಬದಲಾಗುವರು. ಅದಕ್ಕೂ ವಿಶೇಷವೆಂದರೆ ಇನ್ನೇರಡು ತಿಂಗಳ ಕಾಲ ಒಂದು ಪ್ರಾಂತದಲ್ಲಿ ಭಾರತೀಯ ಇತಿಹಾಸದಲ್ಲೇ ಹಿಂದೆಂದೂ ಆಗಿರದಂತೆ ಸ್ತ್ರೀ-ಗವರ್ನರಳು ಅಧಿಕಾರದಂಡವನ್ನು ಧರಿಸುವಳು. ಒಕ್ಕೂಟ ಪ್ರಾಂತಗಳ ಹೊಸ ಗವರ್ನರರ ಯಾದಿ ಹೀಗಿದೆ:

ಮದ್ರಾಸ:— ಅರ್ಚಿಬಾಲ್ಡ ನ್ಯೆ (ಈಗಿದ್ದ ಗವರ್ನರರು. ಇವರು ಈ ವರ್ಷ ಪೂರ್ಣವಲ್ಲದೆ ೧೯೪೮ ರಲ್ಲೂ ಕೆಲ ತಿಂಗಳು ಅಧಿಕಾರದಲ್ಲಿರುವರು).

ಮುಂಬಯಿ:— ಸರ್ ಜಾನ ಕಾಲವಿಲ್ (ಈಗಿನ ಗವರ್ನರರು)

ಆಸಾಮು:— ಸರ್ ಅಕಬರ ಹೈದರಿ (ಈಗಿನ ಗವರ್ನರರು)

ಪಶ್ಚಿಮ ಬಂಗಾಲ:— ಶ್ರೀ ಸಿ. ರಾಜಗೋಪಾಲಾಚಾರಿ.

ಪೂರ್ವ ಪಂಜಾಬ:— ಸರ್ ಚಂದೂಲಾಲ ತ್ರಿವೇದಿ (ಈಗಿನ ಓಡಿಸಾ ಗವರ್ನರ)

ಮಧ್ಯಪ್ರಾಂತ:— ಶ್ರೀ ಮಂಗಲದಾಸ ಪಕ್ವಾಸಾ

ಬಿಹಾರ:— ಜಯರಾಮದಾಸ ದೌಲತರಾಮ

ಓಡಿಸಾ:— ಡಾ. ಕೈಲಾಸನಾಥ ಕಟಿಜು

ಯುಕ್ತಪ್ರಾಂತ:— ಡಾ. ಬಿ. ಸಿ. ರಾಯ (ಅವರೀಗ ವಿದೇಶದಲ್ಲಿರುವದರಿಂದ ಅಕ್ಟೋಬರದಲ್ಲಿ ಮರಳುವ ವರೆಗೆ ಶ್ರೀಮತಿ ಸರೋಜಿನಿ ನಾಯಡು ಅವರು ಅಧಿಕಾರ ವಹಿಸುವರು.)

ಆದರೆ ಪಾಕಿಸ್ತಾನ ಪ್ರಾಂತಗಳು ಬಿಳಿಯ ಆಯ. ಸಿ. ಎಸ್. ಗವರ್ನರರ ಬಗ್ಗೆ ಅಷ್ಟೇನೂ ಸಂಕೋಚಪಟ್ಟುಕೊಂಡಂತಿಲ್ಲ. ಪಾಕಿಸ್ತಾನ ಪ್ರಾಂತಗಳ ಗವರ್ನರರ ಯಾದಿ ಇಂತಿದೆ:—

ಪಶ್ಚಿಮ ಪಂಜಾಬ:— ಸರ್ ಫ್ರಾನ್ಸಿಸ್ ಮುಡಿ (ಈಗಿನ ಸಿಂಧ ಗವರ್ನರರು).

ಸಿಂಧ:— ಸರ್ ಗುಲಾಮ ಹುಸೇನ ಹಿದಾಯತುಲ್ಲಾ (ಈಗಿನ ಸಿಂಧ ಮುಖ್ಯ ಮಂತ್ರಿಗಳು).

ಗಡಿನಾಡು:— ಸರ್ ಜಾರ್ಜ ಕನಿಂಗ್ಹ್ಯಾಮ (ನಿವೃತ್ತ ಆಯ. ಸಿ. ಎಸ್).

ಪೂರ್ವ ಬಂಗಾಲದ ಗವರ್ನರ ಪದವಿ ಯಾರಿಗೆ ದೊರೆಯಬೇಕೆಂದು ಇನ್ನೂ ಗೊತ್ತಾಗಿಲ್ಲ.

೧೯೩೫ ರ ಕಾಯದೆಯಲ್ಲಿ ಬದಲಾವಣೆ

ಹೊಸರಾಜ್ಯ ಘಟನೆ ಸಿದ್ಧವಾಗಿ ಅದರನ್ವಯ ಚುನಾವಣೆಗಳಾಗಿ ಅದು ಜಾರಿಗೆ ಬರುವ ವರೆಗೆ ಹಿಂದುಸ್ತಾನ ಒಕ್ಕೂಟದ ಆಡಳಿತೆಗಾಗಿ ೧೯೩೫ ರ ಹಿಂದುಸ್ತಾನ ಕಾಯದೆಯನ್ನೇ ಬದಲಿಸಿ ಉಪಯೋಗಿಸಿಕೊಳ್ಳಲಾಗುವದು. ಅಗಸ್ಟ ೧೫ ಕ್ಕೆ ಅದರ ಗುರುತು ಕೂಡ ಕಾಣಸದಂತೆ ಅದರ ೩೨೧ ಕಲಮುಗಳಲ್ಲಿ ೧೦೫ ಸಂಪೂರ್ಣವಾಗಿ ರದ್ದಾಗಿಬಿಡುವವು. ಇದಲ್ಲದೆ ಹಲವು ಉಪಕಲಮುಗಳೂ ಹೋಗುವವು ರಾಷ್ಟ್ರೀಯ ವೃತ್ತಿಯವರ ತೀಕ್ಷ್ಣ ಟೀಕೆಗೊಳಗಾಗಿದ್ದ ಈ ಕಲಮುಗಳು ಬ್ರಿಟಿಶ ಚಕ್ರವರ್ತಿ—ಹಿಂದೀ ಸಂಸ್ಥಾನಗಳ ಸಂಬಂಧ, ದೇಶದಲ್ಲಿ ಸುವ್ಯವಸ್ಥೆ ಕಾಯ್ದುಕೊಳ್ಳಲು ಗವರ್ನರ ಹಾಗು ಗವರ್ನರ ಜನರಲ್ಲರ ವಿಶೇಷಾಧಿಕಾರ, ಅಲ್ಪಸಂಖ್ಯಾಕರ ಮತ್ತು ನರೇಂದ್ರರ ಹಿತರಕ್ಷಣಾಧಿಕಾರ, ಭಾರತ ಮಂತ್ರಿಯ ಮೇಲ್ವಿಚಾರಣೆ ಇವೇ ಮೊದಲಾದ ನಿರಂಕುಶ ಆಡಳಿತೆಯ ಆಯುಧಗಳಂತಿದ್ದವು. ಗಂಡಾಂತರ ಕಾಲದಲ್ಲಿ ಸುಗ್ರೀವಾಜ್ಞೆಗಳನ್ನು ಹೊರಡಿಸುವ ಗವರ್ನರ ಜನರಲ್ಲರ ಅಧಿಕಾರಕ್ಕೂ ಕತ್ತರಿ ಬೀಳುವದು. ಅಂಥ ಅಜ್ಞೆಯನ್ನು ಜಾರಿಗೆ ತರುವ ಮೊದಲು ಅದನ್ನು ಶಾಸನ ಸಭೆಯಲ್ಲಿ (ಅಂದರೆ ಘಟನಾ ಸಮಿತಿಯಲ್ಲಿ) ಮಂಡಿಸಬೇಕು. ಅದು ೬ ವಾರಗಳ ವರೆಗಷ್ಟೇ ಜಾರಿಯಲ್ಲಿರಬೇಕೆಂದಿತ್ಯಾದಿಯಾಗಿ ಸೂಚಿಸಲ್ಪಟ್ಟಿದೆ. ಇದಲ್ಲದೆ ಹಿಂದುಸ್ತಾನದಲ್ಲಿ ಬ್ರಿಟಿಶ ವ್ಯಾಪಾರಿ ಹಿತಸಂಬಂಧಗಳಿಗಿದ್ದ ವಿಶೇಷ ರಕ್ಷಣೆಗಳು ಮಾಯವಾಗಿ ಅವರು ಇನ್ನು ಹಿಂದೀ ಉದ್ದಿಮೆಗಾರರಿಗೆ ಸಮಾನರಾಗಿ ಬಾಳಬೇಕಾಗುವದು. ಹೀಗೆ ಬದಲಾಯಿಸಲ್ಪಟ್ಟ ಕರಡು ಈಗಾಗಲೆ ಮುಂದಾಳುಗಳ ಕೈಯಲ್ಲಿದ್ದು ಸಂಸ್ಥಾನ ಪ್ರತಿನಿಧಿಗಳಿಗೂ ಸಮ್ಮತವಾಗಿದೆಯೆಂದು ತಿಳಿಯುತ್ತದೆ.

ಸಾಮಂತ ಮಂತ್ರಿಮಂಡಲ

ಅಗಸ್ಟ ೧೫ರಿಂದ ಘಟನಾ ಸಮಿತಿಗೆ ಹೊಣೆಗಾರವಾಗಿ ಆಡಳಿತೆ ನಡೆಸಬೇಕಾಗಿರುವ ಹಿಂದೀ ಒಕ್ಕೂಟ ಮಂತ್ರಿಮಂಡಲಕ್ಕೆ ಪಂ. ಜವಾಹರಲಾಲರೆ ನಾಯಕರಾಗುವರೆಂಬಲ್ಲಿ ಈಗ ಸಂದೇಹವುಳಿದಿಲ್ಲ. ಆದರೆ ಅದು ಏಕಪಕ್ಷೀಯ ಮಂತ್ರಿಮಂಡಲವಾಗಿರದೆ ಸಂಮಿಶ್ರವಾಗಲಿದೆ. ಈಗ ಗವರ್ನರ ಪದಕ್ಕೇರಿಸಲ್ಪಟ್ಟು ಹೋಗುವ ಮಂತ್ರಿಗಳನ್ನು ಬಿಟ್ಟು ಉಳಿದವರೆಲ್ಲರೂ ಉಳಿಯುವರೆಂದು ತೋರುತ್ತದೆ. ಇವರಲ್ಲದೆ ಡಾ. ಬಿ ಆರ್ ಅಂಬೇಡಕರ, ಡಾ. ಶ್ಯಾಮಪ್ರಸಾದ ಮುಕರ್ಜಿ, ಸರ್ ಆರ್ ಕೆ ಷಣ್ಮುಖಂ ಚೆಟ್ಟಿಯಾರ, ಎನ್ ವಿ . ಗಾಡಗೀಳ ರಫಿ ಅಹಮದ ಕಿದವಾಯಿ ಇವರು ಹೊಸದಾಗಿ ಸೇರಿಸಿಕೊಳ್ಳಲ್ಪಡಬಹುದು. ಇವರಲ್ಲಿ ಷಣ್ಮುಖಂ ಚೆಟ್ಟಿಯಾರರು ಹಣಕಾಸಿನ ಮಂತ್ರಿಗಳಾಗುವರೆಂದು ವಿಶ್ವಸನೀಯವಾಗಿ ತಿಳಿಯುತ್ತದೆ.

ಪಾಕಿಸ್ತಾನ ಸಾಮಂತರಾಜ್ಯ ಮಂತ್ರಿ ಮಂಡಲದ ಸದಸ್ಯರ ಹೆಸರುಗಳಿನ್ನೂ ಹೊರಬಿದ್ದಿಲ್ಲ. ಆದರೆ ಅದರಲ್ಲಿ ಇಬ್ಬರು ಹಿಂದುಗಳು ಐದು ಜನ ಮುಸ್ಲಿಮರಿರುವರೆಂದು ನಂಬಲಾಗಿದೆ. ಹಿಂದುಗಳಲ್ಲಿ ಜೋಗೇಂದ್ರನಾಥ ಮಂಡಲರೊಬ್ಬರಾಗಬಹುದು. ಇನ್ನು ಸಿಂಧ ಮುಖ್ಯ ಮಂತ್ರಿ ಹಿದಾಯತುಲ್ಲಾರು ಗವರ್ನರರಾದುದರಿಂದ ಅವರ ಪ್ರತಿಸ್ಪರ್ಧಿ ಖುರೋ ಅವರು ಮುಖ್ಯಮಂತ್ರಿಯಾಗುವರು. ಪಶ್ಚಿಮ ಪಂಜಾಬ ಲೀಗ್ ಪಕ್ಷದ ನಾಯಕತ್ವಕ್ಕೆ ಫಿರೋಜಖಾನ ನೂನ ಮತ್ತು ಮಮದೋತ ಖಾನರಲ್ಲಿ ಬಿದ್ದ ಸ್ಪರ್ಧೆ ನೂನರು ಹಿಂದೆಗೆದುದರಿಂದ ಇಲ್ಲದಂತಾಗಿ ಖಾನರೇ ಮುಖ್ಯ ಮಂತ್ರಿಗಳಾಗುವರು. ಗಡಿನಾಡಿನ ಭವಿಷ್ಯ ಅಡ್ಡಗೋಡೆಯ ಮೇಲಿದೆ. ಪಠಾಣಿಸ್ತಾನದ ಪ್ರಶ್ನೆಯನ್ನು ಬಿಡಿಸದಿದ್ದರೆ ಗಡಿನಾಡಿನಲ್ಲಿ ಶಾಂತಿಯಿರದೆಂದು ಗಡಿನಾಡ ಶಾಸನಸಭಾಧ್ಯಕ್ಷ ಅಲ್ಲಾ ನವಾಜಖಾನರು ಜಿನ್ನಾ, ಮೌಂಟಬ್ಯಾಟನ್, ಜವಾಹರಲಾಲರಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ಪೂರ್ವ ಬಂಗಾಲ ಮುಖ್ಯ ಮಂತ್ರಿತ್ವಕ್ಕೆ ನಡೆದ ಸ್ಪರ್ಧೆಯಲ್ಲಿ ಸುಹ್ರವರ್ದಿಯವರು ಸೋತು ನಾಜೀಮುದ್ದೀನರೇ ಮೇಲೆ ಬಂದರು.

ಅಶಾಂತಿಯ ಸತ್ವಗಳು

ಸ್ವಾತಂತ್ರ್ಯದ ಮಹಾದ್ವಾರದಲ್ಲಿ ನಿಂತಾಗ ಹಿಂದುಸ್ತಾನವನ್ನು ನಾನಾ ವಿಧ ಅಶಾಂತಿಯ ಸತ್ವಗಳು ಎದುರಿಸಲು ಅಣಿಯಾಗಿವೆ. ಇವುಗಳಲ್ಲಿ ಪ್ರಬಲವಾದುವೆಂದರೆ ಯುಕ್ತಪ್ರಾಂತ ಬಿಹಾರಗಳಲ್ಲಿ ಹಿಂದೂ ಮಹಾಸಭೆ ಹೂಡಿದ "ಪ್ರತ್ಯಕ್ಷ ಹೋರಾಟ". ೧೯೪೨ ರಲ್ಲಿ ಕಾಂಗ್ರೆಸ್ಸಿನಂತೆ ಬ್ರಿಟಿಶರ ವಿರುದ್ಧ "ಪ್ರತ್ಯಕ್ಷ ಹೋರಾಟ"ದ ಗೊತ್ತುವಳಿಯನ್ನು ಮದುರೆಯಲ್ಲಿ ಸ್ವೀಕರಿಸಿ ಆ ಮೇಲೆ ಕೆಮ್ಮನೆ ನಿದ್ದೆ ಹೋದ ಈ ಪ್ರತಿಗಾಮಿ ಸಂಸ್ಥೆಯಿಂದು ಯುಕ್ತಪ್ರಾಂತ ಸರಕಾರದ ಮುಂದೆ ೯ ಬೇಡಿಕೆಗಳನ್ನು ಮಂಡಿಸಿ ಅವು ತಿರಸ್ಕರಿಸಲ್ಪಟ್ಟದ್ದರಿಂದ "ಪ್ರತ್ಯಕ್ಷ ಹೋರಾಟ" ಹೂಡಿದೆ. ಆ ಬೇಡಿಕೆಗಳು ಮುಸ್ಲಿಮರನ್ನು ಉಚ್ಚಾಧಿಕಾರಿ ನೇಮಿಸಬಾರದು,ಹಿಂದುಗಳಿಗೆ ಪಕ್ವಪಾತ ತೋರಿಸಬೇಕೆಂದು ಮುಂತಾಗಿ ಹೇಳುತ್ತವೆ-ಈ ಪ್ರತ್ಯಕ್ಷ ಹೋರಾಟದ ಫಲವಾಗಿ ಈಗಾಗಲೆ ನೂರುಗಟ್ಟಲೆ ಹಿಂದೂ ಮಹಾಸಭಾವಾದಿಗಳು ಬಂಧಿಸಲ್ಪಟ್ಟಿದ್ದಾರೆ. ಈ ಚಳವಳಿಯ ಪುರಸ್ಕರ್ತರ ಹೆಸರುಗಳನ್ನು ನೋಡಿದರೆ ಅದು ಬ್ರಿಟಿಶರನಿರ್ಗಮನದಿಂದ ಬೇರು ಕಡಿದಂತಾದ ಕೆಲ ಹಿಂದೂ ಜಮೀನುದಾರರ ಬೆಂಬಲದಿಂದ ನಡೆದಿದೆಯೆಂಬದು ವಿದಿತವಾಗುತ್ತದೆ ಇದಲ್ಲದೆ ಈಗ ವಿಭಜನೆಗೊಳಗಾಗಿರುವ ಪ್ರಾಂತಗಳಲ್ಲಿ ಅಶಾಂತಿಯ ಸತ್ವಗಳು ಒಳಗಿಂದೊಳಗೇ ಬುಸುಗುಡುತ್ತಿವೆ. ಇನ್ನು ಕೆಲವೇ ದಿನಗಳಲ್ಲಿ ಹೊರಬೀಳುವ ಗಡಿ ನಿರ್ಣಯ ಸಮಿತಿಯ ತೀರ್ಮಾನವನ್ನು ಒಪ್ಪಲು ಹಿಂದುಸ್ತಾನ ಪಾಕಿಸ್ತಾನ ಸರಕಾರಗಳೆರಡೂ ವಚನಬದ್ಧವಾಗಿದ್ದರೂ ಅದರಿಂದ ತಮಗೆ ಅನ್ಯಾಯವಾಗಿದೆಯೆಂದು ಬಗೆದವರು ದಂಗೆಯನ್ನು ಆರಂಭಿಸುವ ಗಂಡಾಂತರವಿದೆ. ಆದಕ್ಕಾಗಿ ಅವಿಭಕ್ತ ಪಂಜಾಬ ಬಂಗಾಲಗಳಿಗನ್ವಯಿಸುವ ಉಗ್ರ ಶಾಸನಗಳನ್ನು ಹೊರಡಿಸಲಾಗಿದೆ. ಕಲಕತ್ತೆ ಮೊದಲಾದೆಡೆಗಳ ಪೋಲೀಸು ಹಾಗು ಸೇನಾಬಲವನ್ನು ಹೆಚ್ಚಿಸಲಾಗಿದೆ.

ನಿರಾಶ್ರಿತರ ಯೋಗಕ್ಷೇಮ

ಬಿಹಾರ ಪೂರ್ವ ಪಂಜಾಬಗಳಿಂದ ಓಡಿಬಂದ ಮುಸ್ಲಿಂ ಮತ್ತು ಪೂರ್ವ ಬಂಗಾಲ, ಗಡಿನಾಡು ಮೊದಲಾದೆಡೆಗಳಿಂದೋಡಿದ ಹಿಂದೂ ನಿರಾಶ್ರಿತರ ವಿಷಯದಲ್ಲಿ ಎರಡೂ ಸರಕಾರಗಳು ಒಂದು ಒಪ್ಪಂದಕ್ಕೆಬಂದಿವೆ ತಮ್ಮ ತಮ್ಮ ಅಧಿಕಾರಕ್ಕೆ ಸೇರುವ ಪ್ರದೇಶದಿಂದ ಜಾತೀಯ ದ್ವೇಷಕ್ಕೆ ಹೆದರಿ ಪಲಾಯನ ಮಾಡಿದವರನ್ನು ಹಿಂದೆಕರೆಸಿ ಆಯಾ ಸರಕಾರಗಳ ವೆಚ್ಚದಿಂದ ಅವರ ಯೋಗಕ್ಷೇಮ ನೋಡಿಕೊಳ್ಳಲಾಗುವದು ಅದಕ್ಕಾಗಿ ಶಿಬಿರಗಳನ್ನು ಸ್ಥಾಪಿಸುವದಲ್ಲದೆ ಅವರವರ ಹಳ್ಳಿಗಳಲ್ಲಿ ಬಹುಸಂಖ್ಯಾಕರ ದ್ವೇಷಬುದ್ಧಿ ತಣಿಯುವ ವರೆಗೆ ನಿರಾಶ್ರಿತರ ಅಸ್ತಿಪಾಸ್ತಿಯ ಆಡಳಿತೆಯನ್ನು ಸರಕಾರದವರೇ ವ್ಯವಸ್ಥಾಪಕರ ಮೂಲಕ ನೋಡಿಕೊಳ್ಳುವರು. ಅಸ್ತಿಪಾಸ್ತಿಗಳಿಗಾದ ಹಾನಿಯನ್ನು ತುಂಬಿಕೊಡುವದಕ್ಕೂ ಉಭಯ ಸರಕಾರಗಳು ಒಪ್ಪಿವೆ. ಇದಲ್ಲದೆ ಪುನರ್ನಿವೇಶನ ಯೋಜನೆ, ಪುಂಡರಿಗೆ ಶೀಘ್ರ ದಂಡನೆ ಮೊದಲಾದ ಕಾರ್ಯಕ್ರಮಗಳಿಂದ ಅಲ್ಪಸಂಖ್ಯಾಕರಲ್ಲಿ ವಿಶ್ವಾಸ ಹುಟ್ಟಿಸಲು ಮತ್ತು ಸಂತ್ರಸ್ತ ಭಾಗಗಳಲ್ಲಿ ಸಂಚರಿಸಿ ಪರಿಹಾರಗಳನ್ನು ಚರ್ಚಿಸಲು ಉಭಯ ಸರಕಾರದ ಪ್ರತಿನಿಧಿಗಳಿಗೆ ಅವಕಾಶ ಕಲ್ಪಿಸಲು ಒಪ್ಪಂದವಾಗಿದೆ.

ಸಂಸ್ಥಾನಗಳ ಸೇರ್ಪಡೆ

ವಾಯಿಸರಾಯರು ದಿಲ್ಲಿಯಲ್ಲಿ ಸೇರಿಸಿದ್ದ ನರೇಂದ್ರ ಸಮ್ಮೇಲನದಲ್ಲಿ ಅವರಾಡಿದ ಖಂಡತುಂಡ ಮಾತುಗಳ ಫಲವಾಗಿ ಅನೇಕ ಸಂಸ್ಥಾನಗಳ ನರೇಂದ್ರರು ಒಕ್ಕೂಟದಲ್ಲಿ ಸೇರ್ಪಡೆಹೊಂದಲು ಒಪ್ಪಿದ್ದಾರೆ. ಈಗಾಗಲೆ ತಿರ್ವಾಂಕೂರು, ಬಡೋದೆ, ಕೊಚ್ಚಿ, ರಾಜಪಿಪ್ಪಲಾ, ಬಿಕಾನೇರ ಮೊದಲಾದ ೨೨ ಸಂಸ್ಥಾನಗಳು ಸೇರ್ಪಡೆ ಪತ್ರಕ್ಕೆ ಸಹಿ ಹಾಕಿದ್ದು ಇನ್ನುಳಿದ ಸಂಸ್ಥಾನಗಳೂ ಅಗಸ್ಟ ೧೦ ರೊಳಗೆ ಸೇರಬಹುದೆಂದೂಹಿಸಲಾಗಿದೆ. ಈ ಸೇರ್ಪಡೆ ಪತ್ರದನ್ವಯ ಸಂರಕ್ಷಣೆ, ಸಂಪರ್ಕ ಮತ್ತು ವಿದೇಶ ವಿಚಾರಗಳ ಸಂಬಂಧವಾಗಿ ಅನೇಕ ಅಧಿಕಾರಗಳನ್ನು ಸಂಸ್ಥಾನಾಧೀಶರು ಒಕ್ಕೂಟ ಸರಕಾರಕ್ಕೆ ಬಿಟ್ಟುಕೊಡುವರು. ಇತರ ಸಂಸ್ಥಾನಗಳ ಮೇಲೆ ಒತ್ತಾಯ ತರಲು ಪ್ರಜೆಗಳು ಚಳವಳಿ ಮಾಡತೊಡಗಿದ್ದಾರೆ. ಹೈದರಾಬಾದದಲ್ಲಿ ಸಾವಿರಾರು ಸಭೆಗಳಾಗಿ ಒಕ್ಕೂಟದಲ್ಲಿ ಸೇರಬೇಕೆಂಬ ಗೊತ್ತುವಳಿಗಳು ಪಾಸು ಮಾಡಲ್ಪಟ್ಟಿವೆ ಮೈಸೂರಲ್ಲಿ ಅಗಸ್ಟ ೯ ರ ನಂತರ ಹೊಣೆಗಾರ ಸರಕಾರಕ್ಕಾಗಿ ಹೋರಾಟ ಅರಂಭವಾಗುವದಿದೆ. ಕೊಲ್ಹಾಪುರ ಸಂಸ್ಥಾನಾಧೀಶರು ಉಳಿದ ಕೆಲ ಚಿಲ್ಲರೆ ದಕ್ಷಿಣ ಸಂಸ್ಥಾನಾಧೀಶರನ್ನು ಕಟ್ಟಿಕೊಂಡು ಒಕ್ಕೂಟವನ್ನು ಸೇರಲು ನಿರಾಕರಿಸುವ ಎತ್ತುಗಡೆ ನಡೆಸಿರುವ ವಿಷಯದಲ್ಲಿ ಅ ಭಾ ಸಂಸ್ಥಾನಿ ಪ್ರಜೆಗಳ ಪರಿಷತ್ತಿನ ಅಧ್ಯಕ್ಷರಾದ ಡಾ. ಪಟ್ಟಾಭಿಯವರು ಸಕಾಲಿಕ ಎಚ್ಚರಿಗೆ ಕೊಟ್ಟಿದ್ದಾರೆ. ಶಿವಾಜಿಯ ವಂಶಜರಾದ ನರೇಂದ್ರರನ್ನು ಪಡೆದಿರುವ ಕೊಲ್ಹಾಪುರದ ಈ ಪ್ರತಿಗಾಮಿತೆಯನ್ನು ನಿಷೇಧಿಸಿ ಅವರು ಕೊಲ್ಹಾಪುರ ಪ್ರಜೆಗಳು ಹೈದರಾಬಾದ ತಿರ್ವಾಂಕೂರು ಪ್ರಜೆಗಳನ್ನನುಸರಿಸಿ ಸಭೆ—ಗೊತ್ತುವಳಿಗಳ ಮೂಲಕ ತಮ್ಮ ಅಭಿಪ್ರಾಯವನ್ನು ಬಹಿರಂಗಗೊಳಿಸಬೇಕೆಂದು ಅವರು ಸೂಚಿಸಿದ್ದಾರೆ. ಕೊಲ್ಹಾಪುರ ಪ್ರಜೆಗಳ ಮಾತೃಭೂಮಿ ಕೊಲ್ಹಾಪುರವಲ್ಲ, ಭಾರತ ವರ್ಷ ಎಂದು ಅವರು ನೆನಪು ಮಾಡಿಕೊಟ್ಟಿದ್ದು ಉಚಿತವೇ ಆಗಿದೆ. ಆದರೂ ಒಟ್ಟಿನ ಮೇಲೆ ಸಂಸ್ಥಾನಿಕರು ಒಕ್ಕೂಟದಲ್ಲಿ ಸೇರುವ ಸಂಭಾವ್ಯತೆ ಹೆಚ್ಚಾಗಿದೆ. ಯನ್ನಲಡ್ಡಿಯಿಲ್ಲ—ಸೇರ್ಪಡೆ ಒಪ್ಪಂದನ್ವಯ ಒಪ್ಪಿಸಿಕೊಟ್ಟ ಅಧಿಕಾರಗಳು ಪರ್ಯಾಪ್ತವಿಲ್ಲೆಂದು ಮಾತ್ರ ಮರೆಯತಕ್ಕದ್ದಲ್ಲ.

ಕಾಂಗ್ರೆಸಿನ ಭವಿತವ್ಯ

ಕಾಂಗ್ರೆಸ್ಸು ತನ್ನ ಇಚ್ಛಿತಾರ್ಥವಾದ ಸ್ವಾತಂತ್ರ್ಯವನ್ನು ಸಂಪಾದಿಸಿರುವದರಿಂದ ಅದಿನ್ನು ಉಳಿಯಬೇಕಾಗಿಲ್ಲವೆಂಬ ಅಭಿಪ್ರಾಯವನ್ನು ಹಲವರು ವ್ಯಕ್ತಗೊಳಿಸಿದ್ದಾರೆ. ಪಕ್ಷಗಳನ್ನು ಉಂಟುಮಾಡುವದರಲ್ಲಿ ಎತ್ತಿದ ಕೈಯಾದ ಶ್ರೀ ಶರಚ್ಚಂದ್ರ ಬೋಸರು ಸಾಮ್ಯವಾದಿ ಪ್ರಜಾರಾಜ್ಯ ಪಕ್ಷವೊಂದನ್ನು ಕಟ್ಟಿದ್ದಾರೆ. ಶ್ರೀ ಜಯಪ್ರಕಾಶರು, ಕಾಂಗ್ರೆಸ್ಸು ಸಾಮ್ಯವಾದಿ ತತ್ವಜ್ಞಾನವನ್ನು ಬೇಗನೆ ಅಂಗೀಕರಿಸದಿದ್ದರೆ ತಾವು ಬೇರೆಯೆ ಪಕ್ಷ ರಚಿಸುವದಾಗಿ ಬೆದರಿಕೆ ಹಾಕಿದ್ದಾರೆ. ಹೀಗೆ ಕಾಂಗ್ರೆಸ್ಸಿನ ಭವಿತವ್ಯದ ಪ್ರಶ್ನೆ ಮಹತ್ವಪಡೆದಿರುವಾಗ ಕಾಂಗ್ರೆಸ್ ಅಧ್ಯಕ್ಷ ಕೃಪಲಾನಿಯವರೂ ಕಾರ್ಯದರ್ಶಿ ಶ್ರೀ ದೇವರೂ ಕೊಟ್ಟ ಹೇಳಿಕೆಗಳು ಗಮನಾರ್ಹವಾಗಿವೆ. ಹಿಂದುಸ್ತಾನದಲ್ಲಿ ಐಕ್ಯ ತಲೆದೋರದೆ ಅದು ನಿಜವಾದ ಸ್ವಾತಂತ್ರ್ಯವನ್ನು ಪಡೆದು, ಅಂದರೆ ದೊರೆತ ಸ್ವಾತಂತ್ರ್ಯವನ್ನು ದಕ್ಕಿಸಿಕೊಂಡು ಪ್ರಬಲ ರಾಷ್ಟ್ರಗಳ ಮಾಲಿಕೆಯಲ್ಲಿ ಅದು ಸ್ಥಾನಪಡೆಯಬೇಕಾದರೆ ಐಕ್ಯ ಅತ್ಯವಶ್ಯ. ಅದನ್ನು ಸಾಧಿಸುವ ಸಾಮರ್ಥ್ಯ ಜನಾದರಕ್ಕೆ ಪಾತ್ರವಾದ ಕಾಂಗ್ರೆಸಿಗೊಂದೆ ಸಾಧ್ಯ. ಹಿಂ ದು ಸ್ತಾ ನ ದ ಲ್ಲಿ ಸಾಮ್ಯವಾದಿ ಪ್ರಜಾಸತ್ತೆಯನ್ನು ಸ್ಥಾಪಿಸಿ, ರೈತ, ಕೂಲಿಕಾರ ಮತ್ತು ಬುದ್ಧಿಜೀವಿಗಳ ಸ್ವಾಮ್ಯವನ್ನು ಅಸ್ತಿತ್ವಕ್ಕೆ ತರುವದೇ ಕಾಂಗ್ರೆಸ್ಸಿನ ಧ್ಯೇಯವೆಂದೂ ಅರ್ಥಿಕ ವೈಷಮ್ಯಗಳನ್ನು ಪರಿಹರಿಸಿ ಹೊಸ ಸಮಾಜವನ್ನು ರಚಿಸುವ ಕಾರ್ಯವನ್ನು ಇನ್ನು ಕಾಂಗ್ರೆಸ್ಸು ಕೈಕೊಳ್ಳುವದೆಂದು ಕಾರ್ಯದರ್ಶಿ ದೇವರು ಪ್ರಕಟಿಸಿದ್ದಾರೆ. ಹೋಳಾದ ಭಾರತವನ್ನು ಒಂದಾಗಿ ಮಾಡುವದಕ್ಕೆ ಕಾಂಗ್ರೆಸ್ಸು ಇನ್ನೂ ಉಳಿಯಬೇಕೆಂದು ಶ್ರೀ. ಕೃಪಲಾನಿಯವರು ಹೇಳಿದರು.

ಪಾಕಿಸ್ತಾನ ಧ್ವಜ

ಪಾಕಿಸ್ತಾನದ ಧ್ವಜದ ರೂಪರೇಷೆ ಸಿದ್ಧವಾಗಿದ್ದು ಅದರಲ್ಲಿ ದಟ್ಟ ಹಸಿರು ಬಣ್ಣದಲ್ಲಿ ಚಂದ್ರತಾರೆಯ ಮುಸ್ಲಿಂ ಸಂಕೇತವನ್ನೂ ಒಂದು ಬದಿಯಲ್ಲಿ ಅಲ್ಪಸಂಖ್ಯಾಕರ ಸಂಜ್ಞೆಯೆಂದು ಮೇಲಿಂದ ಕೆಳಗೆ ಮೂರನೆಯ ಒಂದಂಶದಷ್ಟು ಬಿಳಿಯ ಪಟ್ಟಿಯನ್ನೂ ಹಾಕಲಿರುವದಂತೆ.

ಅಂತರರಾಷ್ಟ್ರೀಯ

ಯುಕ್ತರಾಷ್ಟ್ರದಲ್ಲಿ ಇಂಡೋನೇಶಿಯಾ ಪ್ರಶ್ನೆ

ಇಂಡೊನೇಶಿಯನ್ ಪ್ರಜಾರಾಜ್ಯದ ಮೇಲೆ ಡಚ್ಚರು ಹೂಡಿದ ಹೋರಾಟದ ವಿಷಯದಲ್ಲಿ ಯುಕ್ತರಾಷ್ಟ್ರ ಭದ್ರತಾಮಂಡಲಕ್ಕೆ ಎರಡೆರಡು ದೂರುಗಳು ಒಮ್ಮೆಲೆ ಹೋದವು— ಒಂದು ಹಿಂದುಸ್ತಾನದಿಂದ, ಇನ್ನೊಂದು ಆಸ್ಟ್ರೇಲಿಯಾದಿಂದ. ಈ ಬಗ್ಗೆ ಭದ್ರತಾ ಮಂಡಲ ಕೈಕೊಂಡ ಕ್ರಿಯೆಯ ಗುಣದೋಷಗಳೇನೇ ಇರಲಿ, ಆ ಕ್ರಿಯೆ ಅತಿ ರಭಸದಿಂದಲೇ ಕೈಕೊಳ್ಳಲ್ಪಟ್ಟಿತು. ಆಸ್ಟ್ರೇಲಿಯಾದ ದೂರನ್ನೇ ಮೊದಲು ತೆಗೆದುಕೊಂಡು ವಿಚಾರಿಸಲಾಯಿತು. ಇದಕ್ಕೆ ಬ್ರಿಟಿಶ ಸರಕಾರದ ಒತ್ತಾಯವೇ ಕಾರಣವೆಂದು ಭಾವಿಸಲ್ಪಟ್ಟಿದೆ. ಹೇಗೇ ಇರಲಿ, ಚರ್ಚೆಯ ಕಾಲಕ್ಕೆ ಹಿಂದುಸ್ತಾನಕ್ಕೂ ತನ್ನ ವಿಚಾರಗಳನ್ನು ಮಂಡಿಸಲು ಅವಕಾಶ ದೊರೆಯಿತು. ವಾಶಿಂಗಟನ್ ರಾಯಭಾರಿ ಗೃಹದ ಶ್ರೀ ಸೇನರು ಹಿಂದುಸ್ತಾನದ ಪರವಾಗಿ ಹಾಜರಾಗಿದ್ದರು.

ಆ ಆಸ್ಟ್ರೇಲಿಯಾದ ಗೊತ್ತುವಳಿಯಲ್ಲಿ, ಯುದ್ಧವನ್ನು ಒಡನೆ ನಿಲ್ಲಿಸಿ ತಂಟೆಯನ್ನು ಮಧ್ಯಸ್ಥಿಕೆಯಿಂದ ಬಗೆಹರಿಸಿಕೊಳ್ಳಬೇಕೆಂದು ಉಭಯ ಪಕ್ಷಗಳಿಗೆ ಆಜ್ಞಾಪಿಸಲಾಗಿತ್ತು. ಈ ಗೊತ್ತುವಳಿ ಭದ್ರತಾ ಮಂಡಲದಲ್ಲಿ ೮ ಮತಗಳಿಂದ ಪಾಸಾಯಿತು. ಬ್ರಿಟನ್, ಫ್ರಾನ್ಸ, ಬೆಲ್ಜಿಯಂಗಳು ತಟಸ್ಥ ಉಳಿದವು.

ಈ ಆಜ್ಞೆಯ ಪ್ರಕಾರ ಡಚ್ಚರು ತಾ ೪—೮ ಮಧ್ಯ ರಾತ್ರಿಗೆ ಯುದ್ಧ ನಿಲ್ಲಿಸಲು ತಮ್ಮ ಸೈನ್ಯಕ್ಕೆ ಆಜ್ಞೆಯಿತ್ತಿದ್ದಾರೆ. ಹೋರಾಟವೀಗ ನಿಂತಿದೆ. ಮಧ್ಯಸ್ಥಿಕೆ ನಡೆಸಲು ಬ್ರಿಟಿಶರೂ ಅಮೇರಿಕನ್ನರೂ ಸಿದ್ಧರಾಗಿದ್ದಾರೆ. ಆದರೆ ಈ ಕ್ರಮ ಕೈಕೊಳ್ಳುವ ಮೊದಲು ಇಡಿ ತಂಟೆಯನ್ನು ಭದ್ರತಾ ಮಂಡಲ ಕೂಲಂಕಷವಾಗಿ ವಿಚಾರಿಸುವದು. ಇಂಡೊನೇಶಿಯಾದ ಪಕ್ಷವನ್ನು ಮಂಡಿಸಲು ಡಾ. ಶಹರೀರರು ಹಿಂದುಸ್ತಾನದಿಂದ ಅಮೇರಿಕೆಗೆ ಹೋದರು.

ತೃಪ್ತಿಕರ ನಿರ್ಣಯವಲ್ಲ

ಭದ್ರತಾ ಮಂಡಲದ ಈ ಶೀಘ್ರ ನಿರ್ಣಯ ಸ್ವಾಗತಾರ್ಹವಿದ್ದರೂ ಅದು ಸರ್ವಥಾ ತೃಪ್ತಿಕರವಿಲ್ಲವೆಂದು ಹೇಳಬೇಕು. ಡಚ್ಚರು ಪ್ರಜಾರಾಜ್ಯದ ಅನೇಕ ಪ್ರದೇಶಗಳನ್ನು ಗೆದ್ದುಕೊಂಡಿದ್ದರು. ಜಾವಾದ ಎಲ್ಲ ಮುಖ್ಯ ಬಂದರಗಳು ಅವರ ವಶವಾಗಿದ್ದವು. ಇಡಿ ದ್ವೀಪವನ್ನು ಇಬ್ಭಾಗಿಸಿ ಬೇರ್ಪಡಿಸುವಂತೆ ಅವರ ಸೈನ್ಯ ಹಬ್ಬಿದೆ. ಟಿನ್ ಖಣಿಗಳು, ಸಕ್ಕರೆ ಕಾರಖಾನೆಗಳು, ರಬ್ಬರ, ಚಹಾ ಮೊದಲಾದ ತೋಟಗಳು ಅವರ ಅಂಕೆಯಲ್ಲಿ ಬಂದಿವೆ. ಮೇಲಾಗಿ ಪ್ರಜಾರಾಜ್ಯಕ್ಕೆ ಸೇರಿದ ಪ್ರತಿಯೊಂದು ದ್ವೀಪದಲ್ಲಿಯೂ ಅವರು ಕಾಲೂರಿದ್ದಾರೆ. ಹೀಗಿದ್ದರೂ ಭದ್ರತಾ ಮಂಡಲದಲ್ಲಿ, ಉಭಯ ಪಕ್ಷಗಳೂ ಈ ಹೋರಾಟ ಪ್ರಾರಂಭವಾಗುವ ಮೊದಲಿದ್ದ ಸ್ಥಾನಗಳಿಗೇ ಮರಳಬೇಕೆಂದು ರಶಿಯನ್ನರು ತಂದ ಗೊತ್ತುವಳಿಗೆ ಪೋಲಂಡ ಹೊರತು ಬೇರಾರೂ ಬೆಂಬಲ ಕೊಡಲಿಲ್ಲ. (ಹಿಂದುಸ್ತಾನದ ಬೇಡಿಕೆ ಇದೇ ಆಗಿತ್ತು. ಆದರೆ ಭದ್ರತಾ ಮಂಡಲದಲ್ಲಿ ನಮಗೆ ಸ್ಥಾನವಿಲ್ಲ.) ಈ ದೂರನ್ನೇ ಹಿಡಿಯಬಾರದೆಂದೂ ಇದು ತಮ್ಮ "ಆಂತರಿಕ" ಪ್ರಶ್ನೆಯೆಂದೂ ಇಂಡೋನೇಶಿಯಾಕ್ಕೆ ಅಂತರ್ರಾಷ್ಟ್ರೀಯ ಸ್ಥಾನಮಾನವಿಲ್ಲೆಂದೂ ಸಾಧಿಸಲೆತ್ನಿಸಿದ ಡಚ್ ಪ್ರತಿನಿಧಿ ವಾನ ಕ್ಲಿಫನ್ಸರಿಗೆ ವಿಜಯ ದೊರಕದಿದ್ದರೂ ಡಚ್ಚರಿಗೆ ಬೇಕಾಗಿದ್ದ ಅನೇಕ ಭಾಗಗಳು ಅವರ ಕೈಸೇರಿರುವದರಿಂದ ಅವರ ಕೆಲಸ ಗೆದ್ದಿತೆಂದೇ ಹೇಳಬೇಕು. ತಾ. ೨ಕ್ಕೆ ಭದ್ರತಾಮಂಡಲ ನಿರ್ಣಯ ಮಾಡಿದ್ದರೂ ತಾ. ೪ ಮಧ್ಯರಾತ್ರಿಯ ವರೆಗೂ ಡಚ್ಚರು ಯುದ್ಧ ಸಾಗಿಸಿದರು. ತಾ. ೪ ಮಧ್ಯರಾತ್ರಿಗೆ ಸ್ವಲ್ಪ ಮೊದಲು, ಆ ವರೆಗೆ ತಾವು ಕಾಲೂರದಿದ್ದ ಮದುರಾ ದ್ವೀಪದಲ್ಲಿಯೂ ಇಳಿದರು! ಟಿನ್ ಉತ್ಪಾದಕ ಪ್ರದೇಶಗಳಲ್ಲಿ ಅವರು "ಸ್ವಾಯತ್ತ ಪ್ರದೇಶ"ಗಳನ್ನು ಕೂಡ ಸ್ಥಾಪಿಸುವರಂತೆ. ಡಚ್ಚರ ಆಕ್ರಮಣಕ್ಕೆ ಇಂಡೊನೇಶಿಯನ್ನರು ಕಾರಖಾನೆ ತೋಟ ಮೊದಲಾದವುಗಳನ್ನು ನಾಶಗೊಳಿಸಿ ಉತ್ತರ ಕೊಟ್ಟಿದ್ದು ತಪ್ಪಲ್ಲ.

ರಾಷ್ಟ್ರಗಳ ಧೋರಣೆ

ಭದ್ರತಾ ಮಂಡಲದ ಚರ್ಚೆಯಲ್ಲಿ ವಿವಿಧ ಪ್ರಮುಖ ರಾಷ್ಟ್ರಗಳು ವಹಿಸಿದ ನೀತಿ ಏಶಿಯನ್ ರಾಷ್ಟ್ರಗಳಿಗೆ ಬೋಧಪ್ರದವಾಗಿದೆ. ಇಂಡೊನೇಶಿಯಾದಲ್ಲಿ ಶಾಂತಿಯಿರಲೆಂದೂ ತಾನು ಮಧ್ಯಸ್ಥಿಕೆ ವಹಿಸಲು ಸಿದ್ಧವೆಂದೂ ಸಾರಿದ ಬ್ರಿಟನ್ನು ಭದ್ರತಾ ಮಂಡಲದಲ್ಲಿ ಈ ಪ್ರಶ್ನೆಯನ್ನು ಚರ್ಚಿಸುವದಕ್ಕೇ ಅನುಕೂಲಾಭಿಪ್ರಾಯ ಪಡಲಿಲ್ಲ. ಇದರಿಂದ ಹಲವು "ಅಂತರ್ರಾಷ್ಟ್ರೀಯ ಜಟಿಲತೆಗಳು" ಉತ್ಪನ್ನವಾಗಬಹುದೆಂದು ಬ್ರಿಟಿಶ ಪ್ರತಿನಿಧಿ ಎಚ್ಚರಿಸಿದನು. ರಶಿಯನ್ ತಿದ್ದುಪಡಿ ಬಿದ್ದು ಹೋದುದೇನ್ನು ನೋಡಿದರೆ ಆಸ್ಟ್ರೇಲಿಯಾದ ದೂರಾದರೂ ಬ್ರಿಟಿಶ ಕೈವಾಡವೇ ಇರಬೇಕೆಂದು ಎನಿಸುತ್ತದೆ. ಪಾಕಿಸ್ತಾನದ ಬೆಂಬಲದಿಂದ ಹಿಂದುಸ್ತಾನ ಕೊಟ್ಟ ದೂರು ವಿಚಾರಣೆಗೆ ಬಂದರೆ ಏಶಿಯನ್ನರು ತಮ್ಮ ತಲೆಗೆ ತಮ್ಮ ಕೈ ಹೊರತು ಬಿಳಿಯರನ್ನು ನಂಬಿ ಫಲವಿಲ್ಲೆಂದು ಬಗೆಯಬಹುದು ಮತ್ತು ಬಿಳಿಯರ ಅಳಿದುಳಿದ ಪ್ರತಿಷ್ಠೆಯೂ ಇಲ್ಲದಾದೀತು. ಅಲ್ಲದೆ ಡಚ್ಚರು ಹೊಸದಾಗಿ ಆಕ್ರಮಿಸಿದ ಸ್ಥಳಗಳನ್ನು ಬಿಟ್ಟು ಕದಲಬೇಕೆಂದು ಹಿಂದೀಯರು ಸಭೆಯಲ್ಲಿ ಒತ್ತಾಯಪಡಿಸುವ ಸಂಭವವಿತ್ತು. ಮತದಾನದ ಕಾಲಕ್ಕೆ ಬ್ರಿಟನ್, ಫ್ರಾನ್ಸ, ಬೆಲ್ಜಿಯಂಗಳು ತಟಸ್ಥ ಉಳಿದುದು ಅರ್ಥಪೂರ್ಣವಾಗಿತ್ತು. ಇವು ಮೂರೂ ಯುರೋಪಿಯನ್ ರಾಷ್ಟ್ರಗಳು ಒಂದಲ್ಲಒಂದುಬಗೆಯಲ್ಲಿ ಪೌರ್ವಾತ್ಯ ಜನಾಂಗಗಳನ್ನು ಮೆಟ್ಟಿ ಮೆರೆಯುವವುಗಳೇ ಆಗಿವೆ. ಆದ್ದರಿಂದ "ಭದ್ರತಾ ಮಂಡಲಕ್ಕೆ ಈ ಪ್ರಶ್ನೆಯನ್ನು ಚರ್ಚಿಸುವ ಅಧಿಕಾರವುಂಟೋ ಇಲ್ಲವೋ" ಎಂದು ಅವು ಸಂಶಯಪಟ್ಟಿದ್ದು ಸ್ವಾಭಾವಿಕ. ಇದಲ್ಲದೆ ಈಚೆಗೆ ಪ್ರಮುಖರೊಬ್ಬರು ಹೇಳಿದಂತೆ ಯುರೋಪಿನ ಬಲಾಬಲಗಳ ಸಮತೋಲ ಎಷ್ಟು ಸೂಕ್ಷ್ಮಾವಸ್ಥೆಯಲ್ಲಿದೆಯೆಂದರೆ ಒಂದೇ ಒಂದು ರಾಷ್ಟ್ರ ರಶಿಯಾದ ಕಡೆ ಹೊರಳಿದರೆ ಅಂಗ್ಲೋ-ಅಮೇರಿಕನ್ ಗುಂಪು ಒಡೆದು ಹೋದೀತು. ಕೆಲ ಕೋಟಿ ಇಂಡೊನೇಶಿಯನ್ನರಿಗಾಗಿ ಅಂಥ ಬಿಕ್ಕಟ್ಟನ್ನುಂಟುಮಾಡಲು ಯಾರು ಆಶಿಸಿಯಾರು? ಡಚ್ಚರು ಕೈಕೊಂಡ ಕ್ರಮಕ್ಕೆ ಅಂಗ್ಲೋ-ಅಮೇರಿಕನ್ನರ ಮೌನ ಸಮ್ಮತಿಯಿತ್ತೆಂದು ಡಚ್ ಪತ್ರಿಕೆಗಳು ಬರೆದದ್ದರಲ್ಲಿ ಅಷ್ಟೇನೂ ಸುಳ್ಳು ಇರಲಿಕ್ಕಿಲ್ಲ.

ಹಿಂದುಸ್ತಾನ ಇದರಲ್ಲಿ ಆಸ್ಥೆವಹಿಸಲು ಎರಡು ಕಾರಣಗಳಿವೆ. ಏಶಿಯಾದಲ್ಲಿ ನಾವು ಒಬ್ಬರಿಗೊಬ್ಬರು ಆಗದಿದ್ದರೆ ಎಂದಿಗೂ ದಾಸ್ಯವಿಮೋಚನೆಯಿಲ್ಲವೆಂಬದೊಂದು. ಇನ್ನೊಂದು ಇಂಡೊನೇಶಿಯಾದ ಆಹಾರ ಪದಾರ್ಥಗಳಲ್ಲಿ ನಮಗಿರುವಹಿತಸಂಬಂಧ. ಡಚ್ಚರ ದಿಗ್ಬಂಧನದಿಂದ ನಮಗೆ ಕಳೆದ ವರ್ಷ ದೊರೆಯಬೇಕಾಗಿದ್ದ ಭತ್ತ ಅಲ್ಲಿಂದ ದೊರೆಯಲಿಲ್ಲ. ಇಂಡೊನೇಶಿಯಾಕ್ಕೆ ವೈದ್ಯಕೀಯ ಸಾಮುಗ್ರಿಗಳನ್ನೊಯ್ಯುತಿದ್ದ ನಮ್ಮ ಡಾಕೋಟಾ ವಿಮಾನವನ್ನು ಅಕಾರಣವಾಗಿ ಡಚ್ಚರು ಕೆಡಹಿ ನಾಲ್ವರು ಹಿಂದೀಯರ ಹಾಗೂ ಇತರರ ಮರಣಕ್ಕೆ ಕಾರಣರಾಗಿ ಇನ್ನಷ್ಟು ದ್ವೇಷವನ್ನು ಹುಟ್ಟಿಸಿದ್ದಾರೆ.

ಗ್ರೀಕ ಗಡಿಯ ತಿಕ್ಕಾಟ

ಗ್ರೀಕ್ ಗಡಿಯಲ್ಲಿ ಸುತ್ತಮುತ್ತಲಿನ ಬಾಲ್ಕನ ರಾಷ್ಟ್ರಗಳ ಸಹಾಯದಿಂದಲೇ ಕೂಟಯೋಧರು ಸರಕಾರದ ವಿರುದ್ಧ ಹೋರಾಡಿ ಶಾಂತಿಭಂಗ ಮಾಡುತಿರುವರೆಂದು ಭದ್ರತಾ ಮಂಡಲಕ್ಕೆ ಗ್ರೀಸು ಕೊಟ್ಟ ದೂರಿನ ವಿಚಾರಣೆ ನಡೆಸಲು ಯುಕ್ತರಾಷ್ಟ್ರ ಸಂಘದ ಶಿಷ್ಟಮಂಡಲವೊಂದು ಕೆಲ ತಿಂಗಳ ಹಿಂದೆ ಹೋಗಿ ಸ್ಥಳ ಪರೀಕ್ಷೆ ಮಾಡಿ ಒಂದು ವರದಿ ಒಪ್ಪಿಸಿತು. ಅದರಲ್ಲಿ ಗ್ರೀಸಿನ ಅಂತರ್ಯುದ್ಧಕ್ಕೆ ನೆರೆಹೊರೆಯ ಅಲ್ಬೇನಿಯಾ, ಯುಗೋಸ್ಲಾವಿಯಾ, ಬಲ್ಗೇರಿಯಾ ರಾಷ್ಟ್ರಗಳು ಉತ್ತೇಜನ ಸಹಾಯಗಳನ್ನು ಕೊಡುತಿವೆಯೆಂದು ಬಹುಮತದಿಂದ ತೀರ್ಮಾನಿಸಲಾಗಿತ್ತು. ರಶಿಯಾ ಪೋಲಂಡುಗಳು ಮಾತ್ರ ಈ ತೀರ್ಮಾನಕ್ಕೆ ಅಸಮ್ಮತಿಯನ್ನು ಜೋಡಿಸಿ ಗ್ರೀಕ ಸರಕಾರದ ಧೋರಣವೇ ಅಲ್ಲಿನ ಅಶಾಂತಿಗೆ ಕಾರಣವೆಂದಿದ್ದವು. ಆ ವರದಿಯ ಬಹುಸಂಖ್ಯಾಕರು ಬಾಲ್ಕನ್ ಭೂಮಿಯಲ್ಲಿ ಒಂದು ರಾಷ್ಟ್ರ ಇನ್ನೊಂದರಲ್ಲಿ ಪಿತೂರಿಯೆಬ್ಬಿಸದಂತೆ ಒಂದು "ಕಾವಲು ಕಟ್ಟೆ"ಯನ್ನು ಯುಕ್ತರಾಷ್ಟ್ರ ಸಂಘದ ಪರವಾಗಿ ನೇಮಿಸಬೇಕೆಂದು ಸೂಚಿಸಿದ್ದರು. ಆದರೆ ಈ ಸೂಚನೆಯನ್ನು ಅಂಗೀಕರಿಸುವ ಗೊತ್ತುವಳಿಯನ್ನು ಭದ್ರತಾ ಮಂಡಲ ಸ್ವೀಕರಿಸಿದೊಡನೆ ರಶಿಯಾ ತನ್ನ ಪ್ರತಿರೋಧಾಧಿಕಾರ (ವ್ಹೆಟೊ) ಉಪಯೋಗಿಸಿ ಗೊತ್ತುವಳಿಯನ್ನು ರದ್ದುಗೊಳಿಸಿತು. ತನ್ನ ಪ್ರಭಾವಕ್ಕೊಳಗಾದ ರಾಷ್ಟ್ರಗಳ ಮೇಲೆ "ಕಾವಲು" ಇಡುವ ಉಪಕ್ರಮ ರಶಿಯಾಕ್ಕೆ ರುಚಿಸೀತೆ? ಈಗ ಗ್ರೀಸು ತನ್ನ ನೆರೆಹೊರೆಯ ಕಮ್ಯುನಿಸ್ಟ್ ರಾಜ್ಯಗಳ ಮೇಲೆ ಅಂತರ್ರಾಷ್ಟ್ರೀಯ ಶಾಂತಿಭಂಗಕ್ಕೆ ಕಾರಣವಾಗುತ್ತಿವೆಯೆಂದು ಹೊಸ ದೂರು ಕೊಡಲಿದೆಯಂತೆ! ಗ್ರೀಸಿನ ಶಾಂತಿಭಂಗಕ್ಕೆ ಅಲ್ಲಿರುವ ವಿದೇಶಿ ಸೈನ್ಯ ಮತ್ತು ವಿದೇಶಿ ಧನಸಹಾಯಗಳೇ ಕಾರಣವಾಗಿರುವದರಿಂದ ವಿದೇಶಿ ಬ್ರಿಟಿಶ ಮತ್ತು ಅಮೇರಿಕನ್ ಸೈನ್ಯಗಳನ್ನು ಹಿಂತೆಗೆಯುವಂತೆಯೂ ವಿದೇಶೀ ಧನ ಸಹಾಯ (ಅಮೇರಿಕನ್)ವನ್ನು ವಿನಿಯೋಗಿಸಲು ಯುಕ್ತರಾಷ್ಟ್ರ ಮಂಡಲ ನೇಮಿಸಬೇಕೆಂದೂ ರಶಿಯಾವೊಂದು ಸೂಚನೆ ತಂದದ್ದು ಭದ್ರತಾಮಂಡಲದಲ್ಲಿ ಬಿದ್ದುಹೋಯಿತು.

ಬ್ರಿಟನ್ನಿನ ಆರ್ಥಿಕ ವಿಪನ್ನತೆ

ಬ್ರಿಟನ್ನಿನಲ್ಲಿ ಆರ್ಥಿಕ ಬಿಕ್ಕಟ್ಟು ಅತ್ಯಂತ ಕಠೋರದಶೆಗೆ ಮುಟ್ಟುತಿದೆಯೆಂಬ ಸಂಜ್ಞೆಗಳು ದಿನಹೋದಂತೆ ಹೆಚ್ಚುತಿವೆ. ಕಳೆದ ವರ್ಷ ಅಮೇರಿಕೆಯಿಂದ ದೊರೆತ ಸಾಲ ನಿರೀಕ್ಷಿಸಿದ್ದಕ್ಕಿಂತ ಎಷ್ಟೋ ತೀವ್ರವಾಗಿ ವೆಚ್ಚವಾಗುತಿರುವದರಿಂದ ಮಾರ್ಶಲ್ಲರ ಯೋಜನೆಯನ್ವಯ ಯುರೋಪಿಗೆ ಸಹಾಯ ಬರುವವರೆಗಿನ ಕಠಿನ ಕಾಲವನ್ನು ಹೇಗೆ ದೂಡಬೇಕೆಂಬದೇ ಬ್ರಿಟಿಶ ಅರ್ಥಶಾಸ್ತ್ರಗಳಿಗೆ ಬಗೆಹರಿಯದಾಗಿದೆ. ಬ್ರಿಟಿಶ ಭಾಂಡಾರದಲ್ಲಿರುವ ಚಿನ್ನದ ಸಂಗ್ರಹವನ್ನು ವಿಪತ್ಕಾಲದಲ್ಲಿ ಎಲ್ಲಿ ಸರಕಾರ ಉಪಯೋಗಿಸಿಬಿಡುವದೋ ಎಂಬ ಭಯ ವಿರೋಧಿ ಪಕ್ಷಕ್ಕೆ ಉಂಟಾಗಿ ಕಳೆದ ವಾರ ಹಾಗೆ ಬಳಸುವದಿಲ್ಲೆಂದು ಸರಕಾರದಿಂದ ಆಶ್ವಾಸನ ಕೇಳಲಾಯಿತು. ಸರಕಾರದವರು ಅಂಥ ಆಶ್ವಾಸನ ಕೊಡಲೊಪ್ಪದ್ದು ಗಮನಾರ್ಹವಾಗಿದೆ. (ಬ್ರಿಟಿಶ ಭಾಂಡಾರದಲ್ಲಿ ಸುಮಾರು ೨೦೦ ಕೋಟಿ ಡಾಲರ ಬೆಲೆಯ ಚಿನ್ನವುಂಟೆಂದು ಅಂದಾಜು.

ಈ ಆರ್ಥಿಕ ಬಿಕ್ಕಟ್ಟಿನಿಂದ ಪಾರಾಗಲು ಮಂತ್ರಿ ಮಂಡಲದ ಪ್ರಮುಖ ಸದಸ್ಯರು ಹಗಲಿರುಳು ಚಿಂತಿಸುತಿದ್ದಾರೆ. ಕೂಲಿಕಾರ ಪಕ್ಷದ ಯಶ—ಅಪಯಶವೇ ಇದನ್ನು ಅವಲಂಬಿಸಿದೆ. ವಿರೋಧಿ ಪಕ್ಷದವರು ಈಗಾಗಲೆ ಈ ಆರ್ಥಿಕ ಅನಾಹುತದಿಂದಪಾರಾಗಲು ಸರಕಾರ "ಏನನ್ನೂ ಮಾಡುತ್ತಿಲ್ಲ" ಎಂದು ಅರಚುತಿದ್ದಾರೆ. ಚರ್ಚಿಲ್ಲರು ಒಂದು ಭಾಷಣದಲ್ಲಿ ಸರ್ವನಾಶವಾದರೂ ಸಂಮಿಶ್ರ ಸರಕಾರ ಸ್ಥಾಪಿಸುವದಿಲ್ಲೆಂಬ ಕೂಲಿಕಾರ ಧೋರಣೆಯನ್ನು ಖಂಡಿಸಿದರು. ಸರಕಾರದಲ್ಲಿ ಸೇರಲು ಅವರು ಮತ್ತೆ ಆತುರರಾಗಿದ್ದಾರೆ.

ಬ್ರಿಟಿಶ ಸರಕಾರದವರು ಈ ಸಂಬಂಧದಲ್ಲಿ ಕೈಕೊಳ್ಳಲಿರುವ ಉಪಾಯಗಳಲ್ಲಿ ಮಿತವ್ಯಯ ಯೋಜನೆಯೊಂದು. ಮುಂದಿನ ೬ ತಿಂಗಳಲ್ಲಿ ೭ ಕೋಟಿ ಪೌಂಡು ಹಣವನ್ನುಳಿಸಲು ಅಷ್ಟು ಮಟ್ಟಿಗೆ ಹೊರಗಿಂದ ಸಾಮುಗ್ರಿ ತರಿಸುವದನ್ನು ಕಡಿಮೆ ಮಾಡುವ ವಿಚಾರವಿದೆಯಂತೆ. (ಈಗ ತಿಂಗಳಿಗೆ ೧೫ ಕೋಟಿ ಪೌಂಡುಗಳಷ್ಟು ಆಯಾತ ಮತ್ತು ೯.೩ ಕೋಟಿಯಷ್ಟು ನಿರ್ಯಾತ ಮಾಡಿ ಕೊರತೆಯನ್ನು ಅಮೇರಿಕೆಯ ಸಾಲದಿಂದ ತುಂಬಲಾಗುತ್ತದೆ.) ಈ ಹೊಸ ಉಪಾಯದಿಂದ ಬ್ರಿಟಿಶ ಜನರು ಎಷ್ಟೋ ಭೋಗವಸ್ತುಗಳಿಗೆರವಾಗಬೇಕಾದೀತು.

ಇನ್ನೊಂದು ಉಪಾಯವೆಂದರೆ ವಿದೇಶಗಳಲ್ಲಿರುವ ಬ್ರಿಟಿಶ ಸೈನ್ಯಗಳನ್ನು ತಿರುಗಿ ಕರೆಸುವದು. ಸ್ವದೇಶದಲ್ಲಿ ಜನಶಕ್ತಿಯ ಅಭಾವದಿಂದ ಉದ್ಯೋಗಗಳು ಹಿಂದೆಬಿದ್ದಿರುವದಾಗಿ ವಿದೇಶಗಳಲ್ಲಿ ದೊಡ್ಡ ದೊಡ್ಡ ಸೈನ್ಯಗಳನ್ನಿಡುವ ಬೆವಿನ್ ವಿದೇಶ ಧೋರಣೆಯನ್ನು ಟೀಕಿಸುವವರ ಸಂಖ್ಯೆ ಬೆಳೆದಿದೆ. ಮಿಲಿಟರಿ ವಿಚಾರಗಳನ್ನು ಪರಿಶೀಲಿಸುತ್ತ ಪೂರ್ವಪ್ರಾಚ್ಯದಲ್ಲಿ ಸಂಚರಿಸುತಿದ್ದ ಜ. ಮಾಂಟಿಗಮರಿಯವರನ್ನು ತಿರುಗಿ ಕರೆಸಲು ಇದೇ ಕಾರಣವೆಂದು ನಂಬಲಾಗಿದೆ. ಹೊರಗಿರುವ ಬ್ರಿಟಿಶ ಸೈನ್ಯಕ್ಕೆ ಬೀಳುವ ವೆಚ್ಚವನ್ನು ಉಳಿಸಲು ಜರ್ಮನಿಯ ಆಕ್ರಮಣ ವೆಚ್ಚವನ್ನು ಹೆಚ್ಚಾಗಿ ಅಮೇರಿಕೆಯೆ ವಹಿಸಬೇಕೆಂದು ಬ್ರಿಟನ್ನು ಕೇಳುವದಂತೆ.

ನಾಳೆ ಅಕ್ಟೋಬರಕ್ಕೆ ಬ್ರಿಟಿಶ ಆರ್ಥಿಕ ಬಿಕ್ಕಟ್ಟು ವಿಪದವಸ್ಥೆಯನ್ನು ಮುಟ್ಟಬಹುದು.

ಯಹೂದ್ಯರ ಪ್ರತಿಹಿಂಸೆ

ಪ್ಯಾಲಿಸ್ತಾನದ ಯಹೂದ್ಯ ಕ್ರಾಂತಿಕಾರರು ತಮ್ಮನ್ನೇ ತಾವು ಮೀರಿಸಿ ಕಳೆದ ವಾರ ಪ್ರಚಂಡ ಪಾತಕ ಕೃತ್ಯವೊಂದನ್ನು ನಡೆಸಿಕೊಂಡರು. ಇಬ್ಬರು ಬ್ರಿಟಿಶ ಸೈನಿಕರನ್ನು ಅಪಹರಿಸಿಕೊಂಡೊಯ್ದು ಮೂರುವಾರಗಳ ವರೆಗೆ ಅವರನ್ನು ಬಂಧಿಸಿಟ್ಟು ಕೊನೆಗೊಂದು ದಿನ ಒಂದು ಗಿಡಕ್ಕೆ ಅವರಿಬ್ಬರನ್ನೂ ತೂಗು ಹಾಕಿ "ಗಲ್ಲಿಗೇರಿಸಿ"ದರು. ಅವರಿಗೆ ಈ ಶಿಕ್ಷೆಯನ್ನು ಕ್ರಾಂತಿಕಾರರ "ನ್ಯಾಯಸ್ಥಾನ" ವಿಧಿಸಿತಂತೆ! ಕಾರಣ ಬೇರೇನೂ ಇಲ್ಲ: ಕೆಲ ತಿಂಗಳ ಹಿಂದೆ ಏಕರದಲ್ಲಿದ್ದ ಮುಖ್ಯ ಸೆರೆಮನೆಯನ್ನೊಡೆದು ಯಹೂದ್ಯ ಕ್ರಾಂತಿಕಾರರು ಅನೇಕ ಬಂದಿಗಳನ್ನು ಬಿಡುಗಡೆ ಮಾಡಿದ್ದರ ಸಂಬಂಧದಲ್ಲಿ ಮೂವರು ಯಹೂದ್ಯರನ್ನು ಗಲ್ಲಿಗೇರಿಸಲಾಗಿತ್ತು. ಅದಕ್ಕೆ ಪ್ರತೀಕಾರವಾಗಿ ಈ ಹತ್ಯಾಕಾಂಡ. ಇದಲ್ಲದೆ ಇನ್ನೇಳು ಜನ ಬ್ರಿಟಿಶರನ್ನು ಗಲ್ಲಿಗೇರಿಸುವದಾಗಿ ಕ್ರಾಂತಿಕಾರರು ಸಾರಿದ್ದಾರೆ. ಏಕೆಂದರೆ ಬ್ರಿಟಿಶರ ನ್ಯಾಯಸ್ಥಾನಗಳು ಈ ವರ್ಷ ಒಟ್ಟು ೯ ಯಹೂದ್ಯರನ್ನು ಮರಣದಂಡನೆಗೆ ಗುರಿಪಡಿಸಿವೆಯಂತೆ. ಯಹೂದ್ಯರು ಎಂದಿನಂತೆ ಬಾಂಬೊಗೆಯುವದು, ಕಲ್ಲೊಗೆಯುವದು ರೇಲುಗಾಡಿಗಳನ್ನು ಹಾರಿಸುವದೇ ಮೊದಲಾದ ಕ್ರಿಯೆಗಳನ್ನು ಸಾಗಿಸಿಯೆ ಇದ್ದಾರೆ. ಕ್ರಾಂತಿಕಾರರ ಈ ಹಿಂಸಾಚಾರದಿಂದ ಬ್ರಿಟನ್ನಿನಲ್ಲಿ ತೀಕ್ಷ್ಣ ಯಹೂದ್ಯವಿರೋಧಿ ಭಾವನೆಯುಂಟಾಗಿದೆ.

ಬ್ರಹ್ಮದೇಶದಲ್ಲಿ ವಿಚಾರಣೆ

ಬ್ರಹ್ಮದೇಶದ ಯು ಅಂಗಸಾನ ಮೊದಲಾದ ಮಂತ್ರಿಗಳ ಕೊಲೆಯ ಸಂಬಂಧದಲ್ಲಿ ಬಂಧನಗಳು ಇನ್ನೂ ನಡೆಯುತ್ತಲಿವೆ. ಈಚೆಗೆ ಬಂಧಿಸಲ್ಪಟ್ಟವರಲ್ಲಿ ಜಪಾನರ ಹಸ್ತಕರಾಗಿ ಮಂತ್ರಿಮಂಡಲ ರಚಿಸಿದ ಡಾ. ಬಾ ಮಾ ಅವರೊಬ್ಬರು. ಈ ಮಹಾ ಪಾತಕದ ವಿಚಾರಣೆಯನ್ನು ವಿಶೇಷ ನ್ಯಾಯ ಮಂಡಲವೊಂದು ಈಗಾಗಲೆ ಪ್ರಾರಂಭಿಸಿದೆ. ಬ್ರಹ್ಮೀ ಸರಕಾರವನ್ನು ಬುಡಮೇಲು ಮಾಡುವ ಬಹುದೊಡ್ಡ ಒಳಸಂಚೊಂದು ಮಯೋಚಿತ ಪಕ್ಷದವರಿಂದ (ಯು ಸಾರ ಪಕ್ಷ) ರಚಿಸಲ್ಪಟ್ಟಿತೆಂದೂ ಜನವರಿ ೧೬ಕ್ಕೆ ಅವರು ಸಾರ್ವತ್ರಿಕ ಸಶಸ್ತ್ರ ಬಂಡಾಯ ಹೂಡುವ ಸಿದ್ಧತೆ ನಡೆಸಿದ್ದರೆಂದೂ ಸರಕಾರಕ್ಕೆ ತಿಳಿದು ಬಂದಿದೆಯಂತೆ. ಹೋದ ತಿಂಗಳ ಕಗ್ಗೊಲೆಯನ್ನು ಜ್ಯೋತಿಷಿಗಳ ಸಲಹೆ ಪಡೆದು ನಡೆಸಲಾಗಿತ್ತಂತೆ. ಈ ಸಂಬಂಧದಲ್ಲಿ ಪ್ರಮುಖ ಜ್ಯೋತಿಷಿಯೊಬ್ಬನನ್ನು ಬಂಧಿಸಲಾಗಿದೆ. ಅನೇಕ ಸರಕಾರಿ ನೌಕರರೂ ಹಿಡಿಯಲ್ಪಟ್ಟಿದ್ದಾರೆ. ಒಳಸಂಚನ್ನು ಈಗ ಮುರಿಯಲಾಗಿದ್ದು ಉತ್ತರ ಬ್ರಹ್ಮದೇಶದ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಹಿಡಿತದಲ್ಲಿ ತರಲಾಗಿದೆಯಂತೆ. ಯು ಸಾ ಅವರು ತಮ್ಮ ಪಕ್ಷ ಪ್ರತಿಪಾದನೆಗೆ ಬ್ರಿಟಿಶ ವಕೀಲರನ್ನು ಕರೆಸಲಿರುವರು.

ಥಾಕಿನ್ ನು ಅವರು ಸ್ಥಾಪಿಸಿದ ಮಂತ್ರಿಮಂಡಲದಲ್ಲಿ ಕಳೆದ ವಾರ ಅಮೂಲಾಗ್ರ ಬದಲಾವಣೆಯಾಯಿತು.

x x x

ಜಗತ್ತಿನಲ್ಲಿ ಇನ್ನೊಂದು ಯುದ್ಧ ತಲೆದೋರಿದರೆ ಅದಕ್ಕಾಗಿ ವಿಶಿಷ್ಟ ಯುದ್ಧ ಸಾಮುಗ್ರಿಗಳನ್ನು ಉತ್ಪಾದನೆ ಮಾಡಲು ೩೩೦ ಕೋಟಿ ಡಾಲರ ಬೆಲೆಯ ೬೦ ಸರಕಾರಿ ಕಾರಖಾನೆಗಳನ್ನು ಅಮೇರಿಕೆ ಸಿದ್ಧವಾಗಿಟ್ಟಿದೆ.

x x x

ಇಂಗ್ಲಂಡಿನಿಂದ ಹಿಂದುಸ್ತಾನಕ್ಕೆ ಬರಬೇಕಾಗಿರುವ ನೂರುಗಟ್ಟಲೆ ಕೋಟಿ ಪೌಂಡು ಸ್ಟರ್ಲಿಂಗ್ ಸಾಲದಲ್ಲಿ ಹಿಂದುಸ್ತಾನ—ಪಾಕಿಸ್ತಾನಗಳಿಗೆ ಸೇರಿ ಮುಂದಿನ ೬ ತಿಂಗಳಲ್ಲಿ ಸುಮಾರು ೬ ಕೋಟಿ ಪೌಂಡುಗಳು ಬಳಸಲು ದೊರೆಯುವಂತೆ ಮಾಡಲು ಒಂದು ಒಪ್ಪಂದವಾಗಿದೆ. ಈ ಹಣವನ್ನು ಯಾವದೇ ದೇಶದ ಹಣವಾಗಿ ರೂಪಾಂತರಿಸಬಹುದು. ಡಾಲರ ಮುಗ್ಗಟ್ಟಿನಿಂದ ಬಳಲುತಿರುವ ಇಂಗ್ಲಂಡಿನಿಂದ ಇಷ್ಟು ದೊರಕಿಸುವದೇ ಕಠಿನವಾಯಿತು.

x x x

೧೯೫೦ರಲ್ಲಿ ಜಗತ್ತಿನ ಶಾಂತಿ ವಾದಿಗಳ (ಯುದ್ಧವೇ ಇರಬಾರದೆಂದು ವಾದಿಸುವವರ) ಪರಿಷತ್ತೊಂದು ಸ್ವಿಝರ್ಲಂಡಿನಲ್ಲಿ ಕೂಡಬಹುದೆಂದೂ ಅದರಲ್ಲಿ ಮಹಾತ್ಮಾ ಗಾಂಧಿಯವರು ಭಾಗವಹಿಸಬಹುದೆಂದೂ ತಿಳಿಯುತ್ತದೆ.

x x x

ಶ್ರೀ ವಿ. ಕೆ. ಕೃಷ್ಣಮೆನನ್ನರನ್ನು ಬ್ರಿಟನ್ನಿನಲ್ಲಿ ಹಿಂದೀ ಹಾಯಕಮೀಶನರರಾಗಿ ಆಗಸ್ಟ ೧೫ರಿಂದ ನೇಮಿಸಲಾಗಿದೆ.

ಭಾರತದತ್ತ ನೈಗೇರಿಯದ ನೋಟ

ಬ್ರಿಟಿಶರ ಆಳಿಕೆಗೊಳಗಾದ ನೈಗೇರಿಯದ ಮುಖಂಡರಾದ ಡಾ. ನಾಮದಿ ಅಜಿಕಿವೆಯವರು ಲಂಡನ್ನಿನ ಒಂದು ಸಂದರ್ಶನದಲ್ಲಿ ನೈಗೇರಿಯವು ಇನ್ನು ಹದಿನೈದು ವರ್ಷಗಳಲ್ಲಿ ಸ್ವರಾಜ್ಯ ಪಡೆಯಲು ಅರ್ಹನಾಗುವುದು ಎಂದು ತಿಳಿಸಿದರು.

"ಇಂದು ಕಳೆದ ೩೦ ವರ್ಷಗಳಲ್ಲಿ ಭಾರತದಲ್ಲಿ ಏನು ನಡೆಯಿತೆಂಬುದರ ಚಿತ್ರ ನಮ್ಮ ಮುಂದಿದೆ" ಎಂದು ಜೀಕರು (ಹಾಗೆ ಅವರ ಅನುಯಾಯಿಗಳು ಅಜಿಕಿವೆಯವರನ್ನು ಕರೆಯುತ್ತಾರೆ) ಹೇಳಿದರು. "ಗಾಂಧೀಜಿಯು ನಮ್ಮ ಪಾಲಿಗೆ ಒಬ್ಬ ಮಹಾ ವ್ಯಕ್ತಿ ಹಾಗೂ ಸ್ಫೂರ್ತಿದಾತರೆನಿಸಿದ್ದಾರೆ. ಹೋರಾಟ ಪ್ರಾರಂಭಿಸಿದ ನಾವು ಅವರ ಉಪದೇಶದತ್ತ ಬಹಳ ಲಕ್ಷ್ಯ ಕೊಟ್ಟಿದ್ದೇವೆ. ಮತ್ತು ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನಂತೆ ಅಹಿಂಸಾಮಾರ್ಗವನ್ನೇ ಅನುಸರಿಸಬೇಕೆಂದು ನಾವು ನಿರ್ಧರಿಸಿದ್ದೇವೆ. ಬ್ರಿಟಿಶ ಜನರನ್ನು ಕಂಡು ನಮ್ಮ ಉದ್ದೇಶದ ಬಗ್ಗೆ ಅವರ ಸಹಾನುಭೂತಿಯನ್ನು ಪಡೆಯಬೇಕೆಂದು ಹಾಗೂ ವಸಾಹತು ಸರಕಾರದ ಕಾರ್ಯಾಲಯ ಮತ್ತು ಬ್ರಿಟಿಶ ಸರಕಾರಗಳನ್ನು ಈ ವಿಷಯದ ಬಗ್ಗೆ ಮಾತನಾಡಿಸಿ ನಮ್ಮ ನೈಗೇರಿಯವನ್ನು ಸ್ವರಾಜ್ಯದ ಮಾರ್ಗದಲ್ಲಿ ಹೆಜ್ಜೆಯಿಡುವಂತೆ ಮಾಡಲು ಪ್ರಯತ್ನಿಸಬೇಕೆಂದು ಕೇಳಿಕೊಳ್ಳುವುದರ ಸಲುವಾಗಿ ಲಂಡನ್ನಿಗೆ ನಾನು ಬಂದಿದ್ದೇನೆ"

ನೈಗೇರಿಯವು ಪಶ್ಚಿಮ ಆಫ್ರಿಕದಲ್ಲಿದೆ. ಅದರ ಉತ್ತರದ ಮೇರೆಯೇ ಸಹರಾ ಮರುಭೂಮಿ. ಅಲ್ಲಿಯ ನೀಗ್ರೋ ಜನರು ಬ್ರಿಟಿಶರ ಆಳಿಕೆಗೆ ಒಳಪಟ್ಟವರು. ಎಷ್ಟೋ ಕಾಲದಿಂದ ನಾಗರಿಕತೆಯಲ್ಲಿ ಹಿಂದುಳಿದಿದ್ದಾರೆ. ಇತ್ತೀಚೆಗೆ ಜಗತ್ತಿನಲ್ಲಿ ದಾಸರಾಷ್ಟ್ರಗಳು ಸ್ವಾತಂತ್ರ್ಯಕ್ಕಾಗಿ ಪ್ರಬಲ ರಾಷ್ಟ್ರಗಳೊಡನೆ ಹೋರಾಟ ನಡೆಸಿ ಅಲ್ಪ ಜಯ, ಪೂರ್ಣ ಜಯಗಳನ್ನು ಪಡೆದುದರ ಗಾಳಿ ಆ ನಾಡಿಗೆ ಬೀಸಿದೆ. ಮೇಲೆ ಹೇಳಿದ ನೈಗೇರಿಯದ ನೀಗ್ರೋ ಮುಖಂಡರು ಭಾರತದ ಆದರ್ಶವನ್ನು ಹಿಡಿದು ತಮ್ಮ ಜನತೆ ಹೇಗೆ ಬೆಳಕು ಕಂಡಿತೆಂಬುದನ್ನು ಹೇಳಿದ್ದು ಈ ಮಾತಿಗೆ ನಿದರ್ಶನವಾಗಿದೆ.

ಜೀಕರ ಜೊತೆಗೆ ಮತ್ತೆ ಮೂವರು ನೀಗ್ರೋ ಮುಖಂಡರೂ ಲಂಡನ್ನಿನಲ್ಲಿದ್ದಾರೆ. ಜೀಕರು ನೈಗೇರಿಯದಲ್ಲಿ ಐದು ಪ್ರಮುಖ ವೃತ್ತಪತ್ರಗಳನ್ನು ಹೊರಡಿಸಿದ್ದಾರೆ. ೩ ವರ್ಷಗಳ ಹಿಂದೆ ನೈಗೇರಿಯದ ರಾಷ್ಟ್ರೀಯ ಕೌನ್ಸಿಲ್ಲನ್ನು ಸ್ಥಾಪಿಸಿದರು. ಅದು ಭಾರತದ ಕಾಂಗ್ರೆಸ್ಸಿನ ತತ್ವದ ಮೇಲೆಯೇ ಸ್ಥಾಪಿತವಾದದ್ದು. ಅದರಲ್ಲಿ ೧೭೦ ರಾಜಕೀಯ ಪಕ್ಷಗಳು, ಕೆಲಸಗಾರರ ಸಂಸ್ಥೆಗಳು, ಉದ್ಯೋಗಿಗಳ ಸಂಘಗಳು ಜನರ ಒಕ್ಕೂಟಗಳು ಮುಂತಾದುವೆಲ್ಲ ಸೇರಿವೆ. ಆ ಪಕ್ಷಗಳೆಲ್ಲ ಸಂಯುಕ್ತ ಬೇಡಿಕೆಯನ್ನು ಆಳರಸರ ಮುಂದಿಡಲು ಬದ್ಧಪ್ರತಿಜ್ಞವಾಗಿವೆ.

ಸುಮಾರು ೧೯೩೩ ರಲ್ಲೇ ಚಳವಳಿ ಹುಟ್ಟಿದ್ದರೂ ಅದು ಸಜೀವವೆನಿಸಿ ಕಾರ್ಯಸಾಧನೆಗಾರಂಭಿಸಿದುದು ೧೯೪೪ ರಲ್ಲಿ. ೧೯೪೫ ರಲ್ಲಿ ಇಡೀ ನಾಡಿನಲ್ಲಿಯ ಕೂಲಿಕಾರರು ಸಂಬಳ ಹೆಚ್ಚಿಸಬೇಕೆಂದು ೪೪ ದಿನಗಳ ವರೆಗೆ ಮುಷ್ಕರ ಹೂಡಿದರು. ಅದರ ಪರಿಣಾಮವಾಗಿ ಪರಿಸ್ಥಿತಿಯನ್ನು ವಿಚಾರ ಮಾಡಲು ಬ್ರಿಟಿಶ ಸರಕಾರವು ಸಮಿತಿಯೊಂದನ್ನು ಕಳಿಸಿತು ಮತ್ತು ಆ ಸಮಿತಿಯು ಕೂಲಿಕಾರರಿಗೆ ಅನುಕೂಲವಾಗಿ ತೀರ್ಪು ಕೊಟ್ಟಿತು.

ಈಗ ರಾಷ್ಟ್ರೀಯ ಕೌನ್ಸಿಲ್ ಸಂಸ್ಥೆಯು ಹೆಚ್ಚು ಪ್ರಜಾಸತ್ತಾತ್ಮಕ ಘಟನೆಯನ್ನು ಬೇಡತೊಡಗಿದೆ, ಕಾಯಿದೆಗಳನ್ನು ಬದಲಿಸಲು ಒತ್ತಾಯಿಸುತ್ತಿದೆ. ಎಷ್ಟೋ ವಿಷಯಗಳಲ್ಲಿ ಸಾಮಾನ್ಯ ಪ್ರಜೆಗಿರುವ ಹಕ್ಕು ಕೂಡ ಜನರಿಗಿಲ್ಲವಾಗಿದ್ದು ಆ ಪರಿಸ್ಥಿತಿಯನ್ನು ಹೋಗಲಾಡಿಸಬೇಕೆನ್ನುತ್ತದೆ. ನಾಳಿನ ೧೦ ವರ್ಷಗಳ ವರೆಗೆ ಅರ್ಧ ಬ್ರಿಟಿಶ ಅಧಿಕಾರಿಗಳು ಅರ್ಧ ದೇಶೀಯ ಪ್ರತಿನಿಧಿಗಳು ಸರಕಾರ ನಡೆಸಬೇಕೆಂದೂ ಕಡೆಗೆ ಐದು ವರ್ಷಗಳಲ್ಲಿ ಸಂಪೂರ್ಣವಾಗಿ ಆಡಳಿತವು ದೇಶೀಯರ ಕೈಗೆ ಬರಬೇಕೆಂದೂ ಬ್ರಿಟಿಶರು ಕೇವಲ ಸಲಹೆಗಾರರಾಗಿ ಉಳಿಯಬೇಕೆಂದೂ ಆ ಬಳಿಕ ಬ್ರಿಟಿಶರು ಸಂಪೂರ್ಣವಾಗಿ ಅಲ್ಲಿಂದ ಕಾಲು ತೆಗೆಯಬೇಕೆಂದೂ ಆ ಸಂಸ್ಥೆಯ ಯೋಜನೆಯಿದೆ.

ದೇಶವನ್ನು ಬಡಗಣ, ಪಡುವಣ ಮತ್ತು ಮೂಡಣ ಜಿಲ್ಲೆಗಳೆಂದು ಮೂರು ಪಾಲು ಮಾಡಿ ಅಲ್ಲಲ್ಲಿಯ ಪಾಳೆಯಗಾರರಿಗೆ ಪ್ರಾಮುಖ್ಯ ಕೊಡುತ್ತಿರುವುದು ದೇಶದ ಐಕ್ಯಕ್ಕೆ ಕಂಟಕಪ್ರಾಯವಾಗಿದೆ. ಆದರೂ ಹಿಂದುಸ್ತಾನದ ಇಂದಿನ ಗತಿಯನ್ನು ಕಂಡ ನಂತರ ತಾವು ಎಂತಹ ಸ್ಥಿತಿಯಲ್ಲಿಯೂ ದೇಶದ ವಿಭಜನೆಗೆ ಒಪ್ಪಿಗೆ ಕೊಡುವುದಿಲ್ಲವೆಂದು ಡಾ. ಜೀಕರು ಕಂಠೋಕ್ತವಾಗಿ ಹೇಳಿದರು.

[ಹಿಂದುಸ್ತಾನ ಟೈಮ್ಸದಿಂದ]

ಅಂತರ್‌ರಾಷ್ಟ್ರೀಯ ವಿದ್ಯಾರ್ಥಿ ಮಂದಿರಗಳು

(ನ್ಯೂಯಾರ್ಕ, ಚಿಕಾಗೋ, ಬರ್ಕ್ಲೆ, ಪ್ಯಾರಿಸ್)

"ನಿನ್ನ ಭ್ರಾತೃಭಾವ ಉಳಿಯಲಿ"

—ಅಂತರ್‌ರಾಷ್ಟ್ರೀಯ ಗೃಹ ನ್ಯೂಯಾರ್ಕ

ವಿಶೇಷ ಲೇಖನ ೨

ಹೊರ ದೇಶದ ವಿದ್ಯಾರ್ಥಿ ನ್ಯೂಯಾರ್ಕಿಗೆ ಬಂದ ಕೂಡಲೇ ತನ್ನ ಕಣ್ಣನ್ನು ಅಂತರ್‌ರಾಷ್ಟ್ರೀಯ ವಿದ್ಯಾರ್ಥಿ ಮಂದಿರದ ಕಡೆ ಹೊರಳಿಸುತ್ತಾನೆ. ಕಾರಣ, ತನ್ನಂತೆ ಓದಲು ಬಂದ ಸಹಪಾಠಿಗಳನ್ನು ಕಂಡು ಮಾತನಾಡಿಸಬಹುದು; ಸಾಮಾನ್ಯವಾಗಿ ಬರುವ ಮನೆ ಕಳವಳಿಕೆಯನ್ನು ಪರಿಹರಿಸಿಕೊಳ್ಳಬಹುದು. ತನ್ನಂತೆಯೇ ಸಾವಿರಾರು ವಿದ್ಯಾರ್ಥಿಗಳಿರುವುದನ್ನು ನೋಡಿ ಧೈರ್ಯ ತಂದುಕೊಳ್ಳಬಹುದು ಎಂದು. ಕೆಲವು ದಿನ ಈ ಮಂದಿರಗಳಲ್ಲಿ ವಾಸ ಮಾಡಿದ ವಿದ್ಯಾರ್ಥಿ ಕೊನೆಗೆ ತನ್ನ ದೇಶವನ್ನೂ ಕೂಡ ಮರೆತು, ಅಂತರ್‌ರಾಷ್ಟ್ರೀಯ ಹೆಣ್ಣೊಂದನ್ನು ಜೀವನದ ಗೆಳತಿಯನ್ನಾಗಿ ಮಾಡಿಕೊಂಡು, ಇಲ್ಲಿಯೇ ನೆಲಸಿದ ಸಂದರ್ಭಗಳು ಎಷ್ಟೋ!

ಈ ವಿದ್ಯಾರ್ಥಿ ಮಂದಿರಗಳು ಪ್ರಾರಂಭವಾಗಿ ೩೦ ವರ್ಷವಾಯಿತು. ನಾನಾ ದೇಶಕ್ಕೆ ಸೇರಿದ ಸುಮಾರು ೩೫ ಸಾವಿರ ವಿದ್ಯಾರ್ಥಿಗಳು ಈ ನಿಲಯಗಳಲ್ಲಿ ವಾಸ ಮಾಡಿದ್ದಾರೆ. ಜಾತಿಯ ಬಡಿದಾಟ, ಕೋಮುವಾರು ಪ್ರಾತಿನಿಧ್ಯ, ಬುದ್ಧಿಶಕ್ತಿಯ ಹೆಚ್ಚಳ ಯಾವುದಕ್ಕೂ ಗಮನ ಕೊಡದೆ, ಮೊದಲು ಯಾವ ವಿದ್ಯಾರ್ಥಿ ಬಂದು ಸೇರುತ್ತಾನೋ ಅವನಿಗೆ ಇಲ್ಲಿ ವಾಸಿಸಲು ಸ್ಥಳ ಕೊಡುತ್ತಾರೆ. ನಿಬಂಧನೆಗಳಾಗಲಿ, ಕಟ್ಟಳೆಗಳಾಗಲಿ ಇಲ್ಲವೆಂದಲ್ಲ— ಇವೆ. ಇಲ್ಲಿರುವವರು ವಿದ್ಯಾರ್ಥಿ, ಅಥವಾ ವಿದ್ಯಾರ್ಥಿನಿಯಾಗಿರಬೇಕು. ಶಾಲೆ ಅಥವಾ ಕಾಲೇಜಿನ ಅಧಿಕಾರಿಗಳಿಂದ ಗುರುತಿನ ಚೀಟಿ ತರಬೇಕು. ಇಲ್ಲದಿದ್ದರೆ ಸಾಧ್ಯವಿಲ್ಲ.

ಪ್ರಪಂಚದ ನಾನಾ ವಿದ್ಯಾರ್ಥಿಗಳಲ್ಲಿ ಅಂತರ್‌ರಾಷ್ಟ್ರೀಯ ಸ್ನೇಹ ಸೌಹಾರ್ದಗಳು ಬೆಳೆದು ವಿಶ್ವಶಾಂತಿಯನ್ನು ಪ್ರಪಂಚ ಬೆಳಗಲೆಂಬ ಉದ್ದೇಶವನ್ನಿಟ್ಟುಕೊಂಡು, ನ್ಯೂಯಾರ್ಕ, ಚಿಕಾಗೋ, ಬರ್ಕ್ಲೆ ಮತ್ತು ಪ್ಯಾರಿಸಗಳಲ್ಲಿ ಭವ್ಯವಾದ ಈ ಸುಂದರ ಮಂದಿರಗಳನ್ನು ಸ್ಥಾಪಿಸಿದರು. ಸ್ಥಾಪಿಸಿದ ಉದ್ದೇಶವೂ ತಕ್ಕಮಟ್ಟಿಗೆ ನೆರವೇರಿದೆ.

೧೯೨೪ ನೇ ಇಸ್ವಿಯಲ್ಲಿ ನ್ಯೂಯಾರ್ಕಿನ ನಿಲಯವು ಸ್ಥಾಪಿಸಲ್ಪಟ್ಟಿತು. 'ಮ್ಯಾನ್‌ಹಟ್ಟನ್' ದ್ವೀಪದ ಕೊನೆಯ ಭಾಗದ ಪ್ರಶಾಂತವಾದ ವಾತಾವರಣದಿಂದೊಡಗೂಡಿ ಪ್ರಕಾಶಿಸುತ್ತದೆ. ಎದುರುಗಡೆ ಸುಂದರವಾದ ಉದ್ಯಾನವನ. ಪಕ್ಕದಲ್ಲಿ ಹಡ್ಸನ್‌ನದೀ ತೀರ. ಮೇಲ್ಗಡೆ ಅಂತರ್‌ರಾಷ್ಟ್ರೀಯ ನಿಶಾನೆ. ಅನತಿ ದೂರದಲ್ಲಿಯೇ ಅಧ್ಯಕ್ಷ ಗ್ರಾಂಟನ ಸಮಾಧಿಯು ನಿಲಯದ ಕಡೆ ನೋಡುತ್ತಿದೆ. ಸಬ್‌ವೇದಲ್ಲಿ ಬರುವವರು ೧೨೫ ನೇ ರಸ್ತೆಯ ರೇಲ್ವೆ ಸ್ಟೇಷನ್ನಿನಲ್ಲಿಳಿಯಬೇಕು. ಈ ಮಂದಿರದ ವಿಳಾಸ ೫೦೦, ರಿವರ್ ಸೈಡ್. ನ್ಯೂಯಾರ್ಕಿನ ಯಾವ ಭಾಗದಿಂದಲಾದರೂ ೫ ಸೆಂಟ್ಸ್ (೦-೩-೬) ಗೆ ಇಲ್ಲಿಗೆ ಬರಬಹುದು. ಇಂದು ಈ ನಿಲಯದಲ್ಲಿ ೫೦ ದೇಶಗಳಿಗೆ ಸೇರಿದ ೫೨೫ ವಿದ್ಯಾರ್ಥಿ ವಿದ್ಯಾರ್ಥಿನಿಯರು ವಾಸ ಮಾಡುತ್ತಿದ್ದಾರೆ.

ಈ ನಿಲಯಗಳಲ್ಲಿ ಎರಡು ಭಾಗಗಳಿವೆ; ಒಂದು ವಿದ್ಯಾರ್ಥಿಗಳಿಗೆ ಮತ್ತೊಂದು ವಿದ್ಯಾರ್ಥಿನಿಯರಿಗೆ. ಈ ನಿಲಯಗಳಲ್ಲೆಲ್ಲ ನ್ಯೂಯಾರ್ಕಿನ ನಿಲಯವೇ ದೊಡ್ಡದು. ವಾಸಕ್ಕನುಕೂಲವಾಗಿ ಊಟದ ಮನೆ, ಉಪಹಾರ ಗೃಹ, ಪುಸ್ತಕ ಭಂಡಾರ, ಗರುಡಿಮನೆ, ನರ್ತನ ಶಾಲೆ, ಪೋಸ್ಟ ಆಫೀಸ, ಆಸ್ಪತ್ರೆ, ಚಿಲ್ಲರೆ ಅಂಗಡಿ, ಹೊಂದಿಕೊಂಡಿವೆ. ವಿದ್ಯಾರ್ಥಿ ವಿದ್ಯಾರ್ಥಿನಿಯರ ವಾಸದ ರೂಮುಗಳ ಮಧ್ಯೆ, ದೊಡ್ಡದಾದ ಎಲ್ಲರೂ ಉಪಯೋಗಿಸಬಹುದಾದ ಸಭಾಗೃಹವೊಂದಿದೆ. ಇಲ್ಲಿಯೇ ಅದೆಷ್ಟೋ ಅಂತರ್‌ರಾಷ್ಟ್ರೀಯ ಸ್ನೇಹಗಳು ಮದುವೆಯಲ್ಲಿ ಪರಿಣಮಿಸಿ ಹೂವಾಗಿ ಅರಳಿವೆ. ಕೆಲವು ಬಾಡಿ ಬತ್ತಿಯೂ ಇವೆ. ಈ ಸಭಾಗೃಹದ ಒಂದು ಗೋಡೆಯ ಪಕ್ಕದಲ್ಲಿ ಕವಿ ರವೀಂದ್ರನಾಥ ಠಾಕೂರರ ಭಾವಚಿತ್ರವನ್ನು ಅನಾವರಣ ಮಾಡಿದ್ದಾರೆ. ಭಾರತೀಯ ವಿದ್ಯಾರ್ಥಿಗಳು ತಮ್ಮ ಕಾರ್ಯ ಚಟುವಟಿಕೆಗಳನ್ನು ನಡೆಯಿಸುವುದು ಇಲ್ಲಿಯೇ. ಶ್ರೀ ವಿಜಯಲಕ್ಷ್ಮಿ ಪಂಡಿತ, ಹಂಸಾಮೆಹ್ತಾ, ಆಸಫಅಲ್ಲಿಗಳು, ಭಾರತೀಯ ವಿದ್ಯಾರ್ಥಿಗಳನ್ನು ಒಟ್ಟಾಗಿ ಇಲ್ಲಿಯೇ ಕಂಡದ್ದು, ಮಾತನಾಡಿದ್ದು. ಅಮೇರಿಕದಲ್ಲಿ ಈ ದಿನಕ್ಕೆ ೧೦೦೦ ವಿದ್ಯಾರ್ಥಿಗಳು ನಾನಾ ವಿಷಯಗಳನ್ನು ಕುರಿತು ಅಭ್ಯಾಸ ಮಾಡುತ್ತಿದ್ದಾರೆ.



ಲೇ— ಶ್ರೀ ನಾಡಿಗ ಕೃಷ್ಣಮೂರ್ತಿಯವರು

ಅವರಲ್ಲಿ ಸುಮಾರು ೧೫೦ ವಿದ್ಯಾರ್ಥಿಗಳು ನ್ಯೂಯಾರ್ಕಿನಲ್ಲಿಯೇ ಇದ್ದಾರೆ. ಅವರ ಪೈಕಿ ಸುಮಾರು ೭೫ ವಿದ್ಯಾರ್ಥಿಗಳು ಈ ನಿಲಯದಲ್ಲಿ ವಾಸಮಾಡುತ್ತಿದ್ದಾರೆ. ಚಿಕಾಗೋ ಮತ್ತು ಬರ್ಕ್ಲೆಗಳಲ್ಲಿಯೂ ಇದೇ ರೀತಿಯ ವ್ಯವಸ್ಥೆ ಇದೆ. ಕ್ರಮವಾಗಿ ಇಲ್ಲಿಯೂ ಸುಮಾರು ೪೦, ೬೦ ಭಾರತೀಯ ವಿದ್ಯಾರ್ಥಿಗಳಿದ್ದಾರೆ. ನಾನು ನೋಡಿದವುಗಳ ಪೈಕಿ, (ಪ್ಯಾರಿಸ್ಸೊಂದನ್ನು ಬಿಟ್ಟು) ಬರ್ಕ್ಲೆಯ ನಿಲಯವೇ ಅತಿ ಸುಂದರವಾಗಿದೆ.

ಈ ವಿದ್ಯಾರ್ಥಿ ಮಂದಿರಗಳ ಸ್ಥಾಪನೆಯ ನೆನಪು, ಶಿವಮೊಗ್ಗೆಯ ಕರ್ನಾಟಕ ಸಂಘ ಹೇಗೆ ಜಾಯಿಕಾಯಿ ಪೆಟ್ಟಿಗೆಯ ಮೇಲೆ ಕೂಡಲಿ ಚಿದಂಬರಂ, ಎಸ್. ವಿ. ಕೃಷ್ಣಮೂರ್ತಿಯವರು, ಭೂಪಾಳಂ ಪುಟ್ಟನಂಜಪ್ಪ, ಇವರ ಭಾವನೆಯಿಂದ ಮೂಡಿತೋ ಆ ನೆನಪಿಗೆ ಇಂಬುಗೊಡುತ್ತದೆ. ಒಂದು ದಿನ ಒಬ್ಬ ಚೀನೀ ವಿದ್ಯಾರ್ಥಿ ಒಬ್ಬಂಟಿಯಾಗಿ ಕೊಲಂಬಿಯಾ ವಿಶ್ವವಿದ್ಯಾನಿಲಯದ ಕಡೆ ಸಾಗುತ್ತಿದ್ದ. ಅಮೇರಿಕನ್ನರೊಬ್ಬರು ಆತನನ್ನು ಕೈಸನ್ನೆ ಮಾಡಿ ಕರೆದು 'ಹಲೋ' ಎಂದರು. ಆತನಿಗೆ ಹಿಡಿಸಲಾರದಷ್ಟು ಸಂತೋಷ ಉಂಟಾಯಿತು.

ಮೂರು ವಾರಗಳಾದರೂ ಒಬ್ಬರೂ ಆತನನ್ನು ಮಾತನಾಡಿಸಿರಲಿಲ್ಲ. ಈ ಅಮೇರಿಕನ್ ಮಹನೀಯರು ಮಾತನಾಡಿಸಿದುದೂ ಅಲ್ಲದೆ, ಯೋಗಕ್ಷೇಮ ವಿಚಾರಿಸಿ ಮುಂದಿನ ಭಾನುವಾರ ಭೋಜನಕ್ಕೆ ಬರಬೇಕೆಂದು ಔತಣವಿತ್ತರು. ಇವರೇ ಮುಂದಿನ ಅಂತರ್‌ರಾಷ್ಟ್ರೀಯ ಮಂದಿರಗಳ ಸ್ಥಾಪಕರಾದ ಶ್ರೀ ಹ್ಯಾರಿ ಎಡ್‌ಮಂಡ್ಸರು. ಅಂದಿನ ಆದಿತ್ಯವಾರ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದ ಉಳಿದ ಹೊರ ದೇಶದ ವಿದ್ಯಾರ್ಥಿಗಳಿಗೂ ಔತಣವಿತ್ತಿದ್ದರು. ಅಂದಿನಿಂದ ಶ್ರೀ ಎಡ್‌ಮಂಡ್ಸರ ಭಾನುವಾರದ ಭೋಜನಗಳು ರೂಢಿಗೆ ಬಂದುವು. ಇಂದಿಗೂ ಭಾನುವಾರದ ಭೋಜನವೆಂದರೆ ಅದೊಂದು ಆಡಂಬರ, ಒಂದು ಮೋಜು.

ಶ್ರೀ ಎಡ್‌ಮಂಡ್ಸರು ನ್ಯೂಯಾರ್ಕಿನಲ್ಲಿದ್ದ ವೈ. ಎಂ. ಸಿ. ಎ. ಸಂಸ್ಥೆಯ ಕಾರ್ಯದರ್ಶಿಯಾಗಿದ್ದರು. ನ್ಯೂಯಾರ್ಕಿನಲ್ಲಿದ್ದ ಪರದೇಶದ ವಿದ್ಯಾರ್ಥಿಗಳ ಸರ್ವೆಯೊಂದನ್ನು ಮಾಡಿ ಅವರ ಸ್ಥಿತಿಗತಿಗಳನ್ನರಿತುಕೊಂಡರು. ಒಂಟಿ ಜೀವನ ನಡೆಸುತ್ತಿದ್ದ ಈ ವಿದ್ಯಾರ್ಥಿಗಳು ಅಮೇರಿಕನ್ನರ ಕೂಡ ಬೆರೆಯುತ್ತಿರಲಿಲ್ಲ. ಕಾರಣ ಅಮೇರಿಕನ್ನರ ನಿಜ ಜೀವನ ತಿಳಿಯಲು ಸಾಧ್ಯವಾಗುತ್ತಿರಲಿಲ್ಲ. ಎಡ್‌ಮಂಡ್ಸರ ಭಾನುವಾರದ ಭೋಜನಗಳು ಈ ಕೊರತೆಯನ್ನು ನೀಗಿಸಿದುವು. ಎಡ್‌ಮಂಡ್ಸರ ಮನೆಯಲ್ಲಿ ಭಾನುವಾರದ ಭೋಜನಕ್ಕೆ ಜಾಗ ಸಾಲದಾಯಿತು. ಸರಿ, 'ಕೊಲಂಬಿಯ ವಿಶ್ವವಿದ್ಯಾನಿಲಯದ 'ಅರ್ಲ ಹಾಲಿ'ನಲ್ಲಿ ಈ ಸಮಾರಂಭದ ಊಟದ ಜೊತೆಗೆ ಸಂಗೀತ, ಭಾಷಣ, ಸಂಭಾಷಣೆ, ಸಂತೋಷಕೂಟ ಮೊದಲಾದುವೆ ಪ್ರಾರಂಭವಾದವು.

ಈ ರೀತಿಯಲ್ಲಿ ಒಂದು ದಿನ ಈ ವಿಶ್ವಜನಾಂಗ ಸಂಘ ಉದ್ಭವವಾಯಿತು.

ಪರದೇಶದ ವಿದ್ಯಾರ್ಥಿಗಳಿಗೋಸ್ಕರ ಅಂತರ್‌ರಾಷ್ಟ್ರೀಯ ವಿದ್ಯಾರ್ಥಿ ನಿಲಯವೊಂದನ್ನು ಸ್ಥಾಪಿಸಬೇಕೆಂಬ ಹಂಬಲ ಶ್ರೀ ಎಡ್‌ಮಂಡ್ಸ್ ದಂಪತಿಗಳಿಗೆ ಪ್ರತಿದಿನದ ಯೋಚನೆಯಾಯಿತು. ಆ ಕನಸು ಎಂದು ಕಾರ್ಯರೂಪಕ್ಕೆ ಬರುವುದೋ ಎಂದು ಅವರು ಯೋಚಿಸುತ್ತಿದ್ದರು. ಬರೀ ಯೋಚನೆಯಿಂದ ಸಾಧ್ಯವಾಗದೆಂದು ಆ ವರ್ತುಳದಲ್ಲಿ ಕೆಲಸಮಾಡಲುಪಕ್ರಮಿಸಿದರು. ತಮ್ಮ ಭಾನುವಾರದ ಭೋಜನಗಳಿಗೆ ಅನೇಕ ಶ್ರೀಮಂತರನ್ನೂ, ದೊಡ್ಡ ಮನುಷ್ಯರನ್ನೂ, ವಿಜ್ಞಾನಿಗಳನ್ನೂ, ರಾಜಕಾರಣ ಪಟುಗಳನ್ನೂ ಕರೆತಂದರು. ಅಂತರ್‌ರಾಷ್ಟ್ರೀಯ ವಿದ್ಯಾರ್ಥಿಗಳ ಸಮಸ್ಯೆಗಳಲ್ಲಿ ಅಭಿರುಚಿಯನ್ನುಂಟು ಮಾಡುತ್ತಿದ್ದರು. ಅಂತೂ ಒಂದು ಭಾನುವಾರ ಶ್ರೀ ಜಾನ್, ಡಿ. ರಾಕ್‌ಫೆಲರ್ ಜೂನಿಯರರವರನ್ನು ಕರೆತಂದು ಅವರ ಯೋಜನೆಗಳನ್ನೆಲ್ಲಾ ತಿಳಿಸಿದರು. ಶ್ರೀ ರಾಕ್‌ಫೆಲರು ಕೆಲವು ದಿನ ಯೋಚಿಸಿ, ಇಂತಹ ನಿಲಯಗಳ ಸ್ಥಾಪನೆಗೆ ತಮ್ಮ ಬೆಂಬಲ ಸೂಚಿಸಿ ಕಾಗದ ಬರೆದರು. ಅದರೊಂದಿಗೆ ತಮ್ಮ ಮೊದಲ ದೇಣಿಗೆಯಾಗಿ ೩೦೦೦೦೦೦ ಡಾಲರುಗಳನ್ನೂ, ಈಗಿನ ನ್ಯೂಯಾರ್ಕ ಮಂದಿರದ ನಿವೇಶನವನ್ನು ಉಪಯೋಗಿಸಿಕೊಳ್ಳಲು ಅನುಮತಿಯನ್ನೂ ಕೊಟ್ಟರು. ಶ್ರೀ ಎಡ್‌ಮಂಡ್ಸರ ಸಂತೋಷಕ್ಕೆ ಪಾರವೇ ಇರಲಿಲ್ಲ.

೧೯೨೪ ರಲ್ಲಿ ಸ್ಥಾಪಿತವಾದ ನ್ಯೂಯಾರ್ಕಿನ ನಿಲಯದ ಪ್ರಥಮ ವ್ಯವಸ್ಥಾಪಕರಾಗಿ ಶ್ರೀ ಎಡ್‌ಮಂಡ್ಸರೇ ನಿಯಮಿಸಲ್ಪಟ್ಟರು. ಇದೊಂದರಿಂದ ಎಡ್‌ಮಂಡ್ಸರು ಸುಮ್ಮನೆ ಕೂಡ್ರಲಿಲ್ಲ. ಚಿಕಾಗೋ ಮತ್ತು ಕ್ಯಾಲಿಫೋರ್ನಿಯಕ್ಕೆ ಹೋಗಿ ಅಲ್ಲಿಯ ಸ್ಥಿತಿಗತಿಗಳನ್ನರಿತುಕೊಂಡು ಬಂದರು. ಶ್ರೀ ಎಡ್‌ಮಂಡ್ಸರ ಸಲಹೆಯ ಪ್ರಕಾರ ಶ್ರೀ ರಾಕ್ ಫೆಲರರು ಕ್ಯಾಲಿಫೋರ್ನಿಯಾದ ಬರ್ಕ್ಲೆ ನಿಲಯಕ್ಕೆ ೧೭,೫೦,೦೦೦ ಡಾಲರುಗಳನ್ನೂ ಚಿಕಾಗೋ ನಿಲಯಕ್ಕೆ ೩೦೦೦,೦೦೦ ಡಾಲರುಗಳನ್ನೂ ಕೊಟ್ಟರು. ೧೯೩೨ ರಲ್ಲಿ ಈ ನಿಲಯಗಳು ಪ್ರಾರಂಭವಾದುವು

'University' ಎಂಬ ಪದ ೧೩ನೇ ಶತಮಾನದಿಂದ ರೂಢಿಗೆ ಬಂದಿತು. ನಾಟರ್ ಡ್ಯಾಮ್ ಕ್ಯಾಥೆಡ್ರಲ್ ಸುತ್ತಮುತ್ತಲಿರುವ ಅನೇಕ ಶಾಲೆಗಳ ಗುಂಪಿಗೆ ಈ ಹೆಸರನ್ನು ಕೊಟ್ಟರು. ಅಂದಿನಿಂದ ೧೯೪೦ರ ವರೆಗೆ ಪ್ಯಾರಿಸ ಪ್ರಪಂಚದ ಸಂಸ್ಕೃತಿ ಮತ್ತು ಬುದ್ಧಿಶಕ್ತಿಯ ಕೇಂದ್ರವೆಂದು ಹೆಸರಾಗಿತ್ತು. ೧೯೩೦ರಲ್ಲಿ ಪ್ಯಾರಿಸ ವಿಶ್ವವಿದ್ಯಾನಿಲಯವು ವಿದ್ಯಾರ್ಥಿ ವಸತಿಗೃಹವೊಂದನ್ನು ಸ್ಥಾಪಿಸಿತು. ಇದರಲ್ಲಿ ೧೯ ಕಟ್ಟಡಗಳಿದ್ದುವು. ಪ್ರತಿಯೊಂದು ಜನಾಂಗದ ವಿದ್ಯಾರ್ಥಿಗಳೂ ಇಲ್ಲಿದ್ದರು. ಬರಬರುತ್ತ ಹೊರದೇಶೀಯರು ಒಟ್ಟಾಗಿ ಕಲೆಯಲು ಪ್ರಾರಂಭಿಸಿದರು. ಅವರಿಗೊಂದು ಪ್ರತ್ಯೇಕ ನಿಲಯದ ಆವಶ್ಯಕತೆಯುಂಟಾಯಿತು. ರಾಕ್‌ಫೆಲರ ನಿಧಿಯಿಂದ ಇಲ್ಲಿಯೂ ಒಂದು ಅಂತರ್‌ರಾಷ್ಟ್ರೀಯ ವಿದ್ಯಾರ್ಥಿ ಮಂದಿರವನ್ನು ಕಟ್ಟಲಾಯಿತು.

ಅಮೇರಿಕದಲ್ಲಿರುವ ವಿದ್ಯಾರ್ಥಿ ಮಂದಿರಗಳು ಬರೀ ವಾಸಮಾಡುವ ಕೊಠಡಿಗಳಲ್ಲ; ಸಾಮಾಜಿಕ, ಬೌದ್ಧಿಕ ಚಟುವಟಿಕೆಗಳ ಕೇಂದ್ರಗಳು. ಇಲ್ಲಿ ವಾಸಮಾಡುವ ವಿದ್ಯಾರ್ಥಿಗಳಲ್ಲದೆ,

—೧೧ನೇ ಪುಟಕ್ಕೆ

ಕರ್ಮವೀರ ಹರಿಜನ ಪುರವಣಿ

ಗುಜರಾತಿಗಳು ಸಹಿತ!

[ಮೋ. ಕ. ಗಾಂಧಿ]

ಶ್ರೀ ರತನಲಾಲ ಪರೀಖರೊಡನೆ ತಾವು ನಡೆಸಿಹ ಪತ್ರವ್ಯವಹಾರದ ಒಂದು ಪ್ರತಿಯನ್ನು ಶ್ರೀ ಮಗನಭಾಯಿ ದೇಸಾಯರು ನನಗೆ ಕಳಿಸಿದ್ದಾರೆ. ಪರೀಖರು ಬರೆಯುತ್ತಾರೆ:

"ದೇವನಾಗರಿ ಲಿಪಿಯಲ್ಲಿ ಬರೆದ ಹಿಂದಿಯೆ ಹಿಂದೀ ಒಕ್ಕೂಟದ ರಾಷ್ಟ್ರಭಾಷೆಯಾಗಬೇಕೆಂದು ಕಾಂಗ್ರೆಸ್ ಪಕ್ಷ ನಿರ್ಣಯಿಸಿದೆಯೆಂದು ಪತ್ರಿಕೆಗಳಲ್ಲಿ ಬಂದಿದೆ. ಇದರಿಂದ ಸಾರ್ವಜನಿಕರ ಮನಸಿನ ಮೇಲೆ ಪ್ರಚಂಡ ಪರಿಣಾಮವಾಗಿದೆ. ಜನರು ಉರ್ದು ಲಿಪಿಯನ್ನು ಉದ್ವೇಗದಿಂದಲೂ ಅಪ್ರೀತಿಯಿಂದಲೂ ಕಾಣುತಿದ್ದರು. ಉರ್ದು ಲಿಪಿಯನ್ನು ಪ್ರಚುರಗೊಳಿಸುವ ಪ್ರಯತ್ನ ಜೀವಂತವಾಗಿಲ್ಲದ್ದು ಒಳಿತೇ ಆಯಿತು. ನಿಷ್ಠಾವಂತ ಕಾಂಗ್ರೆಸ್ಸಿಗರು ಕೂಡ ಅದನ್ನು ವಿರೋಧಿಸತೊಡಗಿದ್ದಾರೆ. ಇದರಿಂದ ನಾಳೆ ಫೆಬ್ರುವರಿಯಲ್ಲಿ ಜರಗುವ ಹಿಂದುಸ್ತಾನೀ ಪರೀಕ್ಷೆಗಳಿಗೆ ಕೂಡುವ ವಿದ್ಯಾರ್ಥಿಗಳ ಸಂಖ್ಯೆ ಬಹಳ ಕಡಿಮೆಯಾಗಬಹುದು."

ಶ್ರೀ ರತನಲಾಲರು ಹೇಳುವದು ನಿಜವಾಗಿರಲಾರದೆಂದು ಆಶಿಸುವೆ. ಗುಜರಾತಿಗಳು ಅಷ್ಟು ಮರುಳರಂತೆ ವರ್ತಿಸತಕ್ಕದ್ದಲ್ಲ. ಉರ್ದು ಲಿಪಿಯ ಬಗ್ಗೆ ಲೇಖಕರಿಗಿರುವ ಅಪ್ರೀತಿಗೆ ಕಾರಣವನ್ನು ನಾನು ಅರಿತಿದ್ದರೂ ಆ ಅಪ್ರೀತಿಗೆ ನನ್ನ ಸಮ್ಮತಿಯಿಲ್ಲ. ಅದರೂ ಆ ಲಿಪಿಯ ಬಗ್ಗೆ ವಿಚಾರಹೀನವಾದ ಅಪ್ರೀತಿ ನನಗೆ ಈ ಜನ್ಮದಲ್ಲೀ ಅರ್ಥವಾಗುವಂತಿಲ್ಲ. ಅದು ವಿವೇಕದ ದಿವಾಳಿಯಲ್ಲದೆ ಮತ್ತೇನು? ಗುಜರಾತಿಗಳು ಒಳ್ಳೆ ವ್ಯವಹಾರಕುಶಲರೆಂದು ಹೆಸರಾದವರು. ವ್ಯವಹಾರದಲ್ಲಿ ಶತ್ರುಮಿತ್ರರೆಂಬ ಭೇದವನ್ನು ಅವರು ಮಾಡುವದಿಲ್ಲ. ಇಬ್ಬರಿಂದಲೂ ಸಂತೋಷದಿಂದ ಹಣ ಸುಲಿಯುವರು. ಈ ವ್ಯವಹಾರ ಕೌಶಲ ರಾಜಕಾರಣದಲ್ಲಿಯೂ ಲಿಪಿಯ ಬಳಕೆಯಲ್ಲಿಯೂ ಅವರನ್ನು ಬಿಟ್ಟೋಡಬೇಕೆ?

ದಿಲ್ಲಿಯಲ್ಲಿ ದಿನವೂ ನನಗೆ ಹಿಂದೂ ಮುಸ್ಲಿಮರಿಬ್ಬರೊಡನೆಯೂ ಸಂಪರ್ಕ ಬರುತ್ತದೆ. ಅವರಲ್ಲಿ ಹಿಂದುಗಳೇ ಹೆಚ್ಚು. ಅವರು ಮಾತಾಡುವ ಭಾಷೆಯಲ್ಲಿ ಸಂಸ್ಕೃತ ಶಬ್ದಗಳು ವಿರಳ. ಪರ್ಶಿಯನ್ ಅಥವಾ ಅರಬ್ಬಿ ಶಬ್ದಗಳಾದರೂ ಅಷ್ಟೇ ವಿರಳ. ಅವರಿಗೆ—ಅಥವಾ ಅವರಲ್ಲಿ ಬಹುಸಂಖ್ಯಾಕರಿಗೆ—ದೇವನಾಗರಿ ಲಿಪಿ ಬರುವದಿಲ್ಲ. ಅವರು ನನಗೆ ತಪ್ಪು ತಪ್ಪು ಇಂಗ್ಲೀಷಿನಲ್ಲಿ ಬರೆಯುತ್ತಾರೆ. ವಿದೇಶೀ ಭಾಷೆಯಲ್ಲಿ ಬರೆದುದಕ್ಕೆ ನಾನವರನ್ನು ಛೀಗರೆದರೆ ಉರ್ದು ಲಿಪಿಯಲ್ಲಿ ಬರೆಯುವರು. ರಾಷ್ಟ್ರಭಾಷೆ ಹಿಂದಿಯಾಗಿ ದೇವನಾಗರಿಯೊಂದೇ ಲಿಪಿಯಾದರೆ ಈ ಹಿಂದುಗಳ ಪಾಡೇನು?

ಆದರೆ ಹಿಂದುಸ್ತಾನಿಯ ವಿಷಯಕ್ಕೆ ನನ್ನ ಛಲಕ್ಕೆ ಮುಸ್ಲಿಮರಲ್ಲಿ—ಗುಜರಾತಿ ಮುಸ್ಲಿಮರಲ್ಲಿ—ನನಗಿರುವ ಪಕ್ಷಪಾತವೇ ಕಾರಣವೆಂದು ಒಪ್ಪಿಕೊಳ್ಳುತ್ತೇನೆ. ಗುಜರಾತಿ ಮುಸ್ಲಿಮರಿಗೆ ಉರ್ದು ಗೊತ್ತಿಲ್ಲ. ಅದನ್ನು ಕಲಿಯಲು ಅವರಿಗಾಗುವ ತೊಂದರೆ ಅಷ್ಟಿಷ್ಟಲ್ಲ. ಅವರ ಮಾತೃಭಾಷೆ ಗುಜರಾತಿ. ಆದರೆ ಉತ್ತರ ಹಿಂದುಸ್ತಾನದ ಮುಸ್ಲಿಮರ ಭಾಷೆ ಹಿಂದುಸ್ತಾನಿ—ಅಂದರೆ ಸರಳ ಉರ್ದು—ಎಂಬಲ್ಲಿ ಸಂದೇಹವಿಲ್ಲ. ಅವರು ಅದನ್ನು ಉರ್ದುವೆಂದು ಹೆಸರಿಸಿದರೆ ನನ್ನ ಆಕ್ಷೇಪವಿಲ್ಲ. ಹಿಂದುಸ್ತಾನದ ಕೋಟ್ಯಂತರ ಹಳ್ಳಿಗರಿಗೆ ಪುಸ್ತಕದೊಡನೆ ಏನೂ ಸಂಬಂಧವಿಲ್ಲ. ಅವರು ಹಿಂದುಸ್ತಾನಿಯನ್ನು ಮಾತಾಡುತ್ತಾರೆ. ಅದನ್ನೆ ಮುಸ್ಲಿಮರು ಉರ್ದು ಲಿಪಿಯಲ್ಲಿಯೂ ಹಿಂದುಗಳು ಉರ್ದು ಇಲ್ಲವೆ ನಾಗರಿ ಲಿಪಿಯಲ್ಲಿಯೂ ಬರೆಯುತ್ತಾರೆ. ಆದುದರಿಂದ ನಿಮ್ಮ ನಮ್ಮಂಥವರಿಗೆ ಎರಡೂ ಲಿಪಿಗಳನ್ನು ಕಲಿಯುವದೇ ಕರ್ತವ್ಯ. ಈ ಕರ್ತವ್ಯವನ್ನು ನೆರವೇರಿಸಲು ಗುಜರಾತಿಗಳು ಸಂತೋಷದಿಂದ ಒಪ್ಪಿದರು. ಅವರು ಆನಂದದಿಂದ ಹಿಂದುಸ್ತಾನಿಯನ್ನು ರಾಷ್ಟ್ರಭಾಷೆಯಾಗಿ ಅಂಗೀಕರಿಸಿದರು. ಅವರು ಅದನ್ನು ಕಹಿ ಗುಳಿಗೆಗಳಂತೆ ನುಂಗಲಿಲ್ಲ. ಅಂದಮೇಲೆ ಈಗ ಅವರಿಗೆ ಉರ್ದು ಲಿಪಿಯ ಮೇಲೇಕೆ ಅಪ್ರೀತಿಯುಂಟಾಗಿದ್ದೀತು? ಭೀಕರ ಕುಟುಕ್ಕದ ಮಧ್ಯ ಇದು ನನಗೆ ಇನ್ನಷ್ಟು ಸವಿಯಾದ ವಿಷಯ. ಪಾಕಿಸ್ತಾನೇತರ ಮುಸ್ಲಿಮರು ನನಗೆ ಇನ್ನಷ್ಟು ಪ್ರಿಯರಾಗಿದ್ದಾರೆ. ಅವರು ತಮ್ಮ ಮಾನಪ್ರಾಣಧನಗಳ ರಕ್ಷಣೆಗಾಗಿ ಪಾಕಿಸ್ತಾನದ ಮುಖ ನೋಡುವಂತಾಗಬಾರದು. ಅದು ಒಕ್ಕೂಟದವರಾದ ನಮ್ಮ ಮುಖಕ್ಕೆ ಮಸಿ ಬಳಿದಂತೆ. ಸನಾತನ ಹಿಂದೂಧರ್ಮವೆಂಬುದು ಕೂಪಮಂಡೂಕನ್ಯಾಯದ ವಸ್ತುವಲ್ಲ. ಅದು ಸಾಗರದಂತೆ ವಿಸ್ತಾರವಾದುದು. ಈ ಅರ್ಥದಲ್ಲಿ ಅದು ಇಡೀ ಮಾನವ ಕುಲದ ಸೊತ್ತಾಗಿದೆ—ಅದನ್ನು ಬೇಕಾದ ಹೆಸರಲ್ಲಿ ಕರೆಯಲಿ. ಮಹಾಭಾರತದ ಮುಲೆಯಾಳಿ ವ್ಯಾಖ್ಯಾನಕಾರನೊಬ್ಬನು ಅದನ್ನು ಮಾನವಕುಲದ ಇತಿಹಾಸವೆಂದು ಕರೆದುದು ಸಮಂಜಸವಾಗಿಯೆ ಇದೆಯೆಂದು ನನ್ನ ಅಭಿಪ್ರಾಯ. ಅದು ಹೇಗೇ ಇರಲಿ, ಹಿಂದೂ ಎಂಬುದು ಸಂಸ್ಕೃತಜನ್ಯ ಶಬ್ದವಲ್ಲ. ವಿದೇಶೀಯರು ಸಿಂಧು ನದಿಯ ಈ ದಡದಲ್ಲಿದ್ದವರನ್ನು ಹಿಂದುಗಳೆಂದು ಕರೆದರು. ನಾವು ಆ ಅಂಕಿತವನ್ನು ಸ್ವೀಕರಿಸಿದ್ದೇವೆ. ಮನುವೆಂಬುದು ಒಬ್ಬ ಮನುಷ್ಯನ ಹೆಸರಲ್ಲ. ಅದು ಪ್ರಥಮ ಮಾನವನಾದ ಆದಾಮನ ಪರ್ಯಾಯವಾಚಿ. ಮನುವಿನ ಸ್ಮೃತಿಯು ಮಾನವ ಧರ್ಮಶಾಸ್ತ್ರ (ಮನುಷ್ಯಕುಲದ ಧರ್ಮ) ವೆಂದು ಕರೆಯಲಾಗುತ್ತದೆ. ಅದು ಪ್ರಥಮ ಮನುಷ್ಯನು ದೈವೀಸ್ಫೂರ್ತಿಯಿಂದ ಕೊಟ್ಟ ಶಾಸನ. ಮನುಧರ್ಮಶಾಸ್ತ್ರವೆನಿಸುವದರಲ್ಲಿ ಎಷ್ಟು ಮೂಲ ಕರ್ತೃವಿನ ಶ್ಲೋಕಗಳೋ ಎಷ್ಟು ಪ್ರಕ್ಷಿಪ್ತವೋ ಊಹಿಸಲಸದಳ. ಡಾ. ಭಗವಾನ್‌ದಾಸರು ಕೆಲ ಪ್ರಕ್ಷಿಪ್ತಗಳನ್ನು ತೋರಿಸಿಕೊಟ್ಟಿದ್ದಾರೆ. ಆರ್ಯ ಸಮಾಜದವರು ಇನ್ನು ಕೆಲವನ್ನು ಪ್ರಕ್ಷಿಪ್ತವೆಂದು ಬಗೆಯುತ್ತಾರೆ. ಕೆಲ ಶ್ಲೋಕಗಳ ತಾತ್ಪರ್ಯದ ವಿಷಯಕ್ಕೂ ಅನೇಕ ಮತಭೇದಗಳಿವೆ. ನನ್ನ ಅಭಿಪ್ರಾಯದಲ್ಲಿ ವಿವೇಕಿಗಳ ಹೃದಯ ಬುದ್ಧಿಗಳೆರಡಕ್ಕೂ ಮೆಚ್ಚುವ ಅಂಶವೇ ಮಾನವ ಧರ್ಮ. ಅದುದರಿಂದ ಕೂಡಿಸಲು ಕಳೆಯಲು ಯಾವಾಗಲೂ ಅವಕಾಶವಿದ್ದೆ ಇದೆ. ಪ್ರಕ್ಷಿಪ್ತವೆಂದು ಭಾವಿಸಲ್ಪಟ್ಟ ಶ್ಲೋಕಗಳು ವಿವಿಧ ಯುಗಗಳಲ್ಲಿ ಸಮಾಜ ಸುಧಾರಕರು ಮಾಡಿದ ಯಶಸ್ವಿ ಮತ್ತು ಅಯಶಸ್ವಿ ಪ್ರಯತ್ನಗಳ ಫಲವೆನ್ನಬಹುದು. ಅಂಥ ಶಾಸ್ತ್ರ ಅಖಿಲ ಮಾನವ ಕುಲಕ್ಕೇ ಸೇರಿದ್ದು. ಅದು ಜಾತಿ ವರ್ಗಗಳ ಮೇಲಿಂದ ಪಕ್ಷಪಾತ ಮಾಡಲು ಆಸ್ಪದ ಕೊಡುವದಿಲ್ಲ. ಅದು ಹಿಂದುಗಳು ಮುಸ್ಲಿಮರು ಮತ್ತಿತರರೆಂಬ ತಾರತಮ್ಯವನ್ನರಿಯದು. "ಇದು ನನ್ನದು, ಇದು ಪರರದೆಂಬುದು ಅಲ್ಪ ಬುದ್ಧಿಯ ಎಣಿಕೆ" ಯೆಂಬುದು ಮತ್ತಿನಂಥ ಪ್ರಮಾಣವಾಕ್ಯ.

ಈ ಅಮರ ಪ್ರಮಾಣವಾಕ್ಯದ ಅಧಾರದಿಂದ ನಾನು ಪಾಕಿಸ್ತಾನ ಹಿಂದುಸ್ತಾನಗಳಲ್ಲಿ ಭೇದವೆಣಿಸಲಾರೆ. ನೀವು—ನಾನು ಇಬ್ಬರೇ ಈ ನಂಬಿಕೆಯುಳ್ಳವರಾದರೇನಾಯಿತು? ನಮ್ಮದೇ ನಿಜವಾದರೆ ಉಳಿದವರು ನಮ್ಮ ಬೆಂಬತ್ತಿ ಬಂದೇ ತೀರುವರು.

ಕಾಂಗ್ರೆಸ್ಸು ಯಾವಾಗಲೂ ವಿಶಾಲದೃಷ್ಟಿಯನ್ನಿಟ್ಟುಕೊಂಡಿದೆ. ಇಂದು ಅದರ ಅವಶ್ಯಕತೆ ಎಂದಿಗಿಂತಲೂ ಹೆಚ್ಚಾಗಿದೆ. ಹಿಂದುಸ್ತಾನ ಖಡ್ಗಮುಖದಲ್ಲಿ ವಿಭಜನೆಯನ್ನು ಒಪ್ಪಿಕೊಂಡಿತೆಂದು ಬೇಕಾದರೆ ಹೇಳಬಹುದು. ಆದರೆ ಈ ಪ್ರತಿಷ್ಠಿತ ಸ್ಥಿತಿಯನ್ನು ಖಡ್ಗಮುಖದಲ್ಲೇ ಬದಲಾಯಿಸುವದು ಸಾಧ್ಯವಿಲ್ಲ. ಹೃದಯವೊಂದಾದಾದರೇನೇ ಹೋಳಾದುದು ಒಂದಾಗಬಲ್ಲದು.

ಆದರೆ ಇಂದು ಸಂಜ್ಞೆಗಳು ಮಾತ್ರ ತದ್ವಿರುದ್ಧವಾಗಿರುವಂತೆ ಕಾಣುತ್ತವೆ. ಈ ಬಿಕ್ಕಟ್ಟಿನಲ್ಲಿ ಕಾಂಗ್ರೆಸ್ಸು ಪರ್ವತದಂತೆ ಅವಿಚಲವಾಗಿ ಉಳಿಯಬೇಕು. ಅದು ರಾಷ್ಟ್ರಭಾಷೆಯ ಪ್ರಶ್ನೆಯಲ್ಲಿ ಕೈಸಡಿಲು ಬಿಡಕೂಡದು. ಪರ್ಶಿಯನ್‌ಮಯ ಉರ್ದುವಾಗಲಿ ಸಂಸ್ಕೃತಮಯ ಹಿಂದಿಯಾಗಲಿ ರಾಷ್ಟ್ರಭಾಷೆಯಾಗದು. ಎರಡೂ ಭಾಷೆಗಳ ಸರಳ ಸುಂದರ ಸಮ್ಮಿಶ್ರಣವಾಗಬೇಕು ಅದು. ಗುಜರಾತಾದರೂ ಈ ವಿಪ್ಲವದಿಂದ ವಿಚಲಿತವಾಗದೆ ಉಳಿಯಬೇಕೆಂದು ನಾನು ಆಶಿಸುತ್ತೇನೆ. ವೇದಗಳ ಎತ್ತರಕ್ಕೆ ಹಾರಿದವರಿಂದು ಒಂದೇ ಹೊಡೆತಕ್ಕೆ ಪ್ರಪಾತದಲ್ಲಿ ಉರುಳುವರೆ? ನನ್ನ ಇಚ್ಛೆ ಫಲದ್ರೂಪವಾಗುವಂತಿದ್ದರೆ ಇದು ಸಂಭವಿಸಲಾರದು. ಸುಂದರ ಗುಜರಾತಿ ಸ್ತೋತ್ರವೊಂದರಲ್ಲಿ "ಪ್ರೇಮಾಗ್ನಿಯಲ್ಲಿ ಪರಿಪೂತನಾಗಿ ಬಂದವನು ಎಂದಾದರೂ ಹಿಂದೆಗೆಯುವನೆ?" ಎಂದು ಪ್ರಶ್ನಿಸಲಾಗಿದೆ. ನಾವು ಈ ಕವಿಯನ್ನು ಅನುಸರಿಸೋಣ. ನಾವು ಉರ್ದು ಲಿಪಿಯನ್ನು ದೂರೀಕರಿಸೋಣ ಬೇಡ. ಜಮಾಲುಜಾರಗೊಟ್ಟರೆ ಕೂರ್ತ ಅಧಃಪಾತಕರಾಗುವ ಗಂಡಾಂತರವುಂಟು. ಪತ್ರಿಕಾ ವರದಿ ತಪ್ಪು. ಇದಕಾಗಿ ದೇವರಿಗೆ ಧನ್ಯವಾದ ಅರ್ಪಿಸೋಣ. ಈ ಪ್ರಶ್ನೆಯನ್ನು ಎರಡು ಮೂರು ತಿಂಗಳು ಮುಂದೂಡಲಾಗಿದೆ. ವಿವೇಕಕ್ಕೇ ವಿಜಯವಾದೀತೆಂದು ಆಶಿಸೋಣ.

ಕಾಶ್ಮೀರದ ಗಾಡಿಯಲ್ಲಿ

೩೧—೭—೪೭

(ಗುಜರಾತಿಯಿಂದ ಅನುವಾದಿತ)

ಒಳ್ಳೆಯೋ ಮಹಿಮೆಯೊ?

ಗಾಂಧೀಜಿಯನ್ನು ಕಾಣಲು ಕೆಲ ದಿನ ಕೆಳಗೆ ಒಬ್ಬ ಶಾಂತಿವಾದಿ ಅಮೇರಿಕನ್ ಯುವಕ ಬಂದಿದ್ದ. ಅವನು ಕುಮಾರಿ ಮ್ಯುರಿಯಲ್ ಲೆಸ್ಟರರಿಂದ ಪರಿಚಯ ಪತ್ರ ತಂದಿದ್ದ. ಕುಮಾರಿ ಮ್ಯುರಿಯಲ್ ಲೇಸ್ಟರರಿಂದ ಪರಿಚಯ ಪತ್ರ ತಂದಿದ್ದ. ಕುಮಾರಿ ಲೆಸ್ಟರರು ಯುದ್ಧಕಾಲದಲ್ಲಿ ಅಮೇರಿಕನ್ ಯುವಜನರಲ್ಲಿ ಶಾಂತಿ ಸಂದೇಶವನ್ನು ಹೇಗೆ ಪ್ರಚುರಗೊಳಿಸಿದರೆಂಬೂ ಅಮೇರಿಕನ್ನರೇಕೆ ಯುದ್ಧದಿಂದ ಹೊರಗುಳಿಯಬೇಕೆಂದು ಹೇಗೆ ವಿವರಿಸಿದರೆಂಬೂ ಆ ಯುವಕ ಗಾಂಧೀಜಿಗೆ ಬಣ್ಣಿಸಿದ. ಅಮೇರಿಕನ್ ಯುವಕ ಶಾಂತಿವಾದಿಗಳು ಇಂಥ ಹೇಗೆ ನಡೆದುಕೊಳ್ಳಬೇಕೆಂದು ಅವನು ಗಾಂಧೀಜಿಯನ್ನು ಕೇಳಿದನು.

ಯುದ್ಧ ನಡೆಯುತ್ತಿದ್ದಾಗ ಹೇಗೊ ಹಾಗೆಯೇ ಈಗಲೂ ಅವರು ಕೆಲಸಮಾಡಬೇಕೆಂದು ಗಾಂಧೀಜಿ ಉತ್ತರವಿತ್ತರು. ಕೆಲವೆ ಅವರು ಜನರಿದ್ದರೂ ಸರಿಯಾದ ಕೆಲಸವನ್ನು ಮಾಡಲು ಹಿಂಜರಿಯಬಾರದು.

ಆ ಗೆಳೆಯನಿಗೆ ಕುಮಾರಿ ಲೆಸ್ಟರರನ್ನು ಹೊಗಳಲು ಬಾಯೇ ಸಾಲದು. ಅವರು ಅತ್ಯಂತ ಮಹಿಮಾವಂತ ಸ್ತ್ರೀಯರಲ್ಲೊಬ್ಬಳೆಂದು ಅವನ ವಿಚಾರವಾಗಿತ್ತು.

"ಇದನ್ನು ಅವರೇ ನಿರಾಕರಿಸಬಹುದು, ಎಂದರು ಗಾಂಧೀಜಿ" ಮಹಿಮಾವಂತ ಸ್ತ್ರೀಯರು ಎಷ್ಟೋ ಇರಬಹುದು. ಆದರೆ ಒಳ್ಳೆಯುಳ್ಳ ಸ್ತ್ರೀಯರು ವಿರಳ. ಲೆಸ್ಟರರು ಬಹಳ ಒಳ್ಳೆಯ ಸ್ತ್ರೀಯೆಂದು ನೀವು ಹೇಳಿದ್ದರೆ ಹೆಚ್ಚು ಸಮಂಜಸವಾಗುತಿತ್ತು. ನಿಜವಾದ ಶಾಂತಿವಾದಿಯ ಮಾತು ಶುದ್ಧವಾಗಿಯೂ ವಿಚಾರಗಳು ನಿರ್ದಿಷ್ಟವಾಗಿಯೂ ಇರಬೇಕು. ಯುದ್ಧವಿರೋಧಕವಾದ ಈ ಚಳವಳಿಯಲ್ಲಿ ನೀವು ನಿಮ್ಮ ಪಾತ್ರವನ್ನು ಪರಿಣಾಮಕಾರಿಯಾಗಿ ಆಡಿ ತೋರಿಸಬೇಕಾದರೆ ನೀವು ನಿಮ್ಮ ಜೀವನವನ್ನು ಅದರಂತೆ ರೂಪಿಸಬೇಕು. ಯುದ್ಧವಿರೋಧಕ ಚಳವಳಿ ಮೂಲತಃ ಸಮರ್ಪಕವಾಗಿದೆ. ಶಾಂತಿಯ ಬೆಲೆಯನ್ನು ಯಾರೂ ಅಲ್ಲಗಳೆಯಲಾರರು. ಆದರೂ ಅದು ಸಾಕಷ್ಟು ಬೆಳೆದಿಲ್ಲ. ಇದರ ತಪ್ಪು ಶಾಂತಿವಾದಿಗಳದೆ."

ಗಾಂಧೀಜಿ ಅನಿರ್ದಿಷ್ಟ ಭಾಷೆಯೆಂದು ಹೇಳಿದ್ದನ್ನೆ ಪುನಃ ಪ್ರಸ್ತಾವಿಸಿ ಆ ಗೆಳೆಯನು, ಕುಮಾರಿ ಲೆಸ್ಟರರು ಒಳ್ಳೆಯವರೆಂದೆ ತಾನು ಅವರನ್ನು ಮಹಿಮಾವಂತರೆಂದು ಬಣ್ಣಿಸಿದುದಾಗಿ ಹೇಳಿದನು. ಒಳ್ಳೆಯೂ ಮಹಿಮೆಯೂ ಒಂದೇ ಅರ್ಥದ ಶಬ್ದಗಳೆಂದು ತಮಗೆ ಗೊತ್ತಿದ್ದಿಲ್ಲವೆಂದು ಗಾಂಧೀಜಿ ಉತ್ತರಿಸಿದರು. ಮನುಷ್ಯ ಮಹಿಮಾವಂತನಾಗಿದ್ದರೂ ಒಳ್ಳೆಯವನಲ್ಲದಿರಬಹುದು.

ಹೊಸದಿಲ್ಲಿ —ಸುಶೀಲಾ ನಯ್ಯರ

೨೭—೭—೪೭

ಸಮುದ್ರ ಮಂಥನ

ಹಿಂದುಸ್ತಾನವನ್ನೆ ತವರೂರಾಗಿ ಮಾಡಿಕೊಂಡ ಇಂಗ್ಲೀಷ ಮಹಿಳೆಯೊಬ್ಬರು ಗಾಂಧೀಜಿಗೆ ಹೀಗೆ ಬರೆದಿದ್ದಾರೆ:—

"ರಾಷ್ಟ್ರೀಯ ಕಾರ್ಯದಲ್ಲಿ ಅನ್ವಯಿಸುವ ನಿಮ್ಮ ಧ್ಯೇಯಗಳಿಗಾಗಿ ನಾನು ಎಷ್ಟು ಹೇಗೆ ಕೆಲಸಮಾಡಲಿ? ತನ್ನ ಕೈತ್ವವನ್ನೆಲ್ಲ ಶಿಥಿಲವಾಗಿ ಗಾಳಿಗೆ ತೂರಿದಂತೆ ಇತಿಹಾಸದಲ್ಲೆಲ್ಲ ಇದು ಹಿಂದುಸ್ತಾನಕ್ಕೆ ಅತ್ಯಂತ ದುಃಖಕರವೊದಗಿತ್ತು. ಆದರೆ ಬದಲಿಗೆ ಇಂದು ಹಿಂದುಸ್ತಾನದಲ್ಲಿ ಎರಡು ಪ್ರತಿಸ್ಪರ್ಧಿ ಸೈನ್ಯಗಳನ್ನು ಕಟ್ಟುವದರಿದ್ದೇವೆ. ಹಿಂದುಸ್ತಾನ ಅನಿವಾರ್ಯವಾಗಿ ವಿನಾಶದ ಕಡೆಗೆ ಎಳೆಯಲ್ಪಡುತ್ತಿದೆ. ಎಷ್ಟು ಸುಲಭ ಸಂಗತಿಯಿದು. ಆದರೆ ಸೈನ್ಯಗಳು ಮನುಜ ಕುಲದ ಮೃತ್ಯುಪಂಜರವೆಂದು ಜನರಿಗೇಕೆ ತಿಳಿಯದಾಗಿದೆ? ಈ ಮೃತ್ಯುಪಂಜರದ ರಚನೆಗಾಗಿ ಹಿಂದುಸ್ತಾನದಲ್ಲಿ ಬಹಳ ದ್ರವ್ಯವನ್ನು ವೆಚ್ಚ ಮಾಡಲಾಗುವದು; ಉಳಿದ ಅಲ್ಪಸ್ವಲ್ಪ ಹಣವನ್ನು ಅನೇಕ ದೋಷಸಂಕೀರ್ಣವಾದ ಉದ್ಯೋಗಿಕವಿಕಾಸಕ್ಕಾಗಿ ಸುರಿಯಲಾಗುವದು.

"ನಿಮ್ಮ ಧ್ಯೇಯಗಳಲ್ಲಿ ವಿಶ್ವಾಸವುಳ್ಳವರು, ತಾವು ಯಾವುದಕ್ಕಾಗಿ ಹಾಳಿದರೊ ಅದರಿಂದ ಬದ್ಧವಿರುದ್ಧವಾದ ಈ ಮಾರ್ಗದಿಂದ ತಪ್ಪಿಸಿಕೊಂಡು ತಮ್ಮದೇ ಆದ ಉಪಾಯವನ್ನು ಹುಡುಕಿಕೊಳ್ಳಲಾರರೆ?

"ಈ ಕಗ್ಗತ್ತಲ ಸುಂಟರಗಾಳಿಯಿಂದ ಹೊರಬಂದು ನಮ್ಮ ಬಾಪೂನಾರೂ ಎಲ್ಲಾದರೊಂದು ಶಾಂತ ಸ್ಥಳದಲ್ಲಿ ನಮ್ಮನ್ನು ಸೇರಿಸಿ, ನಿಮ್ಮ ಹೃದಯಗಳನ್ನು ಅವನ ಮುಂದೆ ತೆರೆದಿಟ್ಟು ಸತ್ಯ ಅಹಿಂಸೆಗಳ ಪ್ರತ್ಯಕ್ಷ ಸೇವೆಗಾಗಿ ಹೊಸ ಕರ್ತವ್ಯ ಮಾರ್ಗವನ್ನು ಕೇಳಲು ಅವಕಾಶ ಮಾಡಿ ಕೊಡಲಾರನೆ? ಈ ರುದ್ರವಿಪ್ಲವದಲ್ಲಿ, ಸತ್ಯದಲ್ಲಿ ವಿಶ್ವಾಸವುಳ್ಳ ಹಲಕೆಲವೇ ಜನರು ನಾವು ನಮ್ಮ ಹರಿಹಂಚಾದ ಸತ್ವವನ್ನು ಶೇಖರಿಸದೆ ಹೋದರೆ ಎಲ್ಲರೂ ಬಿರುಗಾಳಿಯಲ್ಲಿ ನಷ್ಟರಾಗಿ ಹೋದೇವು."

ಹೀಗೆ ಮಾಡಲು ಗಾಂಧೀಜಿಗೆ ಬಹಳ ಆನಂದವಾದೀತು. ಆದರೆ ಇರದು ತಾವು ಹೀಗೆ ಮಾಡುವಂತಿಲ್ಲೆಂದು ಅವರಿಗೆನಿಸುತ್ತದೆ. ಅವರ ಒಂದೇ ಒಂದು ಆತುರವೆಂದರೆ ಬಿಹಾರಕ್ಕೂ ನೌಖಾಲಿಗೂ ಸಾಧ್ಯವಿದ್ದಷ್ಟು ಬೇಗನೆ ಹೋಗುವದು. ಇವೆರಡೂ ಪ್ರದೇಶಗಳಲ್ಲಿರುವ ಅಲ್ಪಸಂಖ್ಯಾಕರು, ಕಾಂಗ್ರೆಸ್ ಮತ್ತು ಲೀಗ್ ಮುಂದಾಳುಗಳ ಈಚೆಗಿನ ಹೇಳಿಕೆಯಲ್ಲಿ ಹೇಳಿರುವಷ್ಟು ಸುರಕ್ಷಿತರಾಗಿರುವಂತಾದರೆ ಅವರು ಆನಂದಿತರಾಗಿ ತಿರುಗಿ ಬರುವರು. ಈಗಂತೂ ಹಿಮಾಲಯಕ್ಕೆ ತೀರ್ಥಯಾತ್ರೆ ಮಾಡುವಂತೆ ಬಿಹಾರ ನೌಖಾಲಿಗಳಿಗೆ ತೆರಳಲು ಅವರು ಬಯಸುತ್ತಾರೆ. ಅದಾದ ಬಳಿಕ ಅವರು ರಚನಾತ್ಮಕ ಕಾರ್ಯಕ್ಕಾಗಿ ಒಂದೆಡೆ ತಳವೂರಿ ತಮ್ಮ ಧ್ಯೇಯಗಳಿಗಾಗಿ ಯಾರು ಆಯುಸ್ಸನ್ನು ಧಾರೆಯೆರೆಯಲು ಸಿದ್ಧರಾಗಿರುವರೊ ಅಂಥ ಸಹಕಾರ್ಯಕರ್ತರೊಂದಿಗೆ ರಾಮರಾಜ್ಯದ ತಮ್ಮ ಕನಸನ್ನು ನನಸಾಗಿ ಮಾಡುವ ಕಾರ್ಯದಲ್ಲಿ ತೊಡಗುವರು. ಗಾಂಧೀಜಿ ಯಾವಾಗಲೂ ಮುಖ್ಯವಾಗಿ ಸಮಾಜಸುಧಾರಕರು. ರಾಜಕೀಯ ಸ್ವಾತಂತ್ರ್ಯವಿಲ್ಲದೆ ಸಮಾಜ ಸುಧಾರಣೆ ಅಸಾಧ್ಯವೆಂದು ಮನವರಿಕೆಯಾದುದರಿಂದಲೇ ರಾಜಕಾರಣದ ಜಂಜಾಟದಲ್ಲಿ ಅವರು ಎಳೆಯಲ್ಪಟ್ಟರು. ಈಗ ರಾಜಕೀಯ ದಾಸ್ಯ ವಿಮೋಚನೆಯಾದಂತೆ ತೋರುವದರಿಂದ ಅವರ ಜೀವನದ ನಿಜವಾದ ಕಾರ್ಯಕ್ಕೆ ಅವರು ಮನಸ್ಸು ಹಾಕಬೇಕಾಗಿದೆ. ಅಗಸ್ಟ ೯, ೧೯೪೭ರ ಆ ದುರ್ದಿನದ ಮುಂಜಾನೆ ಗಾಂಧೀಜಿಯನ್ನೂ ಬೇರೆ ಮುಂದಾಳುಗಳನ್ನೂ ಸೆರೆಮನೆಗೊಯ್ಯುತ್ತಿದ್ದ ರೇಲುಗಾಡಿಯಲ್ಲಿ ದಿವಂಗತ ಸತ್ಯಮೂರ್ತಿಯವರು ಗಾಂಧೀಜಿಗೆ ಹೇಳಿದ್ದು: "ಬಾಪು, ನಿಮ್ಮ ನಿಜವಾದ ಕಾರ್ಯ ಹಿಂದುಸ್ತಾನ ಸ್ವತಂತ್ರವಾದಾಗಲೆ ಮೊದಲಾಗುವದು." ಹಿಂದುಸ್ತಾನವಿಂದು ಸ್ವಾತಂತ್ರ್ಯದ ಹೊಸ್ತಿಲಲ್ಲಿದೆ. ವಿಭಜನೆಯುಂಟೊದಗಿದ ಆಘಾತ ಗಾಂಧೀಜಿ ಯಾವುದಕ್ಕಾಗಿ ಬಾಳಿದರೋ ದುಡಿದರೋ ಅದನ್ನೆಲ್ಲ ನಾಶಮಾಡಿಬಿಡಬಹುದೆ? ಇದಿ ಜಗತ್ತಿನ ಕಣ್ಣುಗಳು ಹಿಂದುಸ್ತಾನದತ್ತ ತಿರುಗಿವೆ ಪುರಾಣದ ಸಮುದ್ರ ಮಂಥನದಲ್ಲಿ ಅನೇಕ ಅಸಘ್ರ್ಯ ವಸ್ತುಗಳೊಡನೆ ವಿಷವೂ ಅಮೃತವೂ ಉದಿಸಿದವು. ದೇವಾಸುರರು ಎಲ್ಲ ಅನರ್ಘ್ಯ ವಸ್ತುಗಳನ್ನೂ ಹಂಚಿಕೊಂಡರು. ಆದರೆ ಜಗತ್ತನ್ನು ಉಳಿಸುವ ಸಲುವಾಗಿ ವಿಷವನ್ನು ನುಂಗುವದು ಶಿವ ಭಗವಂತನ ಪಾಲಿಗೆ ಬಂತು. ಹಿಂದುಸ್ತಾನದ ಸ್ವಾತಂತ್ರ್ಯದ ಮಹಾ ಸಮರವನ್ನೂ ಸಮುದ್ರ ಮಂಥನಕ್ಕೆ ಹೋಲಿಸಬಹುದು. ಅದು ಸ್ವಾತಂತ್ರ್ಯಾಮೃತವನ್ನೂ ವಿಭಜನೆಯ ವಿಷವನ್ನೂ ಪಡೆಯಿತು. ಆ ವಿಷವನ್ನು ನುಂಗಬೇಕಾಗಿ ಬಂದವರು ಜಲವರಿದಾರೆ. ಪುರಾಣದ ಶಿವನಂತೆ ಈ ಅಪಾಯಕರ ಪೇಯವನ್ನು ಕುಡಿದವರು ಇನ್ನಷ್ಟು ಬಲಿಷ್ಠರಾಗಲೆಂದು ಹಾರೈಸೋಣ.

ಹೊಸದಿಲ್ಲಿ ೨೭-೭-೪೭ —ಸುಶೀಲಾ ನಯ್ಯರ

ಗಾಂಧೀಜಿಯ ಭಾಷಣಗಳ ಸಾರ

ಹೊಸದಿಲ್ಲಿ ೨೫—೭—೪೭

ಗೋಸಂರಕ್ಷಣೆ

ಹಿಂದುಸ್ತಾನದ ಒಕ್ಕೂಟದಲ್ಲಿ ಗೋವಧೆಯನ್ನು ಪ್ರತಿಬಂಧಿಸಬೇಕೆಂದು ಕೇಳಿಕೊಳ್ಳುವ ೫೦ ಸಾವಿರ ಪೋಸ್ಟ ಕಾರ್ಡುಗಳು ೩೦ ಸಾವಿರ ಪಾತೀಯುಗಳು ಮತ್ತು ಸಾವಿರಾರು ತಂತಿಗಳು ತಮ್ಮೆಡೆಗೆ ಬಂದಿವೆಂದು ಬಾಬು ರಾಜೇಂದ್ರ ಪ್ರಸಾದರು ತಮಗೆ ಹೇಳಿರುವರೆಂದು ಗಾಂಧೀಜಿ ಪ್ರಾರ್ಥನೋತ್ತರ ಭಾಷಣದಲ್ಲಿ ಹೇಳಿದರು. ಆ ಧ್ಯೇಯ ಸಾಧನೆಗಾಗಿಯೆ ಕಾನಪುರದಲ್ಲಿಯು ಪಂಡಿತರೊಬ್ಬರು ಉಪವಾಸ ಪ್ರಾರಂಭಿಸಿರುವರೆಂದು ಇಂದು ಒಂದು ತಂತಿ ಸಮಾಚಾರ ಬಂದಿದೆ. ಹಿಂದೂ ಧರ್ಮದಲ್ಲಿ ಗೋವಧೆಯನ್ನು ಹಿಂದುಗಳಿಗಾಗಿ ಪ್ರತಿಬಂಧಿಸಲಾಗಿದೆ. ಇಡೀ ಜಗತ್ತಿಗಾಗಿ ಅಲ್ಲ. ಧಾರ್ಮಿಕ ಪ್ರತಿಬಂಧ ಅಂತಃಕರಣದಿಂದಲೆ ಬರತಕ್ಕದ್ದು. ಹೊರಗಿನಿಂದ ಯಾವದೆ ಬಗೆಯ ಪ್ರತಿಬಂಧ ಹಾಕಿದ್ದಾದರೆ ಅದು ಒತ್ತಾಯವೆನಿಸಿಕೊಳ್ಳುವದು ಈ ಬಗೆಯ ಒತ್ತಾಯ ಧರ್ಮಕ್ಕೆ ವಿರೋಧಕವಾಗಿದೆ. ಹಿಂದುಸ್ತಾನ ಕೇವಲ ಹಿಂದುಗಳ ನಾಡಲ್ಲ ಮುಸಲ್ಮಾನರ, ಸೀಖರ, ಪಾರಸಿಕರ, ಕ್ರಿಶ್ಚನ್ನರ, ಯಹೂದಿಗಳ ಮತ್ತು ಹಿಂದುಸ್ತಾನದವರೆಂದು ಹೇಳಿಕೊಂಡು ಹಿಂದೀ ಒಕ್ಕೂಟಕ್ಕೆ ನಿಷ್ಠರಾಗಿ ಇರಬಯಸುವವರೆಲ್ಲರ ನಾಡು ಹಿಂದುಸ್ತಾನ. ಧಾರ್ಮಿಕ ಕಾರಣಗಳಿಗಾಗಿ ಹಿಂದುಸ್ತಾನದಲ್ಲಿ ಗೋವಧೆಯನ್ನು ಪ್ರತಿಬಂಧಿಸಿದ್ದಾದರೆ ಪಾಕಿಸ್ತಾನದಲ್ಲಿ ಇದೇ ಕಾರಣಕ್ಕಾಗಿ ಮೂರ್ತಿಪೂಜೆಯನ್ನು ಏಕೆ ಪ್ರತಿಬಂಧಿಸಬಾರದು? ನಾನೇನು ಮಂದಿರಗಳಿಗೆ ಹೋಗುವದಿಲ್ಲ. ಆದರೆ ಪಾಕಿಸ್ತಾನದಲ್ಲಿ ಮಂದಿರಕ್ಕೆ ಹೋಗಲು ನನ್ನನ್ನು ಪ್ರತಿಬಂಧಿಸಿದ್ದಾದರೆ, ತಲೆ ಹೋದರೂ ಚಿಂತೆಯಿಲ್ಲ ನಾನು ಅಲ್ಲಿಗೆ ಹೋಗತಕ್ಕವನೇ. ಮುಸಲ್ಮಾನೇತರರ ಮೇಲೆ ಶರಿಯಾತ್‌ನ್ನು ಹೇರುವದು ಅನ್ಯಾಯವಾಗಿರುವಂತೆ ಹಿಂದು ಧರ್ಮವನ್ನು ಹಿಂದ್ವೇತರ ಧರ್ಮದವರ ಮೇಲೆ ಹೇರತಕ್ಕದ್ದಲ್ಲ. ಅನೇಕ ಹಿಂದುಗಳೂ ಸಾವಕಾಶವಾಗಿ ಗೋಗಳನ್ನು ಪೀಡಿಸಿ ಗೋವಧೆಯ ಅಪರಾಧವನ್ನೇ ಮಾಡುತ್ತಿರುವರೆಂದು ಅವರು ಸಭಿಕರಿಗೆ ಹೇಳಿದರು. ಪರದೇಶಗಳಿಗೆ ಕಳಿಸಲ್ಪಡುತ್ತಿರುವ ಗೋಗಳನ್ನು ಕೊಂದ ಗೋಮಾಂಸದ ಸಾರವೆ ಹಿಂದುಸ್ತಾನಕ್ಕೆ ಮರಳಿ ಬರುವದು. ಸನಾತನಿ ಹಿಂದುಗಳು ಮುಕ್ಕಳೆ ವೈದ್ಯಕೀಯ ಸಲಹೆಯಿಂದ ಅದನ್ನು ತೆಗೆದುಕೊಳ್ಳುತ್ತಿರುವರು ಇದೆಲ್ಲ ಗೊತ್ತಿದ್ದರೂ ಹಿಂದುಗಳೆ ಆಕಳುಗಳನ್ನು ಹೊರಗೆ ಕಳಿಸುತ್ತಿರುವರು. ಗೋಹತ್ಯೆಯಲ್ಲಿ ಅವರು ಸಹಕಾರಿಗಳಲ್ಲವೆ?

ವೃಕ್ಷಾರೋಪಣ

ಅನಂತರ ಗಾಂಧೀಜಿ ದಿಲ್ಲಿಯಲ್ಲಿ ನಡೆದ ವೃಕ್ಷಾರೋಪಣ ಸಪ್ತಾಹದ ಬಗ್ಗೆ ಉಲ್ಲೇಖಿಸಿದರು. ಅನೇಕ ಪ್ರತಿಷ್ಠಿತ ಜನರು ವಾಯಿಸರಾಯರ ಜೊತೆ ಕೂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದುಂಟು. ವೃಕ್ಷಾರೋಪಣ ಮಾಡಿದ ಬಳಿಕ ಅದಕ್ಕೆ ನೀರು ಹಾಕಬೇಕೆಂದು ಅವರೊಬ್ಬರಿಗೇ ಹೊಳೆಯಿತು. ಉಳಿದವರಾರಿಗೂ ಹೊಳೆಯಲಿಲ್ಲ ಎಂದು ಹೇಳಲಾಗುತ್ತದೆ. ಏನೋ ಒಂದು ಬಗೆಯ ಉತ್ಸಾಹದಿಂದ ವೃಕ್ಷಾರೋಪಣ ಕಾರ್ಯಕ್ರಮವನ್ನು ಆ ಅಧಿಕಾರಿಯು ಇಟ್ಟುಕೊಳ್ಳಲಿಲ್ಲ. ಅಲ್ಲದೆ ಕೇವಲ ಶ್ರೀಮಂತರಿಗಾಗಿ ಅದು ಇರಲಿಲ್ಲ. ಎರಡನೆಯವರು ಅದನ್ನು ಅನುಸರಿಸಲೆಂದು ಅವರು ಅದನ್ನು ಪ್ರಾರಂಭಿಸಿದರು. ಇಷ್ಟೆ ಅಲ್ಲ; ಹಾಗೆ ಮಾಡಿ ಅವರು ಹಿಂದುಸ್ತಾನದಲ್ಲಿ ಮಳೆ ಬೀಳಲು ಸಹಾಯ ಮಾಡಿ ಆಭಿವೃದ್ಧಿಯನ್ನು ಹೆಚ್ಚಿಸಲಿ. ಅರಣ್ಯ ಕಡಿಮೆಯಾದಂತೆ ಮಳೆಗಾಲವೂ ಕಡಿಮೆಯಾಗುವುದು. ಅಲ್ಲದೆ ಗಿಡಗಳಿಗೆ ಪ್ರಾರಂಭದಲ್ಲಿಯೋ ಸ್ವಲ್ಪ ಕಾಳಜಿ ತೆಗೆದುಕೊಳ್ಳಬೇಕಾಗುವದು ಅನಂತರ ಅತ್ತ ಹೆಚ್ಚು ಲಕ್ಷ್ಯಕೊಡಬೇಕಿಲ್ಲ. ಒಂಚು ಎಕರೆ ಭೂಮಿಯಲ್ಲಿ ಹಣ್ಣಿನ ಗಿಡಗಳನ್ನು ಹಚ್ಚಿದರೆ ಅಷ್ಟೇ ಕ್ಷೇತ್ರದಲ್ಲಿ ಬಿತ್ತಿದ ಗೋದಿಗಿಂತ ಹೆಚ್ಚು ಉತ್ಪಾದನೆ ಬರುತ್ತದೆ. ತಮ್ಮ ಪಟಾಂಗಣಗಳಲ್ಲಿ ಅವರು ಕುಂಡೆಗಳಲ್ಲಿ ಪಲ್ಲೆ ಕಾಯಿಗಳನ್ನು ಬೆಳೆಸುವದನ್ನು ಕೈಕೊಳ್ಳಬೇಕು. ಈ ರೀತಿ ತಿನ್ನುವ ಪದಾರ್ಥಗಳನ್ನು ಬೆಳೆಸುವದು ಒಂದು ಬಗೆಯ ಮನರಂಜನೆಯೆನಿಸ್ಸುಂಟು ಮಾಡುವದಲ್ಲದೆ ಒಂದು ಬಗೆಯ ಆರೋಗ್ಯಕರವಾದ ಉದ್ಯೋಗವನ್ನೂ ಕೈಕೊಂಡಂತಾಗುವದು.

ಅಲ್ಪಸಂಖ್ಯಾಕರ ರಕ್ಷಣೆ

ನಿನ್ನೆ ದಿನ ಉತ್ತರಕೊಡಲು ವೇಳೆ ಸಿಕ್ಕದಿದ್ದ ಪ್ರಶ್ನೆಗೆ ಗಾಂಧೀಜಿ ಈ ದಿನ ಉತ್ತರ ಕೊಟ್ಟರು. ಅನೇಕ ಸ್ಥಳಗಳಲ್ಲಿ ಮುಸಲ್ಮಾನರು ನಡೆಸಿದ ಅತ್ಯಾಚಾರಗಳನ್ನನುಲಕ್ಷಿಸಿ ಒಕ್ಕೂಟದಲ್ಲಿಯ ಮುಸಲ್ಮಾನರ ಕೂಡ ಯಾವ ಬಗೆಯ ಸಂಬಂಧವನ್ನು ಇಟ್ಟುಕೊಳ್ಳತಕ್ಕದ್ದು? ಹತ್ತಿರಬರುವ ಮುಸಲ್ಮಾನರ ಮೇಲೆ ವಿಶ್ವಾಸವಿಡುವದು ಕಠಿಣವಾಗಿದೆ. ಪಾಕಿಸ್ತಾನದಲ್ಲಿಯ ಮುಸಲ್ಮಾನೇತರ ರಕ್ಷಣೆ ಸಾಧಿಸುವದೆಂಬದನ್ನು ಹೇಗೆ ಮನವರಿಕೆ ಮಾಡಿಕೊಳ್ಳಬೇಕು? ಒಮ್ಮೆ ಅಲ್ಲ, ಅನೇಕ ಸಲ ಈ ಪ್ರಶ್ನೆಗೆ ತಾವು ಉತ್ತರ ಕೊಟ್ಟಿರುದಾಗಿ ಗಾಂಧೀಜಿಯು ಅಶಯವಾಗಿತ್ತು ಹೀಗಿದ್ದರೂ ಮತ್ತೆ ಅದನ್ನು ಹೇಳುವದು ಸುಸ್ಪಷ್ಟವೆ ಆಗಿದೆ. ಹಿಂದುಸ್ತಾನ ಹಿಂದುಗಳ ನಾಡಾಗಿರುವಂತೆ ಹಿಂದ್ವೇತರರ ನಾಡೂ ಆಗಿರುವದು. ಎಲ್ಲ ಧರ್ಮಗಳ ಸತ್ವ ಪರೀಕ್ಷೆಯ ಕಾಲವೀಗ ಬಂದಿದೆ ತಾವು ಈ ಮೊದಲೆ ತಮ್ಮ ತಪ್ಪನ್ನು ಒಪ್ಪಿಕೊಂಡದ್ದಾಗಿದೆ. ಆತತ್ತರು ಅಹಿಂಸಾವಾದಿಗಳಾಗಿರಬಲ್ಲರೆಂದು ತಾವು ಭಾವಿಸಿದ್ದಾಗಿತ್ತು ಆದರೆ ವಸ್ತುಸ್ಥಿತಿ ಹಾಗಿರುವದಿಲ್ಲ. ಹಿಂದುಗಳು ಹೇಡಿತನವನ್ನು ಬಿಟ್ಟುಗೊಟ್ಟರೆ ಮುಸಲ್ಮಾನರು ಅವರ ಶೌರ್ಯವನ್ನು ಕಂಡುಕೊಂಡು ಅವರಿಗೆ ತೊಂದರೆಕೊಡುವದನ್ನು ಬಿಟ್ಟುಗೊಡುವರು. ಆದುದರಿಂದ ಒಕ್ಕೂಟದಲ್ಲಿ ಎಲ್ಲರನ್ನು ಸಮಾನರೀತಿಯಿಂದ ನಡೆಸಿಕೊಳ್ಳತಕ್ಕದ್ದು. ಅಹಿಂಸೆಯೊಂದೇ ಒದಗಿಸಬಹುದಾಗಿದ್ದ ಶೌರ್ಯವಿಲ್ಲದಿದ್ದಾಗ ಪ್ರತೀಕಾರಭಾವನೆ ಬಲಗೊಳ್ಳುವದು. ಸೈನ್ಯದ ವಿಭಜನೆ ಆ ಬಗೆಯ ಧೋರಣೆಯ ಒಂದು ಸ್ಪಷ್ಟಪಾತವಾಗಿದೆ. ವಿಭಜನೆಯು ದೇಶವನ್ನು ಪರಕೀಯ ದಾಳಿಯಿಂದ ಪರಿಣಾಮಕರ ರೀತಿಯಿಂದ ರಕ್ಷಣೆಮಾಡಿಕೊಳ್ಳಲು ನಿರುಪಯುಕ್ತ ಮಾಡಿರದಿದ್ದರೂ ಅಶಕ್ತವನ್ನಾಗಿ ಮಾಡಿದೆ. ಜಾಗ್ರತರಾಗದಿದ್ದರೆ ಹಿಂದುಸ್ತಾನ ಸೈನಿಕ ಸರ್ವಾಧಿಕಾರ ಸತ್ತೆಗೆ ಆಹುತಿಯಾಗಬಹುದೆಂದೂ ತೋರಿಸಿ ಕೊಡಲಾಗಿದೆ. ಒಂದು ಕೈಯಿಂದ ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡು ಮತ್ತೊಂದು ಕೈಯಿಂದ ಅದನ್ನು ಕಳೆದುಕೊಳ್ಳುವದು ಹಿಂದುಸ್ತಾನದ ಹಣೆಬರಹವಾಗಿದೆಯೆ? ಡಚ್ಚರು ಇಂಡೋನೇಶಿಯಾದ ಸ್ವಾತಂತ್ರ್ಯಹರಣ ಮಾಡಲು ಪ್ರಯತ್ನಿಸುತ್ತಿರುವಂತೆ ತೋರುತ್ತದೆ. ಹಿಂದೆ ಏನೇ ತಪ್ಪು ಮಾಡಿದ್ದರೂ ಬ್ರಿಟಿಶರು ತಾವಾಗಿಯೆ ಹಿಂದುಸ್ತಾನವನ್ನು ಬಿಟ್ಟುಹೋಗುತ್ತಿರುವರು. ಆ ಸ್ವಾತಂತ್ರ್ಯ ಹಾನಿಯು ಭ್ರಾತೃಹತ್ಯೆಯ ಯುದ್ಧದಲ್ಲಿ ಪರಿಣಮಿಸಲಿಕ್ಕೆಬೇಕು. ಹಿಂದೀ ಒಕ್ಕೂಟದಲ್ಲಿ ಸರಿಯಾಗಿ ವರ್ತಿಸಿದ್ದಾದರೆ, ಪಾಕಿಸ್ತಾನದಲ್ಲಿ ಮುಸಲ್ಮಾನೇತರರು ಎಷ್ಟೇ ಅಲ್ಪಸಂಖ್ಯಾಕರಾಗಿದ್ದರೂ ಯಾರೂ ಅವರ ಕೂದಲೆಳೆಗೆ ಕೂಡ ಧಕ್ಕೆ ಹಚ್ಚಲಾರರು. ಗಡಿ ನಿರ್ಣಯ ಸಮಿತಿಯವರ ನಿರ್ಣಯವೇನೇ ಆದರೂ ಅದನ್ನು ಮನ್ನಿಸುವದಾಗಿ ಎರಡೂ ಜಾತಿಗಳ ಧುರೀಣರು ಜಾಹೀರ ರೀತಿಯಿಂದ ಸಾರಿದ್ದು ಶುಭ ಲಕ್ಷಣವು.

ಹಿಂದುಸ್ತಾನದ ಯಾವದೇ ಭಾಗದಲ್ಲಿ ಅಲ್ಪಸಂಖ್ಯಾಕರು ಅಷ್ಟೇ ಅಲ್ಲ, ಈ ಮೊದಲು ರಾಜಕೀಯ ವಿರೋಧಿಗಳಾಗಿದ್ದವರು ಕೂಡ ಸುರಕ್ಷಿತರಾಗಿರುವರೆಂದೂ ಅವರು ಹೇಳಿದ್ದಾರೆ. ಸುಳ್ಳೆಂದು ಸಿದ್ಧವಾಗುವವರೆಗೆ ಅವರ ಹೇಳಿಕೆಯಲ್ಲಿ ನಂಬಿಗೆಯನ್ನಿಡುವದೇ ಸದಾಚರಣೆಯು.

ಹೊಸದಿಲ್ಲಿ ೨೬—೭—೪೭

ಸಂಪುಗಳು

ಪ್ರಾರ್ಥನೋತ್ತರ ಭಾಷಣಮಾಡುತ್ತ ಗಾಂಧೀಜಿ ಹಿಂದುಸ್ತಾನದಲ್ಲಿ ಸಂಪುಗಳು ಒಂದುಬಗೆಯ ಪಿಡುಗುಗಳಾಗಿ ಪರಿಣಮಿಸಿವೆಯೆಂದು ಕೇಳಿದ ಸುದ್ದಿಗಳಿಂದ ಮತ್ತು ವೃತ್ತಪತ್ರಗಳಲ್ಲಿಯ ಸುದ್ದಿಗಳಿಂದ ತಮಗೆ ಎನಿಸುತ್ತದೆಂದು ನುಡಿದರು. ಕಲಕತ್ತೆಯಲ್ಲಿ ಅಕೌಂಟ ಜನರಲ್‌ರ ಕಚೇರಿಯಲ್ಲಿ 'ಲೇಖಣಿ ಬಹಾದ್ದೂರ'ರು ಲೆಕ್ಕಣಿಕೆಯನ್ನು ಕೆಳಗಿಟ್ಟು ಸಂಪು ಸಾರಿದರು. ಇಂಥ ಶಾಖೆಗಳು ಸಾರ್ವಜನಿಕ ಸೇವೆಯ ಶಾಖೆಗಳು ಇವುಗಳಲ್ಲಿ ವ್ಯತ್ಯಯವುಂಟಾದರೆ ಸಾರ್ವಜನಿಕ ಜೀವನದಲ್ಲಿಯೆ ಅವ್ಯವಸ್ಥೆಯುಂಟಾಗುವದು. ಯಾವದೇ ಪರಿಸ್ಥಿತಿಯಲ್ಲಿಯೂ ಈ ಶಾಖೆಗಳಲ್ಲಿಯ ಕಾರಕೂನರು ಮತ್ತು ಇತರ ಜನರು ಗುಲಾಮರಂತಿರಬೇಕೆಂದು ನಾನು ಹೇಳುವದಿಲ್ಲ. ಆದರೆ ಬೇಡಿಕೆಗಳನ್ನು ಪಡೆಯಲು ಬೇರೆ ಅಕ್ಷಿಪ್ತಕರವಲ್ಲದ ಮಾರ್ಗಗಳಿದ್ದವು. ಕೆಳಗಿನವರ್ಗದ ನೋಕರರ ಸಂಬಳದಲ್ಲಿ ದೊಡ್ಡ ಪ್ರಮಾಣದಲ್ಲಿ ಸಂಬಳ ಸಮಿತಿಯವರು ಹೆಚ್ಚಳದ ಶಿಫಾರಸು ಮಾಡಿರುವರು. ಆದರೂ ಅವರಿಗೆ ಅದಕ್ಕೂ ಹೆಚ್ಚಿಗೆ ಬೇಕಾಗಿದೆ. ಸಂಪಿಗೆ ಅದೇ ಕಾರಣವೆಂದು ತೋರುತ್ತದೆ. ಡಾಯರೆಕ್ಟರರು ತಿಂಗಳಿಗೆ ೨೦೦೦ ರೂಪಾಯಿಗಳನ್ನು ಏಕೆ ಪಡೆಯಬೇಕು ಮತ್ತು ಚಪರಾಸಿಯು ತಿಂಗಳಿಗೆ ೩೦ ರೂಪಾಯಿಗಳನ್ನಷ್ಟೇ ಏಕೆ ಪಡೆಯಬೇಕು? ನಿಶ್ಚಯವಾಗಿ ಅವರಲ್ಲಿ ಬಹಳ ವ್ಯತ್ಯಾಸವಿದೆ. ಬ್ಯಾರಿಸ್ಟರರು ಮತ್ತು ಭಂಗಿಯು ಇಬ್ಬರೂ ಸಮಾನ ಸಂಬಳವನ್ನು ಪಡೆಯತಕ್ಕದ್ದೆಂದು ನಾನು ಆದರ್ಶವನ್ನಿಟ್ಟುಕೊಳ್ಳತಕ್ಕದ್ದೆಂದು ತಮಗೆನಿಸುತ್ತದೆ. ಆದರೆ ಜಗತ್ತಿನ ಬಹು ಭಾಗವೆಲ್ಲ ಈ ಆದರ್ಶದಿಂದ ಬಹಳ ದೂರವಿದೆಂಬುದು ತಮಗೂ ಗೊತ್ತಿದೆ. ಇತರರಿಗೂ ಗೊತ್ತುಂಟು ಬ್ಯಾರಿಸ್ಟರರಿಗೆ ಈಗ ಏನು ದೊರೆಯುತ್ತಿದೆಯೊ ಅದಕ್ಕೆ ಅವರು ಅರ್ಹರಾಗಿಲ್ಲೆಂಬುದೂ ತಮಗೆ ಗೊತ್ತಿದೆ. ಆದರೆ ಪಕ್ಷಕಾರರೆ ಸಂತೋಷದಿಂದ ಬೇಕಾದಷ್ಟು ಹಣವನ್ನು ಕೊಡುತ್ತಿರುವರು. ಅದಕ್ಕೂ ಕೆಳಗಿನ ದರ್ಜೆಯವರ ಸ್ಥಿತಿಯನ್ನು ಲಕ್ಷಿಸಿದರೆ ಜನರು ಸಿಂಪಿಗನಿಗೆ ದಿನಾಲು ನಾಲ್ಕು ರೂಪಾಯಿಗಳನ್ನು ಸಂತೋಷದಿಂದ ಕೊಡುತ್ತಿರುವರೆಂಬುದು ಗೊತ್ತಾಗುವದು ಆದರೆ ಅದೇ ಕಸಗೂಡಿಸುವವನಿಗೆ ದಿನಕ್ಕೆ ಎಂಟಾಣೆಗಿಂತ ಹೆಚ್ಚಿಗೆ ಅವರು ಕೊಡುವದಿಲ್ಲ. ಗಳಿಕೆಯನ್ನು ಒಂದೇ ಮಟ್ಟಕ್ಕೆ ತರಬೇಕಾದರೆ ಜನರಿಗೆ ತಾಳ್ಮೆಯಿಂದ ಮತ್ತು ಬಿಟ್ಟೂಬಿಡದೆ ಶಿಕ್ಷಣ ದೊರೆಯಲಿಕ್ಕೆ ಬೇಕು. ಆ ಸಮಾನ ಸ್ಥಿತಿಯನ್ನು ಮುಟ್ಟಬೇಕಾದರೆ ಬಹಳ ಪ್ರಗತಿಪರವಾದ ಶಿಕ್ಷಣದ ಅವಶ್ಯಕತೆಯುಂಟು. ಆದರೆ ಈ ಮಧ್ಯಂತರ ಅವಧಿಯಲ್ಲಿ ಉಚ್ಚ ನೋಕರರ ಮತ್ತು ಕೆಳಗಿನ ವರ್ಗದ ನವಕರ ಸಂಬಳದಲ್ಲಿದ್ದ ಅಂತರವನ್ನು ತುಂಬುವದಕ್ಕಾಗಿ ಪ್ರಯತ್ನ ಮಾಡಬೇಕಾಗುವದು. ಸಂಬಳ ಸಮಿತಿಯು ಅದನ್ನು ಮಾಡಿದೆ. ಸಮಾಧಾನಕಾರಕ ಹೆಚ್ಚಳ ಆದಾಗಿರದಿದ್ದರೆ ಕಾರಣಗಳನ್ನು ಪರಿಶೀಲಿಸಲಿಕ್ಕೆ ಬೇಕು. ಜೀವನದಲ್ಲಿ ಒಮ್ಮೆಲೆ ಮೇಲಿನ ಮೆಟ್ಟಲನ್ನು ಮುಟ್ಟುವಂತಹದೇನೂ ಇರುವದಿಲ್ಲ. ಬಂಗಾರದ ತತ್ತಿಯನ್ನು ಇಕ್ಕುವ ಕೋಳಿಯನ್ನು ಅವರು ಕೊಲ್ಲದಿರಲಿ. ಆ ಮಾರ್ಗವು ದೇಶದ ದಿವಾಳಿ ಹೊರಡಿಸುವದರಿಂದ ಉಳಿಸುವದು.

ಮುಂಬಯಿ ಸರಕಾರದವರು ಸಂಬಳ ಸಮಿತಿಯವರ ಶಿಫಾರಸಗಳನ್ನು ಈಗಾಗಲೆ ಕಾರ್ಯರೂಪದಲ್ಲಿ ತಂದಿರುವರೆಂದು ಕೇಳಿದ್ದೇವೆ. ಅದಕ್ಕೂ ಹೆಚ್ಚಿನ ಸಂಬಳಕ್ಕಾಗಿ ಈಗ ಅಲ್ಲಿ ಚಳವಳಿ ನಡೆದಿದೆಂದೂ ತಿಳಿಯುತ್ತದೆ. ಒಂದು ದಿನದ ಸಾಂಕೇತಿಕ ಸಂಪಿನ ಬೆದರಿಕೆಯನ್ನು ಈಗ ಹಾಕಲಾಗಿದೆ. ಅದರಲ್ಲಿ ಸತ್ಯಾಂಶವಿರಲಿಕ್ಕಿಲ್ಲೆಂದು ತಮ್ಮ ನಂಬಿಗೆ. ಒಂದು ವೇಳೆ ಸತ್ಯಾಂಶವಿದ್ದರೂ ಬೆದರಿಕೆಗಿಂತ ಅದು ಮುಂದೆ ಹೋಗಲಿಕ್ಕಿಲ್ಲೆಂದು ತಾವು ಆಶಿಸುತ್ತೇವೆ. ಈ ಬಗ್ಗೆ ನಿಶ್ಚಯವೇ ಆಗಿದ್ದರೆ ಅದನ್ನು ಪ್ರಾರಂಭಿಸುವ ಮೊದಲು ಇನ್ನೊಮ್ಮೆ ಪರಿಸ್ಥಿತಿಯನ್ನು ವಿಮರ್ಶಿಸಬೇಕೆಂದು ಚಳವಳಿಯ ಧುರೀಣರನು ಕೇಳಿಕೊಳ್ಳಬಯಸುವೆವು. ಆ ಚಳವಳಿಯ ಧುರೀಣರ ಶಕ್ತಿ ಇಲ್ಲವೆ ವರ್ಚಸ್ಸನ್ನು ಪರಿಗೆ ಹಚ್ಚಿ ನೋಡಬೇಕೆಂಬ ಪ್ರಯತ್ನವದಾಗಿರದಿದ್ದರೆ ಅದೊಂದು ನಿರರ್ಥಕ ಸಾಹಸವೆಂದು ತಮಗೆ ತೋರುತ್ತದೆ. ಪರಿಸ್ಥಿತಿ ಹೀಗಿರುವಾಗ ದೇಶಕ್ಕೆ ಅತ್ಯಂತ ಘಾತಕ ಮತ್ತು ಅಪಾಯಕಾರಕವಾದ ಚಟುವಟಿಕೆ ಮಾತ್ರ ಇದೆಂದು ತಾವು ಹೇಳಬಯಸುತ್ತೇವೆ. ಪರಕೀಯ ಪ್ರಭುತ್ವದಿಂದ ಇದೀಗ ಗಳಿಸುತ್ತಿರುವ ಸ್ವಾತಂತ್ರ್ಯಕ್ಕೆ ಪಕ್ಷದ ಲಾಭಕ್ಕಾಗಿ ನಡೆಸುತ್ತಿರುವ ಉಪದ್ವ್ಯಾಪವು ಘಾತಕವಾಗಿದೆಂದು ಜೀವನದಲ್ಲಿ ವರ್ಚಸ್ಸಿದ್ದವರೆಲ್ಲ ಮರೆಯದಿರಲಿ.

ಹೊಸದಿಲ್ಲಿ ೨೮—೭—೪೭

ಈ ದಿನ ಸಾಯಂಕಾಲ ನನ್ನ ಫಾಯಿಲಿನಲ್ಲಿರುವ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡಬಯಸುತ್ತೇನೆ.

ಅಗಸ್ಟ ೧೫ ರ ನಂತರ ಕಾಂಗ್ರೆಸ್ಸು

ಪ್ರಶ್ನೆ— ಅಗಸ್ಟ ೧೫ ರ ನಂತರ ಕಾಂಗ್ರೆಸ್ಸಿನ ಅಸ್ತಿತ್ವ ಅವಶ್ಯವೆನಿಸಿದರೆ ಎರಡು ಕಾಂಗ್ರೆಸುಗಳ ಸ್ಥಾಪನೆಯಾಗುವದೇ ಇಲ್ಲವೆ ಹಿಂದುಸ್ತಾನದಲ್ಲಿಯ ಎರಡು ಭಾಗಗಳಿಗೂ ಒಂದೇ ಕಾಂಗ್ರೆಸ್ಸು ಉಳಿಯುವದೇ?

ಉತ್ತರ— ನನ್ನ ಅಭಿಪ್ರಾಯದಂತೆ, ಇಂಥ ಸಂಸ್ಥೆಯ ಅವಶ್ಯಕತೆ ಈ ವರೆಗಿನಕಿಂತ ಇನ್ನು ಮುಂದೆಯೆ ಹೆಚ್ಚಿಗಿದೆ. ಆದರೆ ಅದರ ಕಾರ್ಯ ಮಾತ್ರ ಭಿನ್ನವಾಗಿದೆಂಬುದು ನಿಃಸಂದಿಗ್ಧ. ಎರಡು ಧರ್ಮಗಳ ತಳಹದಿಯ ಮೇಲೆ ಎರಡು ರಾಷ್ಟ್ರಗಳೆಂಬ ತತ್ವಕ್ಕೆ ಕಾಂಗ್ರೆಸ್ಸಿಗರು ಒಪ್ಪಿಗೆ ಕೊಡುವ ಮೂರ್ಖತನವನ್ನು ತೋರಿಸದಿದ್ದರೆ ಒಂದು ಹಿಂದುಸ್ತಾನಕ್ಕೆ ಒಂದೇ ಕಾಂಗ್ರೆಸ್ಸು ಇರಬಲ್ಲುದು. ಹಿಂದುಸ್ತಾನದ ವಿಭಜನೆಯು ಅಖಿಲ ಭಾರತದ ಸಂಸ್ಥೆಯನ್ನು ವಿಭಾಗಿಸಲಾರದು. ಹಿಂದುಸ್ತಾನ ಎರಡು ಸ್ವತಂತ್ರ ಸಾರ್ವಭೌಮಸರಕಾರಗಳಾಗಿ ವಿಭಾಗಿಸಲ್ಪಟ್ಟದ್ದರಿಂದ ಎರಡು ರಾಷ್ಟ್ರಗಳಾಗಿ ಪರಿಣಮಿಸಲಾರದು ಒಂದೆರಡು ಸಂಸ್ಥಾನಗಳು ಎರಡೂ ಸಾಮಂತ ಸರಕಾರಗಳಲ್ಲಿ ಸೇರುವದಿಲ್ಲೆಂದು ತಿಳಿಯಿರಿ, ಕಾಂಗ್ರೆಸ್ಸು ಆ ಪ್ರದೇಶಗಳನ್ನು ಬಿಟ್ಟುಬಿಡುವದೊ? ಅಲ್ಲಿನ ಜನರನ್ನು ಕಾಂಗ್ರೆಸ್ಸು ಹೊರಗೆ ಹಾಕುವದೊ? ಅವರು ಕಾಂಗ್ರೆಸ್ಸಿನಿಂದ ಹೆಚ್ಚಿನ ಲಕ್ಷ್ಯವನ್ನು ಕೋರಲಾರರೆ? ಮೊದಲಿಗಿಂತ ಹೆಚ್ಚು ತೊಡಕಿನ ಸಮಸ್ಯೆಗಳೇನೊ ನಿಶ್ಚಿತವಾಗಿ ಉದ್ಭವಿಸುವವು. ಕೆಲವುಗಳಿಗೆ ಪರಿಹಾರವೂ ದೊರೆಯಲಿಕ್ಕಿಲ್ಲ. ಆ ಕಾರಣದಿಂದ ಕಾಂಗ್ರೆಸ್ಸನ್ನು ಇಬ್ಭಾಗಿಸಲಾಗದು. ಅಂಥ ಸಮಸ್ಯೆಗಳುಂಟಾಗುವದರಿಂದ ಈ ಮೊದಲಿಗಿಂತ ಹೆಚ್ಚು ಮುತ್ಸದ್ದಿತನ, ಆಳವಾದ ವಿಚಾರ ಮತ್ತು ಯೋಗ್ಯ ನಿರ್ಣಯಗಳ ಅವಶ್ಯಕತೆ ಇದೆ. ಶಕ್ತಿಹ್ರಾಸ ಮಾಡುವಂಥ ತೊಂದರೆಗಳನ್ನು ನಾವು ಮೊದಲೆ ಗ್ರಹಿಸುವದು ಬೇಡ. ಸದ್ಯಕ್ಕೆ ಸಾಕಷ್ಟು ಕಷ್ಟಗಳಿವೆ.

ಕಾಂಗ್ರೆಸು ಮತ್ತು ಜಾತೀಯತೆ

ಎರಡನೇ ಪ್ರಶ್ನೆ— ಕಾಂಗ್ರೆಸ್ಸು ಈಗ ಜಾತೀಯ ಸಂಸ್ಥೆಯಾಗಿದೆಯೇ? ಅದಕ್ಕಾಗಿ ಒಂದೇ ಸವನೆ ಬೇಡಿಕೆ ಬರಹತ್ತಿದೆ. ಇದೀಗ ಮುಸಲ್ಮಾನರು ತಾವು ಪರಕೀಯರೆಂದು ಭಾವಿಸಹತ್ತಿದ್ದರಿಂದ, ನಾವೇಕೆ ಒಕ್ಕೂಟವನ್ನು ಹಿಂದೂ ಹಿಂದುಸ್ತಾನವೆಂಬ ಶಾಶ್ವತವಾದ ಹಿಂದುತ್ವದ ಮುದ್ರೆಯನ್ನು ಅದರ ಮೇಲೆ ಹೊಡೆಯಬಾರದು?

ಉತ್ತರ— ಈ ಪ್ರಶ್ನೆ ತೀರ ಅಜ್ಞಾನಮೂಲಕವಾದುದು. ಕಾಂಗ್ರೆಸ್ಸು ಎಂದಿಗೂ ಹಿಂದೂ ಸಂಸ್ಥೆಯಾಗಲರಿಯದು. ಅದನ್ನು ಹಿಂದೂ ಸಂಸ್ಥೆಯನ್ನು ಮಾಡುವವರು ಹಿಂದುಸ್ತಾನದ ಮತ್ತು ಹಿಂದೂ ಧರ್ಮದ ಶತ್ರುಗಳಾಗಿರುವರು. ಕೋಟ್ಯವಧಿ ಜನರ ಒಂದು ರಾಷ್ಟ್ರ ನಮ್ಮದು. ಅವರ ಧ್ವನಿಯನ್ನು ಯಾರೂ ಕೇಳಿಲ್ಲ. ಎಲ್ಲಿಯಾದರೂ ಬೇಡಿಕೆ ಕೇಳಿಬರುತ್ತಿದ್ದರೆ ನಗರಗಳಲ್ಲಿಯ ಕೆಲವು ಗಡಿಬಿಡಿಗುಂಡರದೇ ಕಾರ್ಯವದು. ಆದರೆ ಧ್ವನಿಯೆಂದರೆ ಹಿಂದುಸ್ತಾನದ ಹಳ್ಳಿಗಳಲ್ಲಿಯ ಕೋಟ್ಯವಧಿ ಜನರ ಧ್ವನಿಯೆಂದು ಮಾತ್ರ ನಾವು ತಿಳಿಯತಕ್ಕದ್ದಲ್ಲ. ಮೂರನೆಯದಾಗಿ ಒಕ್ಕೂಟದಲ್ಲಿಯ ಮುಸಲ್ಮಾನರು ತಾವು ಪರದೇಶಸ್ಥರೆಂದೇನು ಈ ವರೆಗೆ ಸಾರಿಲ್ಲ. ಕೊನೆಯದಾಗಿ ಹಿಂದುಗಳಲ್ಲಿ ಎಷ್ಟೇ ಲೋಪದೋಷಗಳಿದ್ದರೂ ಹಿಂದು ಧರ್ಮವೇನು ಸರ್ವಬಾಹಿರ ಧರ್ಮವೆಂದು ಹೇಳಲ್ಪಡುವುದಿಲ್ಲ. ಬೇರೆ ಬೇರೆ ಧರ್ಮದವರು ನಮ್ಮನ್ನು ಒಂದೇ ಒಂದು ಅವಿಭಾಜ್ಯ ರಾಷ್ಟ್ರವನ್ನಾಗಿ ಮಾಡುತ್ತಿರುವರು. ಇವರೆಲ್ಲರಿಗೂ ಹಿಂದುಸ್ತಾನದ ರಾಷ್ಟ್ರದವರೆ ಎಂಬು ಹೇಳಿಕೊಳ್ಳಲು ಸಮಾನ ಹಕ್ಕಿದೆ. ಬಹುಸಂಖ್ಯಾಕರೆಂದು ಹೇಳಿಕೊಳ್ಳುವವರಿಗೆ ಎರಡನೆಯವರ ಮೇಲೆ ಒತ್ತಾಯದಿಂದ ಏನನ್ನೂ ಹೇರಲು ಬರಲಾರದು. ಸಂಖ್ಯಾ ಶಕ್ತಿ ಮತ್ತು ಖಡ್ಗಶಕ್ತಿ ಹಕ್ಕಾಗಿ ಪರಿಣಮಿಸಲಾರದು. ಕೋರಿಕೆಗೆ ವಿರುದ್ಧವಾಗಿ ಕಾಣುತ್ತಿದ್ದರೂ ನ್ಯಾಯವೆ ನಿಜವಾದ ಶಕ್ತಿಯಾಗಿದೆ.

ಮುಸಲ್ಮಾನೇತರರು ಮತ್ತು ಪಾಕಿಸ್ತಾನ ಧ್ವಜ

ಮೂರನೇ ಪ್ರಶ್ನೆ:— ಪಾಕಿಸ್ತಾನದ ಧ್ವಜದ ಬಗ್ಗೆ ಮುಸಲ್ಮಾನೇತರರ ಧೋರಣೆಯೇನಿರಬೇಕು?

ಉತ್ತರ— ಆ ಧ್ವಜವಿನ್ನೂ ಅಸ್ತಿತ್ವದಲ್ಲಿ ಬಂದಿಲ್ಲ. ಬಹುಶಃ ಮುಸ್ಲಿಮ ಧ್ವಜದಂತೆಯೆ ಅದು ಇರಬಹುದು. ಇಸ್ಲಾಮಕ್ಕೆ ಮುಸ್ಲಿಮ ಲೀಗು ಅಂಟಿಕೊಂಡದ್ದಾದರೆ ಜಗತ್ತಿನಲ್ಲಿಯ ಎಲ್ಲ ಮುಸಲ್ಮಾನರಿಗೆ ಸಾಮಾನ್ಯವಾದ ಒಂದು ಧ್ವಜ ಇರಲಿಕ್ಕೆಬೇಕಾಗುವದು. ಮತ್ತು ಇಸ್ಲಾಮಕ್ಕೆ ಶತ್ರುಗಳಾಗಿರದ ಎಲ್ಲ ಜನರ ಸಾರ್ವತ್ರಿಕ ಮನ್ನಣೆಗೆ ಅದು ಪಾತ್ರವಾಗಲಿಕ್ಕೆ ಬೇಕು. ಇಸ್ಲಾಮರಿಗಾಗಲಿ, ಕ್ರಿಶ್ಚನ್ನರಿಗಾಗಲಿ, ಹಿಂದುಗಳಿಗಾಗಲಿ ಅಥವಾ ಬೇರೆ ಯಾವದೇ ಧರ್ಮದವರಿಗಾಗಲಿ ಇಂಥ ಧ್ವಜವಿದ್ದುದು ನನಗೆ ಕಂಡು ಬಂದಿಲ್ಲ. ನಾನು ಇತಿಹಾಸದ ವಿದ್ಯಾರ್ಥಿಯಿರದ್ದರಿಂದ ನನ್ನ ಅಭಿಪ್ರಾಯ ತಪ್ಪು ಇದ್ದರೆ ತಿದ್ದುಪಡಿ ಮಾಡಿಕೊಳ್ಳುವೆನು. ಚಿತ್ರ ಮುಂತಾದ್ದು ಯಾವದೇ ಬಗೆಯದಿರಲಿ ಪಾಕಿಸ್ತಾನ ಧ್ವಜ ತನ್ನ ಭಾಗದಲ್ಲಿರುವ ಎಲ್ಲ ಜನರನ್ನೂ ಜಾತಿ ಧರ್ಮಗಳ ಭೇದಭಾವವಿಲ್ಲದೆ ಸಮಾನ ರೀತಿಯಿಂದ ನಡೆಸಿಕೊಂಡದ್ದಾದರೆ ನಿಮ್ಮಂತೆ ನಾನೂ ಆ ಧ್ವಜಕ್ಕೆ ವಂದನೆಯನ್ನು ಸಲ್ಲಿಸುವೆನು. ಸಾಮಂತ ಸರಕಾರಗಳು ಪರಸ್ಪರ ಶತ್ರುಗಳಾಗಿ ಬಾಳಲಾರವೆಂಬುದಾಗಿ ಬೇರೆ ಶಬ್ದಗಳಲ್ಲಿ ಹೇಳಬಹುದು. ಕಾಮನ್‌ವೆಲ್ಥದ ಎರಡು ಸಾಮಂತ ಸರಕಾರಗಳು ಪರಸ್ಪರ ಶತ್ರುಗಳಾಗಿ ಉಳಿಯಲಾರವು. ದಕ್ಷಿಣ ಅಫ್ರಿಕೆಯ ಸಾಮಂತ ಸರಕಾರವು ಹಿಂದುಸ್ತಾನದ ಸಾಮಂತ ಸರಕಾರದಗೂಡ ಯಾವ

—೧೦ನೇ ಪುಟಕ್ಕೆ

ಆಹಾರದ ಕಷ್ಟ ಮತ್ತು ಮಣ್ಣಿನ ಫಲವತ್ತೆ

ಇಂದಿನ ಆಹಾರದ ಕಷ್ಟವು ಹಿಂದೀ ನೆಲದ ಅಲ್ಪಫಲವತ್ತೆಯಿಂದ ಉಂಟಾದುದಲ್ಲ. ಆಹಾರದ ಕೊರತೆಗೆ ಅನೇಕ ಕಾರಣಗಳಿವೆ; ಆದರೆ ಮಣ್ಣಿಗೆ ಗೊಬ್ಬರವನ್ನು ಪೂರಯಿಸಿ ಫಲಸನ್ನು ಹೆಚ್ಚಿಸಲು ಕೈಕೊಳ್ಳಲು ತಪ್ಪಿದ ಕ್ರಮಗಳನ್ನು ಕೈಕೊಂಡರೆ ಸರಕಾರವು ಖಂಡಿತವಾಗಿ ದೇಶವನ್ನು ಉಳಿಸಬಲ್ಲುದು. ಇಷ್ಟರೊಳಗೇ ರಾಷ್ಟ್ರೀಯ ಸರಕಾರವು ಧಾನ್ಯೋತ್ಪಾದನವನ್ನು ಹೆಚ್ಚಿಸಬೇಕಾಗಿತ್ತು. ಆಹಾರ ಧಾನ್ಯಗಳಲ್ಲಿ ಮುಖ್ಯವಾದ ಭತ್ತ, ಗೋಧಿ, ಜೋಳ, ಬಾಜರ ಮುಂತಾದುವನ್ನು ಭಾರತವು ಉತ್ಪಾದಿಸಲು ಶಕ್ತವಾದರೆ ಕ್ಷಾಮದ ಸಂಭವ ಕಡಿಮೆಯಾಗುವುದು. ಅಕ್ಕಿಯ ಮೇಲೆ ಅವಲಂಬಿಸಿದ ದೇಶದ ನಾನಾ ಭಾಗಗಳು ಬ್ರಹ್ಮದೇಶ, ಮಲಯ, ಸಯಾಮ ಮತ್ತು ಇತರ ದೇಶಗಳಿಂದ ಸಹಾಯ ಪಡೆದಿವೆ. ೨೫೦,೦೦೦ ಟನ್ನ ಅಕ್ಕಿಯನ್ನು ಬೆಳೆದದ್ದಲ್ಲದೆ ತಿರುವಾಂಕೂರು ಸಂಸ್ಥಾನವು ೩೬೭,೦೦೦ ಟನ್ನ ಅಕ್ಕಿಯನ್ನು ಪ್ರತಿವರ್ಷ ಆಯಾತ ಮಾಡಿಕೊಳ್ಳುತ್ತದೆ. ಬಂಗಾಲ ಮದ್ರಾಸುಗಳು ಕೂಡ ಬಹಳ ಮಟ್ಟಿಗೆ ಆಯಾತದ ಅಕ್ಕಿಯ ಮೇಲೆಯೇ ಅವಲಂಬಿಸಬೇಕಾಗುತ್ತದೆ. ಆದುದರಿಂದ ನೈಟ್ರೋಜನ್ ಕಾಂಪೌಂಡು ಸೇರಿದ ಗೊಬ್ಬರಗಳಿಂದ ಹೆಚ್ಚಾಗಿ ಬೆಳೆಯುವ ಧಾನ್ಯಗಳನ್ನು ಹೆಚ್ಚಾಗಿ ಉತ್ಪಾದಿಸಲು ಬಹಳ ಅವಕಾಶವಿದೆ.

ಹಿಂದೀ ಮಣ್ಣಿನ ಸಾರಹೀನತೆಯ ಪ್ರಶ್ನೆ ಅನೇಕ ಸಲ ಬಂದಿದ್ದರೂ ಅದಕ್ಕೆ ಸರಿಯಾದ ಉತ್ತರ ಈ ವರೆಗೆ ಯಾರಿಂದಲೂ ಬಂದಿಲ್ಲ. ಡಾ. ವೋಲ್ಕರರು ಹಿಂದೀ ಒಕ್ಕಲುತನದ ಸುಧಾರಣೆ ಯೆಂಬ ಪುಸ್ತಕದಲ್ಲಿ ಕೊಟ್ಟ ಇಂಗ್ಲಂಡಿನ ರಾಥಾಮಸ್ಟಡ್ ಪ್ರದೇಶದಲ್ಲಿ ೫೦ ವರ್ಷಗಳ ಪರ್ಯಂತ ಗೊಬ್ಬರ ಹಾಕದೆ ಗೋಧಿ ಬೆಳೆದ ಗದ್ದೆಗಳ ಫಸಲಿನ ಪಟ್ಟಿ ಹೀಗಿದೆ:—

	ಎಕರೆಗಿಂತಿಷ್ಟು ಬುಶೆಲ್ಸ್
೮ ವರ್ಷ (೧೮೪೪-೫೧)	೧೭
೨೦ ವರ್ಷ (೧೮೫೨-೭೧)	೧೪.೯
೨೦ ವರ್ಷ (೧೮೭೨-೯೧)	೧೧ ೧

೧ ಬುಶೆಲ್=೩೦ ಸೇರು.

ಮೇಲಿನ ಪಟ್ಟಿಯಿಂದ ರಾಥಾಮಸ್ಟಡ್ಡಿನ ಗದ್ದೆಗಳ ಫಸಲಿನ ಉತ್ಪಾದನದ ಪ್ರಮಾಣದಲ್ಲಿ ಹೇಗೆ ಗೊಬ್ಬರವಿಲ್ಲದ ಮಣ್ಣು ಕ್ರಮೇಣ ಕಡಿಮೆಯಾಗುತ್ತಬಂತೆಂಬುದು ತಿಳಿಯುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಹಿಂದೀ ಮಣ್ಣು ಕ್ರಮೇಣ ಘಾಸಕ್ತವಾಗುತ್ತ ಹೋಗದೆ ಇಲ್ಲದೆಂದು ಡಾ. ವೋಲ್ಕರರು ನಿರ್ಣಯಿಸಿದರು.

ಹಾಗಲ್ಲದೆ ಹೋವರ್ಡ್ ಮತ್ತು ವಾಡರು ತಮ್ಮ "ಒಕ್ಕಲುತನದ ಹಾಳು ಪದಾರ್ಥಗಳು" ಎಂಬ ಪುಸ್ತಕದಲ್ಲಿ ಈ ರೀತಿ ಹೇಳಿದ್ದಾರೆ:—

"ಗೊಬ್ಬರ ಹಾಕದೆ ಬೆಳೆವ ಪದ್ಧತಿಯ ಉತ್ತಮ ಉದಾಹರಣೆಯು ಹಿಂದುಸ್ತಾನದ ಸಂಯುಕ್ತ ಪ್ರಾಂತದ ರೇವೆಮಣ್ಣಿನಲ್ಲಿದೆ. ೧೦ ಶತಕಗಳ ಫಸಲಿನ ಲೆಕ್ಕ ತೆಗೆದರೂ ಪ್ರತಿವರ್ಷ ಅಲ್ಲಿ ಒಂದೇ ಸಮನಾಗಿ ಗದ್ದೆಗಳು ಸಮಪರಿಮಾಣದಲ್ಲಿ ಧಾನ್ಯಗಳನ್ನು ಉತ್ಪಾದಿಸುತ್ತಿವೆಯೆಂಬುದು ಗೊತ್ತಾಗುತ್ತದೆ. ಧಾನ್ಯ ಬಳಸಿಕೊಳ್ಳುವ ಗೊಬ್ಬರದ ಸತ್ವದ ಪ್ರಮಾಣಕ್ಕೆ ಸರಿಯಾದ ಪ್ರಮಾಣದ ಗೊಬ್ಬರದ ಸತ್ವವನ್ನು ಪ್ರಕೃತಿಯು ಒದಗಿಸಿಕೊಡುತ್ತಿದೆ."

ಜಿ. ಕ್ಲಾರ್ಕರು (ಹಿಂದಿನ ಒಕ್ಕಲುತನದ ಅಧಿಕಾರಿಗಳು, ಸಂಯುಕ್ತಪ್ರಾಂತ, ಹಿಂದುಸ್ತಾನ) ಹಿಂದೀ ವಿಜ್ಞಾನ ಸಭೆಯ ಒಕ್ಕಲುತನದ ವಿಭಾಗಕ್ಕೆ ಕೊಟ್ಟ ಅಧ್ಯಕ್ಷ ಭಾಷಣದಲ್ಲಿ ಪರಿಸ್ಥಿತಿಯನ್ನು ಈ ಮಾತಿನಲ್ಲಿ ನಮ್ಮ ಮುಂದಿಟ್ಟಿದ್ದಾರೆ:—

"ವಸ್ತುಸ್ಥಿತಿಯನ್ನವಲೋಕಿಸಿದರೆ, ಸಾರಭೂತವಾದ ನೈಟ್ರೋಜನ್ನಿನ ಬಳಕೆಯಲ್ಲಿ ಉತ್ತರ ಹಿಂದುಸ್ತಾನದ ಒಕ್ಕಲಿಗನನ್ನು ಅತ್ಯಂತ ಮಿತವ್ಯಯಿಯೆಂದು ಬರೆದಿಡಬೇಕು. ಇದರಲ್ಲಿ ಅವನು ತನ್ನ ಕೆನೆಡಿಯನ ಸಹೋದ್ಯೋಗಿಗಿಂತ ಹೆಚ್ಚು ಜಾಣನು. ಅವನು ಮಣ್ಣಿಂದ ಅತಿ ಹೆಚ್ಚು ನೈಟ್ರೋಜನ್ನನ್ನು ತೆಗೆದುಕೊಳ್ಳಲಾರನು. ಅವನ ನೈಟ್ರೋಜನ್ನಿನ ಖರ್ಚಿನ ಲೆಕ್ಕವು ಪ್ರತಿವರ್ಷ ಪ್ರಕೃತಿ ಕೊಡುವ ಮಿತಪ್ರಮಾಣದಷ್ಟೇ ಇರುವುದು. ಆದರೂ ಅವನು ಕೆನಡದಷ್ಟೇ ಸರಾಸರಿ ಬೆಳೆಯನ್ನು ಬೆಳೆಯುತ್ತಾನೆ. ನಾನು ಯಾವ ರೈತನೂ ಈತನಂತೆ ಮಿತ ಪ್ರಮಾಣದ ನೈಟ್ರೋಜನ್ನಿನಿಂದ ಅತಿ ಪ್ರಮಾಣದ ಬೆಳೆ ತೆಗೆಯುವುದನ್ನು ಕಂಡಿಲ್ಲ. ಈ ಪ್ರಾಂತದಲ್ಲಿ ಮಣ್ಣು ನಿಸ್ಸಾರವಾಗುವುದೆಂಬ ಶಂಕೆ ನಮಗಿಲ್ಲ. ಇಂದಿನ ಫಲವತ್ತಾ ಪ್ರಮಾಣವನ್ನು ಯಾವಾಗಲೂ ಉಳಿಸಿಕೊಳ್ಳಬಹುದು.

ಅರ್ಧಶತ್ಯರ್ಧವಾಗಿ ಎಲ್ಲ ಜಾತಿಯ ಬೆಳೆಯಲ್ಲೂ ಸುಗ್ಗಿಯಲ್ಲಿ ಕೂಳೆ ನೆಲದಲ್ಲೇ ಇದ್ದು ಬಿದುವುದರಿಂದ ಮಣ್ಣಿಗೆ ಅದು ರೇವೆಯನ್ನು ಪೂರಯಿಸುತ್ತದೆಂಬುದು ಎಲ್ಲರಿಗೂ ತಿಳಿದ ವಿಷಯ. ಮಣ್ಣಿಗೆ ಬೆರಸಿದ ರೇವೆಯ ಉಳಿಕೆಯನ್ನು ತೋರಿಸುವ ನಮ್ಮ ಪ್ರಾಯೋಗಿಕ ಪರೀಕ್ಷಣದಿಂದ ರೇವೆಯು ಮತ್ತು ಇತರ ಮಣ್ಣು ಮೆಕ್ಕಲ ಮೇಲೆ ಅಮ್ಲ ಪ್ರಯೋಗವಾಗಿ ಮಣ್ಣಿನ ಮೇಗಡೆ ಇಂತ ಸಾರಜನಕವು ಸಸಿಗೆ ಬೇಕಾದ ಸತ್ವವನ್ನು ಪೂರಯಿಸುತ್ತದೆ. ಉಷ್ಣ ವಲಯದಲ್ಲಿಯ ದೇಶಗಳ ಸಸ್ಯಗಳ ಸಾರಜನಕದ ಅವಶ್ಯಕತೆಯನ್ನು ಸುಗ್ಗಿಯ ನಂತರ ನೆಲದಲ್ಲಿನಿಂತ ರೇವೆ ಮತ್ತು ಇತರ ಪದಾರ್ಥಗಳ ಅಮ್ಲೀಕರಣದಿಂದ ಹುಟ್ಟಿದ ಶಕ್ತಿಯಿಂದ ಇಳಿಸಲಾದ ಸಾರಜನಕವು ಪೂರಯಿಸಬಲ್ಲುದು. ಅದಲ್ಲದೆ ಸಮಶೀತೋಷ್ಣ ವಲಯಗಳಲ್ಲಿಯ ದೇಶಗಳಿಗಿಂತ ಹೆಚ್ಚಾಗಿ ಉಷ್ಣ ವಲಯದ ದೇಶಗಳಲ್ಲಿ ಮಳೆಯ ನೀರಲ್ಲಿ ಸಿಗುವ ಸಾರಜನಕದ ಪ್ರಮಾಣವು ಹೆಚ್ಚಿನದಿರುತ್ತದೆ. ಶೀತದೇಶಗಳಲ್ಲಿ ಮಣ್ಣಿನ ಉಷ್ಣಪ್ರಮಾಣದ ಅಲ್ಪತೆಯಿಂದ ಉಂಟಾದ ಜಡತೆಯಿಂದಲೂ ಬಿಸಿಲಿನ ಅಭಾವದಿಂದಲೂ ಉಷ್ಣದೇಶಗಳಲ್ಲಿ ಹೇಗೋ ಹಾಗೆ ರೇವೆ ಮತ್ತು ಇತರ ಸಾರಭೂತ ದ್ರವ್ಯಗಳು ಬೇಗ ಅಮ್ಲೀಕೃತವಾಗುವುದಿಲ್ಲ. ಆದುದರಿಂದ ಸಮಶೀತೋಷ್ಣವಲಯದ ಮಣ್ಣಿನ ಮೇಲೆ ಹೆಚ್ಚು ಸಾರಜನಕ ಇಳಿಯಲು ಎಡೆಯಿಲ್ಲ. ಆಗ ಹೇಳಿದ ರಾಥಾಮಸ್ಟಡ್ಡಿನ ಗದ್ದೆಗಳ ಫಲವತ್ತೆ ಕ್ಷೀಣವಾಗುವದಕ್ಕೆ ಮೇಲೆ ಹೇಳಿದ್ದೇ ವಿವರಣ. ಈ ಪರೀಕ್ಷಣಗಳಿಂದ ನಮಗೆ ತಿಳಿದುಬರುವುದೇನೆಂದರೆ, ಉಷ್ಣದೇಶಗಳಲ್ಲಿ ಗೊಬ್ಬರ ಹಾಕದ ಗದ್ದೆಗಳಲ್ಲಿ ಹೆಚ್ಚಿಲ್ಲದ ಸರಾಸರಿ ಬೆಳೆಯನ್ನು ಬೆಳೆಯಿಸಲು ಸಾಧ್ಯವಾಗಲು ವಾತಾವರಣದ ಸಾರಜನಕವು ಕೂಳೆ, ಕಳೆ, ಕಡ್ಡಿ ಮುಂತಾದ ಸಸ್ಯಾವಶೇಷಗಳ ಅಮ್ಲೀಕರಣದಿಂದ ಹುಟ್ಟಿದ ಶಕ್ತಿಯಿಂದ ಮಣ್ಣಿನ ಮೇಲ್ಭಾಗದಲ್ಲಿ ತಡೆಹಿಡಿಯಲ್ಪಡುವುದೇ ಕಾರಣವೆಂದು ತೋರುತ್ತದೆ, ಮತ್ತು ಉಷ್ಣದೇಶಗಳ ಮಣ್ಣಿನಲ್ಲಿ ತಾನಾಗಿ ಸಿಗುವ ಸಾರಜನಕವು ಸುಮಾರು ನೂರಕ್ಕೆ ೧೦ ಅಂಶಗಳಿಗಿಂತ ಹೆಚ್ಚಿರುತ್ತದೆ. ಆದರೆ ಸಮಶೀತೋಷ್ಣ ದೇಶಗಳಲ್ಲಿ ಒಟ್ಟು ಬೇಕಾದ ಸಾರಜನಕದಲ್ಲಿ ನೂರಕ್ಕೆ ಕೇವಲ ೧ ರಿಂದ ೨ ಅಂಶಗಳಷ್ಟು ಮಣ್ಣಿನಲ್ಲಿ ತಾನಾಗಿ ಸಿಗುತ್ತದೆ. ಅದುದರಿಂದ ಅಮೋನಿಯಂ ಮತ್ತು ನೈಟ್ರೇಟ ಕ್ಷಾರಗಳು ಉಷ್ಣದೇಶದ ಗದ್ದೆಗಳಲ್ಲಿ ಸಿಗುವಷ್ಟು ಸಮಶೀತೋಷ್ಣ ಗದ್ದೆಗಳಲ್ಲಿ ಸ್ವಾಭಾವಿಕವಾಗಿ ಲಭ್ಯವಾಗುವದಿಲ್ಲವೆಂದು ಸ್ಪಷ್ಟವಾಗುತ್ತದೆ. ಹಿಂದುಸ್ತಾನದಲ್ಲಿ ಧಾನ್ಯದ ಬೆಳೆಗೆ ಅಗತ್ಯವಾದ ಸಾರಜನಕದ ಪ್ರಮಾಣವೂ ಸುಗ್ಗಿಯನಂತರ ಕೃತಕ ಪ್ರಯೋಗದಿಂದ ಲಭ್ಯವಾಗುವ ಸಾರಜನಕದ ಪ್ರಮಾಣವೂ ಸಮತೂಕದ್ದಾಗಿದೆ."

ಗೊಬ್ಬರ ಹಾಕುವುದರಲ್ಲಿ ಹಳೆಯ ಮತ್ತು ಹೊಸ ಕ್ರಮಗಳು

ಗೊಬ್ಬರವನ್ನು ಎರಡು ವಿಧದಿಂದ ಹಾಕಬಹುದು. ಸಾರಜನಕ ತುಂಬಿದ ದ್ರವ್ಯಗಳಾದ ನೈಟ್ರೇಟ್, ಅಮೋನಿಯಂ ಸಲ್ಫೇಟ್ ಮುಂತಾದುವನ್ನು ಹಾಕುವುದು ಒಂದು ವಿಧ; ಎರಡನೆಯದಾಗಿ ಕಾರ್ಬನ್ ತುಂಬಿರುವ ದ್ರವ್ಯಗಳನ್ನು ಹಾಕಿ ವಾತಾವರಣದ ಸಾರಜನಕವನ್ನು ಹಿಡಿದಿಡಲು ಸಹಾಯ ಮಾಡುವಂತೆ ವ್ಯವಸ್ಥೆಗೊಳಿಸುವುದು. ಅಮೋನಿಯಂ ಮತ್ತು ನೈಟ್ರೇಟಿನ ರೂಪದಲ್ಲಿರುವ ಸಾರಜನಕ ಲಭ್ಯವಾಗುವುದೇ ಫಲವತ್ತೆಗೆ ಕಾರಣ; ಮತ್ತು ಸಾರಜನಕಾಂಶವನ್ನು ಹೆಚ್ಚು ಮಾಡುವುದರಿಂದಲೆ ಫಲವತ್ತೆಯನ್ನು ಹೆಚ್ಚಿಸಬಹುದು.

ಪ್ರಾಣಿಜನ್ಯವಲ್ಲದ ಗೊಬ್ಬರಗಳನ್ನು ತೆಗೆದುಕೊಂಡರೆ—ಅಮೋನಿಯಂ ಸಲ್ಫೇಟಿನಂತಹ ಕೃತಕ ಗೊಬ್ಬರಗಳು ಮಣ್ಣನ್ನು ಪುಷ್ಟಿಗೊಳಿಸುವದಿಲ್ಲ; ಅದರ ಫಲವತ್ತೆಯನ್ನು ಸ್ಥಾಯಿಯಾಗಿ ಹೆಚ್ಚಿಸುವುದಿಲ್ಲ. ಈ ಗೊಬ್ಬರಗಳ ಹೆಚ್ಚಿನ ಅಂಶಗಳು ಸಾರಜನಕ ವಾಯುರೂಪದಿಂದ ಹಾರಿಹೋಗುವುವು; ಅವು ಮಣ್ಣಿಗೆ ಸಾರಜನಕವನ್ನು ಸೇರಿಸಲು ಸಹಾಯ ಮಾಡುವುದಿಲ್ಲ. ಆದುದರಿಂದ ಅಂತಹ ಕೃತಕ ಗೊಬ್ಬರಗಳನ್ನು ಹಾಕಿದ ಮಣ್ಣು ತಾತ್ಕಾಲಿಕವಾಗಿ ಹೆಚ್ಚಿಗೆ ಫಸಲನ್ನು ಕೊಡಬಹುದಾದರೂ ಕ್ರಮೇಣ ಸತ್ವಹೀನವಾಗಿ ಅದರ ಸಾರಜನಕಾಂಶವು ನಷ್ಟವಾಗಿ ಹೋಗಬಹುದು. ಹಾಗಲ್ಲದೆ ಪ್ರಾಣಿಜನ್ಯವಾದ ಸೆಗಣಿ, ಕೊಟ್ಟಿಗೆಯ ಕಸ ಕಡ್ಡಿಗಳು ಮುಂತಾದ ಗೊಬ್ಬರಗಳನ್ನು ಗದ್ದೆಗೆ ಹಾಕಿದರೆ ಅವರ ಸಾರಜನಕಾಂಶವನ್ನು ಹೆಚ್ಚಿಸುವುದಲ್ಲದೆ ವಾತಾವರಣದಲ್ಲಿಯ ಸಾರಜನಕವನ್ನು ತಡೆಹಿಡಿದು ಮಣ್ಣನ್ನು ಸತ್ವಪೂರ್ಣವಾಗಿ ಮಾಡುತ್ತವೆ. ಸೆಗಣಿಯ ಮಹತ್ವವು ವಾತಾವರಣದ ಸಾರಜನಕವನ್ನು ಹಿಡಿಯುವುದರಲ್ಲೇ ಇದೆ. ರಾಥಾಮಸ್ಟಡ್ಡಿನಲ್ಲಿ ಕೊಟ್ಟಿಗೆಯ ಗೊಬ್ಬರವಷ್ಟು ಇನ್ನಾವುದೂ ಫಸಲಿನ ಪ್ರಮಾಣವನ್ನು ಒಂದೇ ಮಟ್ಟದಲ್ಲಿಡಲು ಸಹಾಯಕವಾಗಿಲ್ಲ. ೬೦ ವರ್ಷಗಳ ವರೆಗೆ ಕೊಟ್ಟಿಗೆಯ ಗೊಬ್ಬರ ಉಪಯೋಗಿಸಿದ್ದರಿಂದ ಮಣ್ಣಿನ ಸಾರಜನಕಾಂಶವನ್ನು ೨-೩ ಪಟ್ಟು ಹೆಚ್ಚಿಸುತ್ತದೆಂದು ಕಂಡು ಬಂದಿದೆ. ಹಾಗಲ್ಲದೆ ಅಮೋನಿಯಂ ಸಲ್ಫೇಟ್ ಮತ್ತು ಸೋಡಾನೈಟ್ರೇಟ್ ಹಾಕುವುದರಿಂದ ಕ್ರಮೇಣ ಮಣ್ಣಿನ ಸಾರಜನಕವು ನಷ್ಟವಾಗಿ ಹೋಗುವ ಸಂಭವವುಂಟು. ಇದೇ ಮೇರೆಗೆ ಅಲಹಾಬಾದಿನಲ್ಲಿ ಸೆಗಣಿ ಸೊಪ್ಪುಗಳ ಗೊಬ್ಬರದಿಂದ ನೈಟ್ರೇಟ್ ಮೊದಲಾದ ಕ್ಷಾರಗಳಿಗಿಂತ ಹೆಚ್ಚಿನ ಪ್ರಯೋಜನ ಕಂಡುಬಂದಿದೆ; ಮತ್ತು ಪ್ರಾಣಿಜನ್ಯ ಗೊಬ್ಬರಗಳನ್ನು ಬಳಸಿದಾಗ ಸೂರ್ಯನ ಬಿಸಿಲನ್ನು ಮಣ್ಣು ಚೆನ್ನಾಗಿ ಬಳಸಿಕೊಳ್ಳಲು ಶಕ್ತವಾಗುತ್ತದೆಂದೂ ತಿಳಿದಿದೆ; ಅಲಹಾಬಾದಿನಲ್ಲಿಯ ಪ್ರಯೋಗಗಳು ಸಾರಜನಕ ಸಂಗ್ರಹವು ಜೀವಾಣು ಪ್ರಯುಕ್ತ ಲಭ್ಯವಲ್ಲದಿರಬಹುದು, ಆದರೆ ಜೀವಾಣುಗಳ ಸಂಪೂರ್ಣ ಅಭಾವದಲ್ಲಿ ಅದು ಅಷ್ಟು ತ್ವರಿತವಾಗಿ ನಡೆಯುವುದಿಲ್ಲವೆಂಬುದನ್ನು ಸಿದ್ಧ ಮಾಡಿಕೊಟ್ಟಿವೆ.

ಪ್ರಾಣಿಜನ್ಯ ಗೊಬ್ಬರದ ಪರವಾಗಿ ಡಾ. ಜಿ. ರತ್ನನ್ನರು ಕೆಳಗಿನಂತೆ ಬರೆಯುತ್ತಾರೆ:—

"ಇಂದಿನ ಎಲ್ಲ ವೈಜ್ಞಾನಿಕ ಮತ್ತು ಪುರುಷ ಪ್ರಯತ್ನಗಳ ಗುರಿಯಾದ ಮಣ್ಣಿನ ಫಲವತ್ತೆಯ ಉತ್ಕರ್ಷವು ಖನಿಜ ಗೊಬ್ಬರಗಳಿಂದ ಸಾಧಿಸದು. ಇವು ಸಸ್ಯಜವಾದ ಪಿಷ್ಟ ವಿಶೇಷವನ್ನು ನಾಶ ಮಾಡುವುದಲ್ಲದೆ ವಸ್ತುತಃ ಮಣ್ಣಿಗೇ ಹಾನಿಕರವೆನಿಸುವುವು. ಮಣ್ಣಿನ ಗುಣಗಳನ್ನು ಹೆಚ್ಚಿಸಿ ಬೆಳೆ ಹೆಚ್ಚಿಸುವುದು ಮತ್ತು ಸಸ್ಯಜ ಗೊಬ್ಬರ ಹಾಕಿ ಅವುಗಳ ಹೆಚ್ಚಿಸುವುದು— ಈ ಎರಡೂ ಬೇರೆ ಬೇರೆಯಾದರೂ ಒಂದನ್ನು ಇನ್ನೊಂದೆಂದು ತಪ್ಪುತಿಳಿದುಕೊಳ್ಳುವುದುಂಟು. ಎರಡನೆಯ ಕಾರ್ಯವನ್ನು ಖನಿಜ ಗೊಬ್ಬರಗಳು ಮಾಡಬಲ್ಲವು; ಆದರೆ ಮೊದಲನೆಯದನ್ನು ಮಾಡಲಾರವು. ಹಾಗಲ್ಲದೆ ಒಳ್ಳೆಯ ಮಣ್ಣನ್ನು ತಯಾರಿಸುವುದು, ಬಹು ದೀರ್ಘಕಾಲದ ಕೆಲಸ.

ಸಸ್ಯಜ ಪಿಷ್ಟವಿಶೇಷವುಳ್ಳ ಮಣ್ಣಿನ ಫಲವತ್ತೆಯನ್ನು ಉಳಿಸಿಕೊಳ್ಳುವುದು ಸುಲಭ; ಆದರೆ ಮುಖ್ಯವಾಗಿ ಖನಿಜ ಪುಷ್ಟವಾದ ಮಣ್ಣಿನಲ್ಲಿ ಆ ಪಿಷ್ಟವಿಶೇಷವನ್ನು ಉತ್ಪಾದಿಸುವುದು ಕಷ್ಟದ ಕೆಲಸ. ನೇರವಾಗಿಯಾಗಲಿ, ಕಾರಣಾಂತರವಾಗಿಯಾಗಲಿ ಎಲ್ಲ ಪ್ರಾಣಿ ಮತ್ತು ಸಸ್ಯಗಳ ಜೀವನಕ್ಕೆ ಮಣ್ಣಿನ ಉಕ್ತಪಿಷ್ಟ ವಿಶೇಷವೇ ಆಧಾರಭೂತವಾದುದು. ಈಗ ದೊರಕಬಲ್ಲ ಅನೇಕ ಪ್ರಾಣಿಜನ್ಯ ಪದಾರ್ಥಗಳನ್ನು ಬಳಸಿ ಈ ಪಿಷ್ಟಾಂಶವನ್ನು ಹೆಚ್ಚಿಸಬಹುದು. ಆದುದರಿಂದ ಸಾರಜನಕವುಳ್ಳ ಪ್ರಾಣಿಜ ಮೂಲಗಳತ್ತ ನಾವು ವಿಶೇಷ ಲಕ್ಷ್ಯ ಕೊಡಬೇಕಾಗಿದೆ.

ಬಡ ಉಷ್ಣದೇಶವೆನಿಸಿದ ಹಿಂದುಸ್ತಾನಕ್ಕೆ ಕಾರ್ಬನ್ನಿನ ಅಂಶವುಳ್ಳ ಪದಾರ್ಥಗಳೂ ಸೆಗಣಿ ಸೊಪ್ಪುಗಳ ಗೊಬ್ಬರವೂ ಅತ್ಯುತ್ತಮವಾದುವು. ಈ ವಸ್ತುಗಳು ಬೇಕಾದಷ್ಟು ಸಿಗದಿದ್ದಾಗ ಇವುಗಳ ಜೊತೆಗೆ ಅಮೋನಿಯಂ ಸಲ್ಫೇಟ್, ಅಮೋನಿಯಂ ನೈಟ್ರೇಟ್ ಅಥವಾ ಇಲ್ಲೇ ತಯಾರಾಗುವ ಯೂರಿಯಾವನ್ನು ಸೇರಿಸಿ ಬಳಸಬಹುದು. ಕೃತಕ ಗೊಬ್ಬರಗಳನ್ನು ಪರದೇಶಗಳಿಂದ ತರಿಸುವದು ಬಹಳ ತುಟ್ಟಿಯಾದೀತಲ್ಲದೆ ನಮ್ಮ ಬಡ ಒಕ್ಕಲು ಹಾಗೆ ಆಯಾತ ಮಾಡಿಕೊಂಡ ಗೊಬ್ಬರವನ್ನು ಕೊಳ್ಳಲೂ ಶಕ್ತನಾಗಲಾರನು.

—ಅಪೂರ್ಣ

ಹಿಂದೀ—ಹಿಂದುಸ್ತಾನಿ

ಶ್ರೀಮತಿ ಪೆರಿನಬೆಹನ ಕ್ಯಾಪ್ಟನ್ ಇವಳು ಬರೆಯುತ್ತಾಳೆ—

"ಅನೇಕ ವರುಷಗಳಿಂದ ಯಾವ ರಾಷ್ಟ್ರೀಯ ಭಾಷೆಯ ಸಲುವಾಗಿ ನಾವು ಹೋರಾಡುತಿದ್ದೆವೊ ಆ ಭಾಷೆಯನ್ನು ಪದಚ್ಯುತ ಮಾಡಬೇಕೆಂದು ನಮ್ಮ ಜನರೇ ಬಯಸುತಿರುವರೆಂಬುದನ್ನು ದಿಲ್ಲಿ ಆಕಾಶವಾಣಿಯಲ್ಲಿ ಕೇಳಿ ನನಗೆ ನಾಚಿಕೆ, ಬೇಸರು ಮತ್ತು ವಿಷಾದವಾಯಿತು. ಕಾಂಗ್ರೆಸ್ಸಿಗರೆಲ್ಲ ಯಾವುದನ್ನು ಬಯಸಿ ಈ ವರೆಗೆ ಕಾರ್ಯ ಮಾಡುತ್ತ ಬಂದರೊ ಅದನ್ನೆ ಮುರಿದೊಗೆಯುವಷ್ಟು ಪ್ರಮುಖ ಕಾಂಗ್ರೆಸ್ಸಿಗರು ಭಾವನಾವಶತೆಯಿಂದ ಅಂಧರಾದುದು ಮತ್ತಷ್ಟು ವಿಷಾದಕರ. ಪ್ರಮುಖ ಧುರೀಣರೆನ್ನಿಸಿಕೊಳ್ಳುವವರಲ್ಲಿ ಸ್ವಲ್ಪಾದರೂ ಮುತ್ಸದ್ದಿತನವಿದ್ದಿರಬಹುದೆಂದು ಬಗೆಯಲಾಗಿತ್ತು. ೧) ನಮ್ಮ ಹಿಂದುಸ್ತಾನೀ ಸಮಿತಿಯು ಏನು ಮಾಡತಕ್ಕದ್ದು ೨) ನಮ್ಮ ನಿಷ್ಠ ಸ್ವಾರ್ಥತ್ಯಾಗೀ ಹಿಂದುಸ್ತಾನೀ ಪ್ರಚಾರಕರು ಯಾವ ಕಾರ್ಯ ಮಾಡತಕ್ಕದ್ದು ೩) ಕೊನೆಯದಾಗಿ ಕಾಂಗ್ರೆಸ ಗೊತ್ತುವಳಿಗಳನ್ವಯ ಯಾವದಕ್ಕೆ ಹಿಂದುಸ್ತಾನೀ ಎನ್ನಲಾಗುತಿನೆಯೊ ಅದನ್ನು ರಾಷ್ಟ್ರ ಭಾಷೆಯೆಂದು ಒಪ್ಪಿಕೊಂಡು ಅದಕ್ಕಾಗಿ ಪ್ರೇಮ ಭಾವನೆಯನ್ನಿಟ್ಟುಕೊಂಡು ನಮ್ಮ ದೇಶದಲ್ಲಿಯ ಹಿಂದು ಮುಸಲ್ಮಾನ, ಪಾರಸಿ, ಕ್ರಿಶ್ಚನ್ ಮತ್ತು ಯಹೂದಿಗಳು ಏನು ಮಾಡಬೇಕೆಂಬ ಬಗ್ಗೆ ವಿವರವಾಗಿ ನನಗೆ ಬರೆಯಿರಿ.

"ನೀವು ಬೇರೆ ಕಾರ್ಯದಲ್ಲಿ ತೊಡಗಿರುವಿರೆಂಬುದು ನನಗೆ ಗೊತ್ತು. ಆದರೆ ಯಾವ ಮಾತೃಭೂಮಿಯ ಸಲುವಾಗಿ ನಮ್ಮ ಜೀವಮಾನದಲ್ಲೆಲ್ಲ ಕೆಲಸ ಮಾಡಿರುವೆವೋ ಅಂಥ ನಮ್ಮ ಪ್ರೀತಿಯ ಮಾತೃಭೂಮಿಯನ್ನು ಅನುಕೂಲ ಕಾಲದಲ್ಲಿ ಒಂದುಗೂಡಿಸಲು ಬಲಿಷ್ಠ ಸಾಧನವಾಗಿರುವದೆಂದು ನನಗೆ ಅನಿಸುತಿರುವ ಈ ಸಮಸ್ಯೆಯ ಬಗ್ಗೆಯೂ ಕೆಲ ವೇಳೆಯನ್ನು ಕೊಡಿರೆಂದು ನಾನು ಕೇಳಿಕೊಳ್ಳುತ್ತೇನೆ. ಹಿಂದುಸ್ತಾನೀ ಮತ್ತು ಎರಡೂ ಭಾಷಾಪ್ರಭೇದಗಳ ಸೌಂದರ್ಯ ಹಾಗು ಅದರ ರಾಷ್ಟ್ರೀಯ ಮಹತ್ವದ ಬಗ್ಗೆ ನಾವಿಷ್ಟೊಂದು ಪ್ರೇಮವನ್ನು ತಾಳಿರುವಾಗ ಸಂಕುಚಿತ ಬುದ್ಧಿಯ ಕೆಲಜನರು ಸಂಕುಚಿತ ಧೋರಣವನ್ನು ವಹಿಸಲು ನಮ್ಮನ್ನೇಕೆ ಒತ್ತಾಯಪಡಿಸಬೇಕೆಂದು ನಮ್ಮ ಒಂದು ವರ್ಗದಲ್ಲಿಯ ಸುಮಾರು ೨೫ ಜನ ತರುಣರು ನನ್ನ ಬಳಿಗೆ ಬಂದು ಕೇಳಿದರು. ದ್ವೇಷಬುದ್ಧಿಯಿಂದ ದೂರದೃಷ್ಟಿಯನ್ನು ಬಿಟ್ಟುಗೊಟ್ಟು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಮತ್ತು ಅಸಾಮದಿಂದ ಸಿಂಧದ ವರೆಗೆ ಇಡೀ ರಾಷ್ಟ್ರವನ್ನು ನಿಜ ಸ್ನೇಹಭಾವನೆ ಮತ್ತು ಪ್ರೇಮದಿಂದ ಒಂದುಗೂಡಿಸುವ ಎಲ್ಲ ಆಶೆಗಳನ್ನು ಹರಿದೊಗೆಯುದಂತೆ ಮಿತ್ರರಮನವೊಲಿಸಲು ಪ್ರಯತ್ನಿಸಿರಿ. ಆ ಧೋರಣದಿಂದ ಅವರನ್ನು ಪರಾವೃತ್ತಗೊಳಿಸಿರಿ"

ಕಾಂಗ್ರೆಸ್ಸಿಗರೆಂದು ಕರೆಯಿಸಿಕೊಳ್ಳಲಿ ಕೊಳ್ಳದಿರಲಿ, ರಾಷ್ಟ್ರೀಯ ವೃತ್ತಿಯ ಇವಳಂಥ ಅನೇಕ ಜನರು ಈ ಬಗೆಯ ವಿಷಾದ ಭಾವನೆಯನ್ನು ತಾಳಿರುವರೆಂಬುದು ಇದರಿಂದ ಗೊತ್ತಾಗುವದು. ಈ ವಿಷಯವನ್ನು ಎರಡು ತಿಂಗಳ ವರೆಗೆ ಅಥವಾ ಘಟನಾಸಮಿತಿ ಮತ್ತೊಮ್ಮೆ ಕೂಡುವವರೆಗೆ ಮುಂದಕ್ಕೆ ಹಾಕಿದ್ದು ಮುತ್ಸದ್ದಿತನವೆ; ಏಕೆಂದರೆ ವಿಕಾರವಶತೆಯಿಲ್ಲ ದಾಯವಾಗಿ ಪರಿಶುದ್ಧ ಭಾವನೆಯಿಂದ ವಿಚಾರ ಮಾಡಲು ಇದರಿಂದ ಸಮಯ ಸಿಕ್ಕಂತಾಯಿತು. ನಮ್ಮ ಧರ್ಮಗಳು ಬೇರೆಯಾದ್ದರಿಂದಲೆ ಹಿಂದುಸ್ತಾನದಲ್ಲಿ ಹಿಂದು ಮುಸಲ್ಮಾನರೆಂಬ ಎರಡು ಜಾತಿಯವರು ಎರಡು ರಾಷ್ಟ್ರದವರಾಗಿದ್ದಾರೆಂದು ಮುಸ್ಲಿಂ ಲೀಗಿನವರು ಹೇಳುತಿರುವುದನ್ನು ಹಿಂದುಗಳು ತಮ್ಮ ಪ್ರತ್ಯಕ್ಷ ಇಲ್ಲವೆ ಅಪ್ರತ್ಯಕ್ಷ ಆಚರಣೆಗಳಿಂದ ಸುಳ್ಳು ಮಾಡಿ ತೋರಿಸಲಿ. ಎಲ್ಲ ಧರ್ಮ ಜಾತಿಗಳ ಜನರಿಂದ ಕೂಡಿದ ಹಿಂದುಸ್ತಾನ ಒಂದೇ ರಾಷ್ಟ್ರವಾಗಿದೆಂದು ಕಾಂಗ್ರೆಸ್ಸು ಮೊದಲಿನಿಂದಲೂ ಇಡೀ ಜಗತ್ತಿಗೆಲ್ಲ ಸಾರುತ್ತ ಬಂದಿದೆ; ಎಂಥ ಕಠಿನ ಪರಿಸ್ಥಿತಿಯಲ್ಲಿಯೂ ಕಾಂಗ್ರೆಸ್ಸು ತನ್ನ ಈ ಅಭಿಪ್ರಾಯ, ಕೆಲ ಲೋಪದೋಷಗಳನ್ನು ಬಿಟ್ಟುಗೊಟ್ಟರೂ, ಸತ್ಯಪೂರ್ಣವಾಗಿದೆಂಬದನ್ನು ಸಿದ್ಧ ಮಾಡಿ ತೋರಿಸುತ್ತ ಬಂದಿದೆ. ಯಾರ ಮೊದ್ಮುಗಳು ಇಷ್ಟೊಂದು ಭಾವನಾಪೂರ್ಣವಾಗಿ ಈ ಪತ್ರವನ್ನು ಬರೆದಿರುವಳೊ ಅವಳ ಮುತ್ತಜ್ಜ ದಾದಾಭಾಯಿ ನವರೋಜಿಯವರು ನಿಜವಾಗಿ ಹಿಂದುಸ್ತಾನದ ಸುವಿಖ್ಯಾತ ಮುತ್ಸದ್ದರಾಗಿದ್ದರು, ಈಗಲೂ ಮುತ್ಸದ್ದರಾಗಿಯೆ ಉಳಿದಿರುವರು.

ದಾದಾಭಾಯಿ ನವರೋಜಿಯವರ ತರುವಾಯ ಫಿರೋಜಶಹಾ ಮೇಥಾರವರು ಮುಂಬಯಿ ಪ್ರಾಂತದ ಅನಭಿಷಿಕ್ತ ಅರಸರಾಗಿ ತಮ್ಮ ಸ್ವಾರ್ಥ ವಿರಹಿತ ಸೇವೆಯ ಮೂಲಕ ಕಾಂಗ್ರೆಸ್ಸಿನ ಸೂತ್ರಚಾಲಕರಾಗಿದ್ದರು.

ಒಂದುಕಾಲಕ್ಕೆ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಬದರುದ್ದೀನ ತಯಾಬ್ಜಿಯವರು ಯಾರು? ಅವರು ಅತ್ಯಂತ ನಿಷ್ಠುರ ಮುಸಲ್ಮಾನರಾಗಿರಲಿಲ್ಲವೆ? ಅವರೇನು ಕಡಿಮೆ ತರಗತಿಯ ಭಾರತೀಯರಾಗಿದ್ದರೋ? ಹಿಂದುಸ್ತಾನದಲ್ಲಿ ಅನೇಕ ಧರ್ಮಗಳಿರುವುವು. ಆದರೆ ರಾಷ್ಟ್ರೀಯತ್ವ ಒಂದೇ ಆಗಿದೆ. ಹಿಂದುಸ್ತಾನದಲ್ಲಿ ಎರಡು ವಿಭಾಗಗಳಿದ್ದರೂ ನಾನು ಇದನ್ನು ಧೈರ್ಯದಿಂದ ಹೇಳುವೆ. ಬಹುಕಾಲದ ವರೆಗೆ ಈ ಎರಡು

—ಇಂದೀ ಪುಟಕ್ಕೆ

ನಿಜವಾದ ಇಸ್ಲಾಂ

ಕ್ರೈಸ್ತ [illegible] ಒಬ್ಬ ಮುಸ್ಲಿಂ ಪತ್ರಕಾರನು ಬರೆದಿದ್ದನ್ನು ಈ ಕೆಳಗೆ ಕೊಡಲಾಗಿದೆ.

"ಇಸ್ಲಾಂ ಎಂಬುದು ಒಂದು ವಿಶ್ವಧರ್ಮ. ಸತ್ಯವನ್ನು ತೋರಿಸಿ ತಿಳಿಯಬೇಕೆಂಬುದೇ ಅದರ ಮುಖ್ಯೋದ್ದೇಶ. ಕಲೀಫ ಅಲಿಯಂತಹ ಮಹಾತ್ಮರು ಕೂಡ ಸತ್ಯವನ್ನು ತಿಳಿಯಲು ಎಂತಹ ಮಹತ್ಪ್ರಯತ್ನ ಮಾಡಬೇಕಾಯಿತೆಂಬುದನ್ನು [illegible] ಗೀತದಿಂದ ತಿಳಿದುಕೊಳ್ಳಬಹುದು:

[illegible] ವಾದಿಯು ಅಲಿಗೆ ಹೇಳಿದರು "ಓ ಅಲಿ, ನೀನು ದೇವರ ಸಿಂಹ, ಮಹಾಬಲಶಾಲಿಯಾದ ವೀರ—ಆದರೆ ನಿನ್ನ ಸಿಂಹಪರಾಕ್ರಮವನ್ನು ನೀನು ನೆಚ್ಚಬೇಡ. ಸತ್ಯದ ತಾಳೆಯ ಮರದ ಕೆಳಗೆ ವಿಶ್ರಮಿಸು. ವಿವೇಕಿಯಾದ ಮಾರ್ಗದರ್ಶಕನ ನೆರಳೊಳಗೆ ಬಾ. ಪರಂಪರಾ [illegible] ಮಾರ್ಗದಲ್ಲಿ ನೀನು ಅದನ್ನು ಪಡೆಯಲಾರೆ. ಅವನ [illegible] ಅವನ ಅಂತಃಕರಣವು [illegible] ಎತ್ತರ ಹಾರುವಂಥದು. ನಾನು ಆ ದೇವರ [illegible] ನನ್ನ ವಾಕ್ಯಗಳು ಎಂದೂ [illegible] ಕಡಿಮೆ ಮಾಡಲು ಯುಕ್ತವೆನಿಸವು. ಆ [illegible] ಹೇಳುವುದನ್ನು [illegible] ಅಲ್ಲಾ [illegible] ವನ್ನು ಬಲ್ಲ!"

ಆ ಹೆಸರುಗಳನ್ನು ಗಣಿಸಬೇಡ, ಗುಣಗಳತ್ತ ಲಕ್ಷ್ಯಕೊಡು. ಹಾಗೆ ಮಾಡಿದರೆ ಗುಣಗಳು ನಿನ್ನನ್ನು ಸಾರವಿದ್ದೆಡೆಗೊಯ್ಯುವವು. ಆ ದೇವರ ಹೆಸರಿಂದ ಜಾತಿಭೇದ ಹುಟ್ಟುತ್ತದೆ. ಆತನ [illegible] ಸಾಕ್ಷಾತ್ಕಾರವಾದ ಕೂಡಲೆ ಅವನ ಶಾಂತಿಯ ಭಾಗಿಗಳಾಗುತ್ತಾರೆ.

ಇಂದು ಮುಸ್ಲಿಂ— [illegible] ಹೆಸರಿನಡಿಯಲ್ಲಿ ಸಿಕ್ಕಿಕೊಂಡಿದ್ದು ಇಸ್ಲಾಮಿನ ಉಪದೇಶವನ್ನು ಲಕ್ಷ್ಯಕ್ಕೆ ತಂದುಕೊಂಡಿಲ್ಲ. ಲಕ್ಷ್ಯಕ್ಕೆ ತಂದುಕೊಂಡಿದ್ದರೆ ಅವರು ಸತ್ಯವನ್ನು ತಿಳಿಯಬಲ್ಲವರಾಗಿದ್ದು, ಅವರು ತಮ್ಮ ತಮ್ಮ ಸ್ವಭಾವಾನುಸಾರವಾಗಿ ಕಾರ್ಯಪ್ರವೃತ್ತರಾಗುತ್ತಾರೆ. ಆದರೂ [illegible] ಕಾರ್ಯಗಳನ್ನು ಇಸ್ಲಾಮಿಗೆ ಅಂಟಿಸುತ್ತಾರೆ. ಅವರು ಹಾಗೆ ಮಾಡುವಲ್ಲಿ ಮರೆತು ಬಿಟ್ಟಿದ್ದೇನೆಂದರೆ—

ದೇವನು ಪ್ರಕಾಶಿಸುತ್ತಾನೆ ಮತ್ತು ನಾನಾ [illegible] ಪ್ರತಿಯೊಬ್ಬನು ತನ್ನ ಸ್ವಭಾವಾನುಗುಣವಾಗಿ [illegible] ಪ್ರತಿಯೊಬ್ಬನಿಗೂ ದೈವಾಜ್ಞೆಯು ಅವನವನ ಕರ್ತವ್ಯವನ್ನು ನಿರ್ದೇಶಿಸಿದೆ.

ಯುಗಯುಗಗಳ ಹೆಸರಿನಲ್ಲಿ ನಾನು ಪ್ರಮಾಣವಾಗಿ ಹೇಳುತ್ತೇನೆ: ಮನುಷ್ಯನು ಇನ್ನೂ ಸಂಪೂರ್ಣ ಅಜ್ಞಾನದಲ್ಲಿದ್ದಾನೆ. ಇದಕ್ಕೆ ಅಪವಾದವೆಂದರೆ ಒಳ್ಳೆಯದನ್ನು ಶ್ರದ್ಧೆಯಿಂದ ಮಾಡುವವರು ಮತ್ತು ಸತ್ಯಾಹಿಂಸೆಗಳನ್ನು ಉಪದೇಶಿಸತಕ್ಕವರು ಮಾತ್ರ. ಇಂದು ಮುಸ್ಲಿಮರ ಕೃತ್ಯಗಳೂ ಇಸ್ಲಾಮ್ ಧರ್ಮವೂ ಭಿನ್ನವಿರುವುದರಿಂದ ಮುಸ್ಲಿಮರ ಕೃತ್ಯಗಳನ್ನು ನಿರ್ಣಯಿಸುವಾಗ ನೀವು ಇಸ್ಲಾಮಿನ ಹೆಸರೆತ್ತಬಾರದೆಂದು ಹೃತ್ಪೂರ್ವಕ ಪ್ರಾರ್ಥಿಸುತ್ತೇನೆ."

ಇಂತಹ ಇಸ್ಲಾಂಧರ್ಮವೇ ಪಾಕಿಸ್ತಾನದಲ್ಲಿ ಆಚರಣೆಗೆ ಬರಬಾರದೆ! ಮತ್ತು ಮೇಲಿನ ಪತ್ರಕಾರನ ಕಹಿಮಾತು ಇಲ್ಲದಂತಾಗದೆ!

—ಮೋ. ಕ. ಗಾಂಧಿ

ಹಾಲಿನ ಮಿಠಾಯಿಗಳು

ಒಬ್ಬ ಪತ್ರಕಾರ ಬರೆಯುತ್ತಾನೆ:—

"[illegible]ಗೆ ಹಿಂದುಸ್ತಾನದಲ್ಲಿ ಹಾಲಿನ ಸ್ಥಿತಿ ಹೇಗಿದೆಯೆಂದು ಗೊತ್ತಿದೆ. ಇಲ್ಲಿ ಈ ಜಮಶೇದಪುರದಲ್ಲಿ ಜನಸಂಖ್ಯೆ ಸುಮಾರು ೨ ಲಕ್ಷವಿದೆ. ಪ್ರತಿಯೊಬ್ಬನಿಗೆ ೨ [illegible] ಹಾಲು ಕೊಟ್ಟರೂ ಪ್ರತಿ ದಿನ ಒಂದು ಸಾವಿರ ಮಣ ಹಾಲು ಬೇಕಾಗುತ್ತದೆ. ಹೀಗಿರುವಲ್ಲಿ ಟಿಸ್ಕೊ ಹಾಲಿನ ಕೇಂದ್ರವು ದಿನಕ್ಕೆ ೩೦ ಮಣ ಹಾಲನ್ನು ಮಾತ್ರ ಪೂರೈಯಿಸುತ್ತದೆ. ನೀರು ಬೆರೆಸಿದ ಎಷ್ಟು ಹಾಲನ್ನು ಹಾಲು ಮಾರುವವರು ಮನೆಯಿಂದ ಮನೆಗೆ ಒಯ್ದು ಕೊಡುತ್ತಾರೋ ನಮಗೆ ಗೊತ್ತಿಲ್ಲ. ಆದರೆ ಮಕ್ಕಳು, ಗರ್ಭಿಣಿಯರು ಮತ್ತು ರೋಗಿಗಳು ಇವರಿಗೆ ಬೇಕಾದಷ್ಟು ಹಾಲು ಸಿಗುವದಿಲ್ಲವಾಗಿರುವಾಗ ಸುಮಾರು ೫೦ ಮಣಗಳಷ್ಟು ಹಾಲನ್ನು ಹಲವಾರು ಮಿಠಾಯಿಗಳ ತಯಾರಿಕೆಗೆ ಬಳಸುತ್ತಾರೆ. ಮಕ್ಕಳಿಗೆ ಹಾಲು ಕೊಡುವುದನ್ನು ತಪ್ಪಿಸಿ ರಸಗುಲ್ಲಾ, ಪೇಡೆ ಮುಂತಾದ ಸಿಹಿ [illegible] ತಿನಸುಗಳಿಗೆ ಹಾಲನ್ನು ಉಪಯೋಗಿಸುವುದು ನ್ಯಾಯವೇ?"

ಗಾಂಧೀಜಿ [illegible] ಈ ಪ್ರಶ್ನೆಯ ಮೇಲೆ ಉತ್ತರಕೊಂಡಿದ್ದಾರೆ. ಇಂತಹ ಕಾಲದಲ್ಲಿ ಒಂದೇ ಒಂದು ತುತ್ತು ಆಹಾರವನ್ನು ಹಾಳು ಮಾಡುವುದೂ ಮಹಾಪರಾಧವೇ. ಜನರು ಹೊಟ್ಟೆ ತುಂಬಾ ತಿನ್ನುವುದು [illegible] ಅದು ಅನಾರೋಗ್ಯಕ್ಕೆ ಗುರಿಮಾಡುವುದಲ್ಲದೆ ಮತ್ತೊಬ್ಬರಿಗೆ ಅಗತ್ಯವಾದ ಆಹಾರವನ್ನು ಸಿಗದಂತೆಯೂ ಮಾಡುತ್ತದೆ. ಈ ಅಭ್ಯಾಸ ಕೂಡಲೇ ನಿಲ್ಲುವಂತೆ ಮಾಡುವುದು ಸಾರ್ವಜನಿಕರ ಕರ್ತವ್ಯ. ರೋಗಿಗಳಿಗೂ ಮಕ್ಕಳಿಗೂ ಬೇಕಾದಷ್ಟು ಹಾಲು ಸಿಗುವ ವರೆಗೆ ಎಲ್ಲ ತರಹದ ಹಾಲಿನ ಮಿಠಾಯಿಗಳನ್ನೂ ಬಹಿಷ್ಕರಿಸಬೇಕು. ಎಲ್ಲ ಕರ್ತವ್ಯಜ್ಞರಾದ ಜನರೂ ತಾವು ಅಂತಹ ಮಿಠಾಯಿಯನ್ನು ಮುಟ್ಟುವುದಿಲ್ಲವೆಂದು ಪ್ರತಿಜ್ಞೆ ಮಾಡಬೇಕಲ್ಲದೆ ಇತರರನ್ನೂ ಹಾಗೆ ಮಾಡುವಂತೆ ಪ್ರೋತ್ಸಾಹಿಸಬೇಕು. ಸಾರ್ವಜನಿಕ ಮತವೇ ಎಲ್ಲದಕ್ಕಿಂತ ಹೆಚ್ಚಿನ ಪ್ರತೀಕಾರೋಪಾಯ. ಜನರಿಗೆ ಪರಿಸ್ಥಿತಿಯು ಎಷ್ಟು ಗಾಬರಿಗೊಳಿಸುವಂಥದಿದೆಯೆಂದು ತಿಳಿದರೆ, ಮಕ್ಕಳ ಮತ್ತು ರೋಗಿಗಳ ತುತ್ತಿಗೆ ಅಡ್ಡ ಬರುವ ಈ ಅಭ್ಯಾಸದ ದೌರಾತ್ಮ್ಯವನ್ನು ಮನಗಂಡರೆ ಅವರು ಅದನ್ನು ಸುಧಾರಿಸುವರು. ಸಾರ್ವಜನಿಕರ ಪ್ರಬುದ್ಧ ಮತವೊಂದಲ್ಲದೆ ಮತ್ತಾವ ಕೃತಕ ನಿಯಂತ್ರಣಗಳೂ ಪ್ರಯೋಜನಕಾರಿಯಾಗಲಾರವು.

—ಸುಶೀಲಾ ನಯ್ಯರ

ದಲಿತ ವರ್ಗಗಳು

ಒಬ್ಬ ಪತ್ರಕಾರನು ಬರೆಯುತ್ತಾನೆ :—

"ಒಂದು ಪ್ರದೇಶದ ದಲಿತ ವರ್ಗಗಳನ್ನು ಪಾಕಿಸ್ತಾನದಲ್ಲಿ ಸೇರಿಸಿದರೆ ಅವರಿಗೆ ಇಸ್ಲಾಮನ್ನು ಸೇರುವದಲ್ಲದೆ ಬೇರೆಯ ದಾರಿಯಿಲ್ಲ"

ಪತ್ರಕಾರನು ವಿದ್ಯಾವಂತನೂ ಕಾಯಿದೆ ಮಂಡಲದ ಸದಸ್ಯನೂ ಆಗಿದ್ದಾನೆ. ಒಟ್ಟೊಟ್ಟಾಗಿ ಇರದ ದಲಿತ ವರ್ಗದವರಿಗೆ ಪಾಕಿಸ್ತಾನದಲ್ಲಿ ಯಾವ ಸ್ಥಿತಿಯುಂಟಾಗುತ್ತದೆಂಬ ಪ್ರಶ್ನೆ ಕೂಡಲೆ ಏಳುತ್ತದೆ. ಅವರೆಲ್ಲರೂ ಇಸ್ಲಾಮನ್ನು ಸೇರಬೇಕಾಗಿ ಬರುವುದೇ? ಹಾಗಾದರೆ ಅವರ ಧರ್ಮವೆಂಬುದು ಬಹಳ ನಿರಾಧಾರವಾದುದೆಂದು ನಾನು ಹೇಳಬೇಕಾಗುತ್ತದೆ. ಬಟ್ಟೆಗಳನ್ನು ಬದಲಾಯಿಸಿದಂತೆ ಧರ್ಮವನ್ನು ಬದಲಾಯಿಸಬರುವಂತಿದ್ದರೆ ಅದು ಕೇವಲ ಹೂರಣವಿಲ್ಲದ್ದೆಂದು ಹೇಳಬೇಕಾಗುತ್ತದೆ. ಧರ್ಮವು (ಅಚಲಶ್ರದ್ಧೆಯು) ಅದಕ್ಕಿಂತ ಹೆಚ್ಚಿನ ಸತ್ವಶಾಲಿಯಾದದ್ದು; ಅದು ಅಗಾಧವಾದ ವೈಯಕ್ತಿಕ ವಸ್ತು, ಗೌರವಕ್ಕಿಂತಲೂ ಅಗಾಧವಾದುದು. ನಿಜವಾದುದೆನಿಸಬೇಕಾದರೆ ಅದು ಎಂತಹ ಉಗ್ರವಾದ ತಿದ್ದುಪಡಿಯನ್ನೂ ಪ್ರತಿಭಟಿಸುವಂತಿರಬೇಕು.

ಒತ್ತಾಯದ ಧರ್ಮಾಂತರದ ಭಯವಿರುವವರಿಗೆ ಮೇಲಿನ ಮಾತು. ಆದರೆ ಸ್ತ್ರೀಪುರುಷರಲ್ಲಿ ಅಂತಹ ಭಯವನ್ನು ತುಂಬುವವರ ಕತೆಯೇನು? ಒತ್ತಾಯದ ಧರ್ಮಾಂತರವೆಂದು ಸ್ವಸಂತೋಷದ ಮತಾಂತರವನ್ನು ಬಹಳಸಲ ಜನರು ತಪ್ಪು ತಿಳಿದುಕೊಂಡಿದ್ದಾರೆಂದು ಗಂಭೀರವಾಗಿ ಸಮರ್ಥನೆ ಮಾಡಿದುದನ್ನು ನಾನು ಕೇಳಿದ್ದೇನೆ. ಆ ಸಮರ್ಥನೆ ಸಮಾಧಾನಕರವಿದೆಯೆಂದು ನಾನು ನಂಬುವುದಿಲ್ಲ. ತಮ್ಮ ಗೆಳೆಯರು, ಬಂಧುಗಳು ಅಥವಾ ನೆರೆಯವರು ಬಲಾತ್ಕಾರದ ಧರ್ಮಾಂತರವನ್ನು ಆಚರಣೆಗೆ ತರುವುದನ್ನು ಕಂಡ ಮೇಲೆ ಜನರು ಹಾಗೆ ಮಾಡುವುದು ಯಾವಾಗಲೂ ರೂಢಿಯಾಗಿದೆ; ಆದುದರಿಂದ ಸುತ್ತು ಮುತ್ತು ಸಂಶಯದ ವಾತಾವರಣವಿರುವಾಗ ಧರ್ಮಾಂತರವನ್ನು ಸಂಪೂರ್ಣವಾಗಿ ನಿಲ್ಲಿಸಿ ಬಿಡಬೇಕು. ವೈಯಕ್ತಿಕ ಧರ್ಮದ ಮೇಲಿನ ನನ್ನ "[illegible]" ವಾದವು ಸನ್ಯಾಸಿಗಳಿಗೆ ಮಾತ್ರ ಅನ್ವಯಿಸುವುದಾದರೆ ಸರಿ ಹೋದೀತು. ಆದರೆ ಜೀವನದ ನಾನಾ ಪ್ರಲೋಭನಗಳಿಗೊಳಗಾದ ಗೃಹಸ್ಥರಿಗೆ ಅದು ಅನ್ವಯಿಸಲಾರದು ಎಂದು ಮೊನ್ನೆ ಪ್ರತಿಪಾದಿಸಿದ ಪತ್ರಕಾರನ ಸಮರ್ಥನೆಯನ್ನು ಸಾಕ್ಷೀಗ ನೆನಪಿಗೆ ತಂದುಕೊಳ್ಳುತ್ತೇನೆ. ನಾನು ಈ ಸಮರ್ಥನೆಯನ್ನೊಪ್ಪುವುದಿಲ್ಲ. ಏಕೆಂದರೆ ಯಾರ ಸಲುವಾಗಿ ಅದು ಹೇಳಲ್ಪಟ್ಟದೆಯೋ ಅವರನ್ನು ಅದು ದುರ್ಬಲಗೊಳಿಸುತ್ತದೆ. ಆದರೆ ಅದನ್ನು ದಲಿತ ವರ್ಗಗಳಿಗೆ ವಿಶೇಷವಾಗಿ ಅನ್ವಯಿಸಿದರೆ ಅದರಲ್ಲಿ ಕೆಲವು ಮಟ್ಟಿಗೆ ಸಾಮಂಜಸ್ಯವಿದೆಯೆಂದು ನನಗೆನಿಸುತ್ತದೆ. ಏಕೆಂದರೆ ಅವರ ಒಡನಾಡಿಗರಾದ ಹಿಂದುಗಳು ದಲಿತ ವರ್ಗದವರನ್ನು ಕೆಟ್ಟ ರೀತಿಯಿಂದ ನಡೆಸಿಕೊಂಡಿದ್ದಾರೆ. ಆದುದರಿಂದ [illegible]ವಾಗಿ ತಾವು ಹೆಚ್ಚೆಂದು ಹೇಳುವ ತಮ್ಮ ಒಡನಾಡಿಗರಾದ ಹಿಂದುಗಳಿಂದ [illegible] ದೂರ ತಪ್ಪಿಸಿಕೊಳ್ಳಲು ಅವರು ಒತ್ತಾಯಕ್ಕೆ ಬಲಿಬೀಳಬಹುದು. ಅನೇಕಸಲ ಈ ಒತ್ತಾಯವು ಅನೇಕ ಸೂಕ್ಷ್ಮ ರೂಪಗಳಲ್ಲಿ ನಡೆಯುತ್ತದೆ. ಯುಕ್ತವಾದ್ದಕ್ಕಿಂತ ಹೆಚ್ಚಿನ ಸೇವೆ ಮತ್ತು ಭೂದಾನ ಇತ್ಯಾದಿ ಪ್ರಲೋಭನಗಳನ್ನು ಇದಕ್ಕೆ ಉದಾಹರಿಸಬಹುದು.

— ಗಾಂಧೀಜಿಯಿಂದ

ಹಿಂದೀ--ಹಿಂದುಸ್ತಾನಿ

(೯ನೇ ಪುಟದಿಂದ)

ಭಾಗಗಳು ಅಸ್ತಿತ್ವದಲ್ಲಿ ಉಳಿಯಬಹುದು ಆದರೆ ಒಂದು ಕ್ಷಣ ಕೂಡ ನಾವು ಪರಸ್ಪರ ಶತ್ರುಗಳಾಗಕೂಡದು. ಬಡಿದಾಡಬೇಕಾದರೆ ಎರಡೂ ಚಪ್ಪಾಳೆ ಕೂಡಬೇಕಾಗುತ್ತದೆ. ಆದರೆ ಮಿತ್ರತ್ವಕ್ಕೇನು ಆ ರೀತಿ ಬೇಕಾಗಿಲ್ಲ. ಪ್ರತಿಫಲಾಪೇಕ್ಷೆಯನ್ನು ತಾಳುವದು ವ್ಯಾಪಾರ ವಿನಿಮಯ ನಡೆಸಿದಂತೆ. ಈ ಮಿತ್ರತ್ವ ಅಂದರೆ ಪ್ರೇಮ ಅಥವಾ ಅಹಿಂಸೆ ಹೇಡಿಗಳ ಸೊತ್ತಾಗಿರದೆ ಶೂರರ ಮತ್ತು ಮುತ್ಸದ್ದಿಗಳ ಸೊತ್ತಾಗಿದೆ.

ನಾಗರಿಲಿಪಿಯಲ್ಲಿ ಬರೆದ ಸಂಸ್ಕೃತ ಪ್ರಚುರ ಹಿಂದಿಯಾಗಲಿ ಉರ್ದು ಲಿಪಿಯಲ್ಲಿ ಬರೆದ ಪಾರಶೀ ಪ್ರಚುರ ಉರ್ದುವಾಗಲಿ ಹಿಂದುಸ್ತಾನದಲ್ಲಿಯ ಎರಡು ಇಲ್ಲವೆ ಎರಡಕ್ಕಿಂತ ಹೆಚ್ಚು ಜಾತಿಗಳಲ್ಲಿ ಬಳಕೆ ಬೆಳೆಸುವ ಭಾಷೆಯಾಗಲಾರದೆಂದು ಪಂ[illegible]ರ ಅಭಿಪ್ರಾಯಕ್ಕೆ ನಾನು ಪೂರ್ಣ ಒಪ್ಪಿಗೆಯನ್ನು ಕೊಡುತ್ತೇನೆ. ದೇವನಾಗರಿ ಇಲ್ಲವೆ ಉರ್ದು ಲಿಪಿಯಲ್ಲಿ ಬರೆದ ಎರಡೂ ಭಾಷೆಗಳಲ್ಲಿಯ ಕೃತ್ರಿಮತೆಯಿಲ್ಲದ ಸಮ್ಮಿಶ್ರಣವಾದ ಹಿಂದುಸ್ತಾನಿಯು ಆ ಧ್ಯೇಯವನ್ನು ಸಾಧಿಸಬಲ್ಲುದು. ಅನೇಕ ವರುಷಗಳಿಂದ ಈ ಸ್ವಾಭಾವಿಕವಾದ ಸಮ್ಮಿಶ್ರಣ ಆಗುತ್ತಲೆ ನಡೆದಿದೆ. ಇಂಥ ಎಲ್ಲ ವಿಷಯಗಳಲ್ಲಿಯಂತೆ ಈ ಕಾರ್ಯ ಸಾವಕಾಶವಾಗಿ ಸಾಗಿದ್ದರೂ ನಿಶ್ಚಿತವಾಗಿ ನಡೆದಿದೆ. ನಾನು ಬರೆದ ಭಾಷೆಯನ್ನು ಇಲ್ಲವೆ ಮಾಡಿದ ಭಾಷಣವನ್ನು ಮುಸಲ್ಮಾನ ಮಿತ್ರನು ತಿಳಿದುಕೊಳ್ಳಲು ಪ್ರಯತ್ನಿಸಿ ಸಹಾಯ ಮಾಡುವನೊ ಇಲ್ಲವೊ ಎಂಬುದು ಮಹತ್ವದ್ದಲ್ಲ. ಆದರೆ ಅವರ ಬರಹ ಇಲ್ಲವೆ ಭಾಷಾಶೈಲಿಯನ್ನು ತಿಳಿದುಕೊಳ್ಳಲು ಪ್ರಯತ್ನಿಸುತಿರುವದರಿಂದ ಹೆಚ್ಚು ಜಾಣನಾಗಿರುವೆ. ಮುಸಲ್ಮಾನ ಧರ್ಮಗುರುಗಳ ಪಾರಶಿ ಮಿಶ್ರಿತ ಗಂಭೀರ ಉರ್ದು ಶೈಲಿಯಲ್ಲಿ ಮಾತಾಡುವ ಸೋಗು ಹಾಕಲು ನಾನೆಂದೂ ಪ್ರಯತ್ನಿಸದಿದ್ದರೂ ನನ್ನ ಉದ್ದೇಶವನ್ನು ನನ್ನ ಹಿಂದುಸ್ತಾನಿಯಲ್ಲಿಯೇ ಅವರಿಗೆ ತಿಳಿಸಿಕೊಡಲು ನನಗೆಂದೂ ಕಠಿಣವೆನಿಸಿಲ್ಲ. ನನಗೆ ಅದರಿಂದ ಲಾಭವೇ ಆಗಿದ್ದು ಅವರಿಗೆ ಮಾತ್ರ ಹಾನಿಯಾಗಿದೆಂಬುದು ನಿಶ್ಚಿತವಾದ. ನನಗೆ ಅನ್ವಯಿಸುತಿರುವ ಈ ಮಾತು ಇನ್ನು ಅನೇಕರಿಗೂ ಅನ್ವಯಿಸುವುದೆಂಬುದು ಸ್ಪಷ್ಟವಿದೆ. ಅವಳ ಮುಖ್ಯ ಪ್ರಶ್ನೆಗಳನ್ನೀಗ ಪರಾಮರ್ಶಿಸುವಾ.

ಹಿಂದುಸ್ತಾನೀ ಸಮಿತಿಯ ಪ್ರತಿಯೊಬ್ಬ ಸದಸ್ಯ ತನ್ನ ಧ್ಯೇಯಕ್ಕೆ ನಿಷ್ಠನಾಗಿಯೇ ಉಳಿಯತಕ್ಕದ್ದು. ಅಂದರೆ ಅವರೆಲ್ಲರೂ ಎರಡೂ ಲಿಪಿಗಳ ಪ್ರಭುತ್ವವನ್ನು ಸಂಪಾದಿಸಬೇಕಲ್ಲದೆ ಹಿಂದೀ ಮತ್ತು ಉರ್ದು ಎರಡೂ ಭಾಷಾಶೈಲಿಗಳ ಮಿಶ್ರಿತ ಭಾಷೆಯನ್ನು ಕಲಿಯತಕ್ಕದ್ದು. ಎರಡೂ ಭಾಷೆಗಳ ಸರಳ ಸಾಹಿತ್ಯದ ಅಭ್ಯಾಸ ಮಾಡಿದರೆ ಇದು ಸಾಧ್ಯವಾಗುವದು ಈ ಪ್ರಥಮ ಗುರಿ ಸಾಧ್ಯವಾಯಿತೆಂದರೆ ಅವರು ಈ ಜ್ಞಾನ ಸಂಪಾದನೆಗಾಗಿ ಎರಡನೆಯವರ ಮನವೊಲಿಸಲು ಪ್ರಯತ್ನಿಸಲಿಕ್ಕೇ ಬೇಕು. ಎರಡನೆಯದಾಗಿ ಹಿಂದುಸ್ತಾನಿ ಪ್ರಚಾರಕರು ಪ್ರಾಮಾಣಿಕರು ಮತ್ತು ಸ್ವಾರ್ಥತ್ಯಾಗಿಗಳಾಗಿದ್ದಾರೆ. ತಮ್ಮಲ್ಲಿದ್ದ ಭಾವನೆ ಮತ್ತು ಸತ್ವಗಳಿಂದ ಇಡೀ ವಾತಾವರಣವನ್ನು ತುಂಬಿಬಿಡಬಲ್ಲರು. ಮೂರನೆಯದಾಗಿ ಹಿಂದುಸ್ತಾನಿಯೇ ಇಡೀ ರಾಷ್ಟ್ರದ ಭಾಷೆಯೆಂದು ಒಪ್ಪಿಕೊಂಡು ಯಾರು ಅದನ್ನು ಪ್ರೀತಿಸುವರೊ ಅವರು ಹಿಂದುಸ್ತಾನಿಯಲ್ಲಿಯೆ ಭಾಷಣಮಾಡಿ ಇಲ್ಲವೆ ಬರೆದು ಬರೆದು ತಮ್ಮ ಒಪ್ಪಿಗೆಯನ್ನು ಸಿದ್ಧಮಾಡಿ ತೋರಿಸಬೇಕು. ತಮ್ಮ ಮಾತೃಭಾಷೆ ಯಾರಿಗೆ ತಿಳಿಯುವದಿಲ್ಲವೊ ಅಂಥವರಿಗಾಗಿ ಮಾತಾಡುವಾಗ ಅವರು ಈ ಬಗೆಯ ಹಿಂದುಸ್ತಾನಿಯಲ್ಲಿಯೆ ವ್ಯವಹರಿಸಬೇಕು. ಉದಾಹರಣಾರ್ಥವಾಗಿ ತಮಿಳರು ತಮ್ಮ ತಮಿಳಬಾಂಧವರೊಡನೆ ಮಾತಾಡುವಾಗ ತಮಿಳಿನಲ್ಲಿಯೆ ಮಾತಾಡತಕ್ಕದ್ದು. ಆದರೆ ತಮಿಳರಲ್ಲದವರಗೂಡ ಮಾತಾಡುವಾಗ ಈಗಿನಂತೆ ಇಂಗ್ಲಿಶಿನಲ್ಲಿ ಮಾತಾಡದೆ ಹಿಂದುಸ್ತಾನಿಯಲ್ಲಿಯೆ ಮಾತಾಡತಕ್ಕದ್ದು.

ಹೊಸದಿಲ್ಲಿ ಮೋ. ಕ. ಗಾಂಧಿ
೨೩—೭—೪೭

[೬ನೇ ಪುಟದಿಂದ]

ಬಗೆಯ ಧೋರಣವನ್ನು ವಹಿಸುತಿರುವದೆಂಬುದನ್ನು ಒಳ್ಳೆ ಆತುರತೆಯಿಂದ ನಿರೀಕ್ಷಿಸುತಿರುವೆನು. ಹಿಂದವಿರೋಧಕ ಸರಕಾರ ಅದು ಆಗಬಲ್ಲುದೆ? ಅಲ್ಲಿರುವ ಯುರೋಪಿಯನ್‌ರು ಹಿಂದೀಯರಿರುವರೆಂದು ಆ ಗಾಡಿಯಲ್ಲಿ ಪ್ರವಾಸ ಮಾಡಲು ನಿರಾಕರಿಸಬಹುದೆ?

ಅಗಸ್ಟ್ ಹದಿನೈದು

೧೯೪೭ ನೆಯ ಅಗಸ್ಟ ೧೫ ರಲ್ಲಿ ಭಾರತವು ಸ್ವತಂತ್ರವಾಗುತ್ತದೆ ಮಹಾತ್ಮಾ ಗಾಂಧಿಯವರ ಅತ್ಯಂತ ನಿಷ್ಠಶಿಷ್ಯರಾದ ಮಹಾದೇವ ದೇಸಾಯಿಯವರು ಆಗಾಖಾನರ ಅರಮನೆಯಲ್ಲಿ ಸೆರೆಯಾಳಾಗಿದ್ದು ತೀರಿಕೊಂಡದ್ದು ೧೯೪೨ ನೆಯ ಅಗಸ್ಟ ೧೫ ರ ದಿನವೇ. ಅವರು ತಮ್ಮ ೨೫ನೆಯ ವರ್ಷದಲ್ಲಿ ಗಾಂಧೀಜಿಯನ್ನು ಕೂಡಿಕೊಂಡರು ಮತ್ತು ಅವರ ಸೇವೆಯ ಮೂಲಕ ತಾಯಿನಾಡಿನ ಸೇವೆಯನ್ನು ೨೫ ವರ್ಷಗಳ ಕಾಲ ನಡೆಸಿದರು. ಅಗಸ್ಟ ೯ ರ ಬೆಳಿಗ್ಗೆ ಅವರು ಬಂದಿಗಳಾಗುವ ಮೊದಲು, ಗಾಂಧೀಜಿ 'ಮಾಡು ಇಲ್ಲವೆ ಮಡಿ' ಎಂಬ ಸಂದೇಶವನ್ನು ಕೊಟ್ಟಿದ್ದರು. ಕಂಕಣಬದ್ಧರಾಗಿಯೇ ಮಹಾದೇವ ದೇಸಾಯಿಯವರು ಅದೇ ಒಂದು ವಾರದಲ್ಲಿ ಮಡಿದರು. ಅವರದು ಸ್ವಾತಂತ್ರ್ಯ ವೇದಿಕೆಯಲ್ಲಿ ನಡೆದ ಒಂದು ಅತ್ಯಂತ ಪವಿತ್ರವಾದ ಯಜ್ಞವೆಂದು ಗಾಂಧೀಜಿಯೆಂದರು. ಒಬ್ಬ ಗೆಳೆಯರು ಬರೆಯುತ್ತಾರೆ. ಮಹಾದೇಶಭಕ್ತರಾದ ಮಹಾದೇವದೇಸಾಯಿಯವರ ವಾರ್ಷಿಕ ಶ್ರಾದ್ಧದ ದಿನವೇ ಹಿಂದೀಯರ ಕೈಗೆ ಅಧಿಕಾರ ಹಸ್ತಾಂತರವಾಗುವದು ಅರ್ಥಪೂರ್ಣವಾಗಿಲ್ಲವೇ? ಸ್ವಾತಂತ್ರ್ಯೋತ್ಸವದ ಸಂಭ್ರಮದಲ್ಲಿ ಮಹಾದೇವ ದೇಸಾಯಿಯವರನ್ನು ಜನತೆ ಮರೆಯಬಾರದೆಂದು ಅವರು ಗಾಂಧೀಜಿಗೆ ಅರಿಕೆ ಮಾಡಿಕೊಂಡಿದ್ದಾರೆ. ಉತ್ಸವಕ್ಕೆ ಉಪವಾಸ, ಪ್ರಾರ್ಥನೆ ಮತ್ತು ನೂಲುವುದು ಕಾರ್ಯಕ್ರಮವಾಗಿರಬೇಕೆಂದು ಗಾಂಧೀಜಿಯ ಸಲಹೆ. ಅದರ ಜೊತೆಗೆ ಸ್ವಾತಂತ್ರ್ಯೋದಯವಾಗಲು ಆತ್ಮಾರ್ಪಣ ಮಾಡಿದ ದೇಶಭಕ್ತರಿಗೆ ಭಕ್ತಿಯನ್ನು ಸಲ್ಲಿಸುವುದೂ ಸೇರಿರಬೇಕು. ಅವರ ಹೆಜ್ಜೆಯಲ್ಲೇ ಹೋಗಲು ನಮಗೆ ಶಕ್ತಿ ಕೊಡಲೆಂದೂ ಕಷ್ಟಾರ್ಜಿತವಾದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಬಲವನ್ನು ದಯಪಾಲಿಸಲೆಂದೂ ದೇವರನ್ನು ಪ್ರಾರ್ಥಿಸೋಣ. ವಾಸ್ತವವಾಗಿ ನೋಡಿದರೆ ಜಾತೀಯ ವೈಷಮ್ಯದ ಮತ್ತು ಅನ್ನವಸ್ತ್ರದ ದಾರಿದ್ರ್ಯದ ಮೂಲಕ ಸ್ವಾತಂತ್ರ್ಯವು ತನ್ನ ವೈಭವವನ್ನು ಕಳೆದುಕೊಂಡಿದೆ. ಅದನ್ನು ಸಾರ್ಥಕಗೊಳಿಸಲು ಎಲ್ಲರೂ ಕಷ್ಟಪಟ್ಟು ದುಡಿಯಬೇಕು. ನಿಷ್ಕೃತಿಗಿಂತ ಕೃತಿಯೇ ಕಠಿನವಾದುದು.

—ಸುಶಿಲಾ ನಯ್ಯರ

ಪಾಕಿಸ್ತಾನದಲ್ಲಿ ಶೇಷಾಯುಷ್ಯ ಕಳೆಯುವೆ

ಮಹಾತ್ಮಾ ಗಾಂಧೀಯವರ ನಿರ್ಧಾರ

ಉಳಿದ ಆಯುಷ್ಯವನ್ನು ನಾನು ಪಾಕಿಸ್ತಾನದಲ್ಲಿ ಕಳೆಯಬೇಕೆಂದಿದ್ದೇನೆ. ಪೂರ್ವ ಬಂಗಾಲ ಪಶ್ಚಿಮ ಪಂಜಾಬ ಇಲ್ಲವೆ ಗಡಿ ಪ್ರಾಂತದಲ್ಲಿ ನಾನು ವಾಸಿಸಬಹುದು. ಎಂದು ಮಹಾತ್ಮಾ ಗಾಂಧಿಯವರು ಲಾಹೋರಿನಲ್ಲಿ ೬ ಕೈ ಕಾಂಗ್ರೆಸ ಕಾರ್ಯಕರ್ತರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಹೇಳಿದರು.

ಮಹಾತ್ಮರು ಇನ್ನೂ ಹೇಳಿದ್ದೇನೆಂದರೆ:— ಪಶ್ಚಿಮ ಪಂಜಾಬದಿಂದ ಜನರು ಪಲಾಯನ ನಡೆಸಿರುವರೆಂದು ಕೇಳಿ ನನಗೆ ಖೇದವಾಗುತ್ತದೆ. ಮುಸಲ್ಮಾನೇತರರು ಲಾಹೋರದಿಂದ ಕಾಲ್ತೆಗೆಯುತ್ತಿರುವರೆಂದು ಕೇಳಿದ್ದೇನೆ. ಇದು ಯುಕ್ತವಲ್ಲ. ಹೀಗಾಗಲಾರದು. ಲಾಹೋರ ಪಟ್ಟಣವು ಹಾಳಾಗಿದೆ ಅಥವಾ ಹಾಳಾಗುತ್ತಿದೆಂದು ನಿಮಗೆ ಅನಿಸಿದರೆ ಅದನ್ನು ಬಿಟ್ಟು ಓಡಿಹೋಗಬೇಡಿರಿ ಅದರೊಡನೆ ಸಾಯಿರಿ.

ಸಿಖರೆಂದರೆ ಮರಣಕ್ಕಂಜದ ಶೂರ ಪುರುಷರೆಂದೆ ನಾನು ಭಾವಿಸಿದ್ದೇನೆ. ಆದರೆ ಅವರು ನಿರಪರಾಧಿಗಳನ್ನು ಎಂದೂ ಹಿಂಸಿಸರು. ಹಿಂದು ಮುಸಲ್ಮಾನ ಮತ್ತು ಸೀಖರ ನಡುವಿನ ಈ ದುಃಖದಾಯಕ ಕಲಹವು ಹೀಗೇ ಸಾಗಿದರೆ ಪರಚಕ್ರಕ್ಕೆ ಹಿಂದುಸ್ತಾನದ ಮೇಲೆ ದಾಳಿ ಮಾಡಲು ಔತಣ ಕೊಟ್ಟಂತಾದೀತು. ಯಾರಿಗೂ ಗೌರವವನ್ನು ತರದ ಈ ಕಲಹವನ್ನು ಕೊನೆಗಾಣಿಸಿರಿ.

ಪಂಜಾಬದ ವಿಷಯವನ್ನೆತ್ತಿ ಮಹಾತ್ಮರು ಈ ರೀತಿ ಹೇಳಿದರು. ನನ್ನ ಹೃದಯವು ಯಾವಾಗಲೂ ಪಂಜಾಬದಲ್ಲಿಯೇ ಇದೆ. ಪಂಜಾಬದ ವಿಷಯವಾಗಿ ನಾನು ಕೇಳುತ್ತಿದ್ದ ಹೃದಯವಿದ್ರಾವಕ ಸುದ್ದಿಗಳಿಂದಂತೂ ಪಂಜಾಬವು ಒಂದೆ ಸವನೆ ನನ್ನ ಕಣ್ಣ ಮುಂದಿದೆ. ನಾನು ಅದನ್ನು ಎಂದಾದರೂ ಮರೆತಿದ್ದೇನೆಂದು ಭಾವಿಸಬೇಡಿರಿ. ದಿಲ್ಲಿಗೆ ಬಂದಾಗಿನಿಂದ ಪಂಜಾಬಿಗೆ ಬರಲು ನನ್ನ ಮನಸ್ಸು ಹಾತೊರೆಯುತ್ತಿತ್ತು. ಆದರೆ ಎಷ್ಟೋ ಸಂಗತಿಗಳು ನನ್ನನ್ನು ತಡೆಹಿಡಿದವು. ನನ್ನ ಸದ್ಯದ ವಾಸ್ತವ್ಯವು ನೌಖಾಲಿಯಾಗಬೇಕಾಗಿದೆ. ನೌಖಾಲಿಯಿಂದ ಮುಕ್ತನಾದೊಡನೆ ನಾನು ಪಂಜಾಬಕ್ಕೆ ಬರುವೆ. ಬೇಗನೆ ನೌಖಾಲಿಯಿಂದ ಮುಕ್ತನಾಗಬಹುದು.

ಕರ್ನಾಟಕ

ಧಾರವಾಡ

ಹುಬ್ಬಳ್ಳಿಯಲ್ಲಿ ಯಾರ್ಡ ಫೋರಮನ್ ರಾಗಿದ್ದ ಖಾನ ಎಂಬವರು ಡಿಸ್ಟ್ರಿಕ್ಟ ಟ್ರಾನ್ಸಪೋರ್ಟೇಶನ ಸುಪರಿಂಟೆಂಡೆಂಟ ಇವರಿಗೆ ತಮ್ಮನ್ನು ಕಾಯಂ ಮಾಡಬೇಕೆಂದು ಹೇಳಿ ೨೦೦ ರೂ. ಲಂಚ ಕೊಡಲು ಪ್ರಯತ್ನಿಸಿದಾಗ ಸಾಹೇಬರು ಟೆಲಿಫೋನ ಮಾಡಿ ಫೌಜದಾರರನ್ನು ಕರೆಯಿಸಿ ಖಾನರನ್ನು ಅವರ ವಶಕ್ಕೊಪ್ಪಿಸಿದರು. ಕೆಲಸದ ಮೇಲಿಂದ ಅವರನ್ನು ಸಸ್ಪೆಂಡಮಾಡಿದ್ದು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಧುಂಡಸಿಯಲ್ಲಿ ರಾಮಚಂದ್ರಪ್ಪಾ ಕಲಾಲ ಇವರ ಮನೆಗೆ ಕನ್ನ ಹಾಕಿ ಕಳವು ಮಾಡಿದ ಆರೋಪಕ್ಕಾಗಿ ತಿಮ್ಮಾ ದುಣ್ಣನವರ, ಸಾಂತಾ ಕ್ರೂಜ ಮುಂಬಯಿ ಮತ್ತು ಫಕೀರಾ ಮಣ್ಣವಡ್ಡರ ಬೈಲಹೊಂಗಲ ಇವರಿಗೆ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ತಲಾ ೨ ವರ್ಷ ಶಿಕ್ಷೆ ಮತ್ತು ೨೦೦ ರೂ. ದಂಡ ತಪ್ಪಿದರೆ ಮತ್ತೆ ೬ ತಿಂಗಳ ಶಿಕ್ಷೆ ವಿಧಿಸಿದರು. ಪುಂಡಲೀಕಪ್ಪಾ ಹವಾಲದಾರ ಇವರು ಒಳ್ಳೆ ಸಾಹಸದಿಂದ ಇವರನ್ನು ಹಿಡಿದಿದ್ದರು.

ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿ ನಿವೃತ್ತರಾಗಿದ್ದ ಶ್ರೀ ಜಮಖಂಡಿ ಗೋಪಾಳರಾಯರು ೩೦ನೇ ತಾರೀಕಿನ ದಿವಸ ವಯಸ್ಸಿನ ೬೫ನೇ ವರ್ಷದಲ್ಲಿ ವೈಕುಂಠವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಹೆಬ್ಬಳ್ಳಿಯ ಶ್ರೀಮಂತ ಸರದಾರ ಲಕ್ಷ್ಮಣರಾವ ಜಾಗಿರದಾರ, ಕೃಷ್ಣರಾವ ಜಾಗಿರದಾರ, ಶ್ರೀನಿವಾಸರಾವ ಹಾಗು ಲಕ್ಷ್ಮೀಬಾಯಿ ಜಾಗಿರದಾರ ಇವರು ಬಡ ಜನರ ಸ್ಥಿತಿಗತಿಯನ್ನು ನೋಡಿ ಈ ವರ್ಷದ ಲಾವಣಿ ಹಣದಲ್ಲಿ ಎರಡು ಮೂರಾಂಶ ಸೂಟ ಕೊಟ್ಟದ್ದಲ್ಲದೆ ಹಿಂದಿನ ಯಾವತ್ತೂ ಬಾಕಿಯನ್ನು ಸೂಟ ಬಿಟ್ಟಿದ್ದಾರೆ.

ಧಾರವಾಡ ನಗರ ಸಭೆಯವರು ಸ್ವಾತಂತ್ರ್ಯೋತ್ಸವಕ್ಕೆ ಒಂದು ಸಾವಿರ ರೂಪಾಯಿ ವೆಚ್ಚ ಮಾಡಲು ನಿರ್ಧರಿಸಿದ್ದಾರೆ.

ಗದುಗಿನಲ್ಲಿ ಸ್ವಾತಂತ್ರ್ಯ ದಿನದ ಸ್ಮಾರಕವೆಂದು ಉತ್ಕೃಷ್ಟ ಕಟ್ಟಡವೊಂದನ್ನು ಕಟ್ಟಿಸಬೇಕೆಂದು ನಿರ್ಧರಿಸಲಾಗಿದೆ. ನಗರಸಭೆಯವರು ಕಟ್ಟಡಕ್ಕಾಗಿ ಪುಕ್ಕಟೆ ಸ್ಥಳ ಕೊಡುವರು. ಒಂದು ಲಕ್ಷ ರೂಪಾಯಿ ನಿಧಿ ಕೂಡಿಸಬೇಕೆಂದು ಗೊತ್ತಾಗಿದೆ.

ಮುಂಬಯಿಯಲ್ಲಿ ನಡೆದ ರೆಜಿಸ್ಟ್ರೇ ಕ್ವಾಲಿಫಾಯಿಂಗ ಪರೀಕ್ಷೆಯಲ್ಲಿ ಎಂ ಕೆ ಸಾವಿನ ಬೆಳಗಾವಿ, ಬಿ ಎ ಹೊಸಕೇರಿ ಧಾರವಾಡ, ಅಯ ಅಯ ಶೇಖ ಸೊಲ್ಲಾಪೂರ, ಎಸ್ ಡಿ ಕಗಲಗೊಂಬ ಶಿಂದಗಿ, ಜಿ ಜಿ ಶಹಾಪೇಟೆ ಬಾಗಲಕೋಟೆ, ಬಿ ಬಿ ಪರಪ್ಪಗೌಡರ ಧಾರವಾಡ, ಕೆ ಬಿ ಕ್ಷೀರಸಾಗರ ಉತ್ತರ ಸೊಲ್ಲಾಪೂರ, ಎ ವಾಯ ಪಾಟ್ನೆ ಧಾರವಾಡ, ಎಸ್ ಎಸ್ ಪೆಜ್ಜೂರ ಕಾರವಾರ, ಎಸ್ ಬಿ ಸಾತಪುಟೆ ಉತ್ತರ ಸೊಲ್ಲಾಪೂರ ಇವರು ಉತ್ತೀರ್ಣರಾಗಿರುವರು.

ಶ್ರೀಮತಿ ನೀಲವ್ವ ಹುಮಂತಪ್ಪ ಲಂಕಾ ಗೋದೂಬಾಯಿ ನಾಗಪ್ಪಾ ಮಾಳವದೆ, ಲೀಲಾ ಪತಿ ವೆಂಕಟೇಶ ಮಾಗಡಿ ಹಾಗು ಉಮಾಬಾಯಿ ಕೊಪ್ಪೀಕರ ಇವರು ಧಾರವಾಡ ಜಿಲ್ಹೆಯಲ್ಲಿ ೨ ನೇ ವರ್ಗದ ಆನರರಿ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿದ್ದಾರೆ.

೧೯೪೬ ನೇ ಇಸ್ವಿ ಮುಂಬಯಿ ಸಾವಕಾರ ಕಾಯದೆಯ ನಿಯಮಗಳು ಗ್ಯಾಜೆಟಿನಲ್ಲಿ ಪ್ರಸಿದ್ಧವಾಗಿದ್ದು ಸೂಚನೆ ಇಲ್ಲವೆ ಆಕ್ಷೇಪ ಕಳಿಸಬಯಸುವವರು ಅಗಸ್ಟ ೧೮ ಕ್ಕೊಳಗಾಗಿ ಸರಕಾರದ ಕಂದಾಯ ಖಾತೆಯ ಸೆಕ್ರೆಟರಿಗಳಿಗೆ ಕಳಿಸಬೇಕು.

ಗದುಗಿನ ಪ್ರಸಿದ್ಧ ಕಿರಾಣಿ ವ್ಯಾಪಾರಸ್ಥರಾದ ಶ್ರೀ ಬಾಳಪ್ಪ ಜೀವಬಾಳಪ್ಪ ಶೆಟ್ಟಿ ಇವರು ಸ್ವಾತಂತ್ರ್ಯೋತ್ಸವದ ನಿಮಿತ್ತ ಬಡಮಕ್ಕಳಿಗೆ ಎರಡು ಸಾವಿರ ರೂಪಾಯಿಗಳ ಅಂಗಿಗಳನ್ನು ಕೊಡಬೇಕೆಂದು ಮಾಡಿದ್ದಾರೆ.

ನಿವೃತ್ತ ಪೋಲೀಸ ಪ್ರಾಸಿಕ್ಯೂಟರರಾದ ಶ್ರೀ ರಂಗರಾವ ಮಂಗಳವೇಢೆಯವರು ಕಳೆದ ೩೧ ನೇ ತಾರೀಖಿಗೆ ವಯಸ್ಸಿನ ೬೨ ನೇ ವರ್ಷದಲ್ಲಿ ಅರ್ಧಾಂಗವಾಯುವಿನಿಂದ ವೈಕುಂಠವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಜಿನೇವಾ ಅಂತರ್ ರಾಷ್ಟ್ರೀಯ ಪರಿಷತ್ತಿಗೆ ಹಿಂದುಸ್ತಾನ ಸರಕಾರದ ಪ್ರತಿನಿಧಿಗಳಾಗಿ ಹೋಗಿರುವ ಶ್ರೀ ದ. ಪ. ಕರಮರಕರರು ಸಪ್ಟೆಂಬರ ಮೊದಲನೇ ವಾರದಲ್ಲಿ ಹಿಂದುಸ್ತಾನಕ್ಕೆ ಮರಳುವರೆಂದು ತಿಳಿಯುತ್ತದೆ. ಹಿಂದುಸ್ತಾನಕ್ಕೆ ಬರುವ ಮೊದಲು ಅವರು ಇಟಲಿ, ಫ್ರಾನ್ಸ, ಇಂಗ್ಲಂಡ, ಹಾಗು ಸಾಧ್ಯವಾದರೆ ಝೆಕೋಸ್ಲೋವಾಕಿಯಾ ಮತ್ತು ರಶಿಯ ದೇಶಗಳನ್ನು ಸಂಚರಿಸಲಿರುವರು.

ಹುಬ್ಬಳ್ಳಿಯ ಕೋಆಪರೇಟಿವ ಆಸ್ಪತ್ರೆಗೆ ಶ್ರೀ ಕೆಂಭಾವಿ ನಾರಾಯಣರಾಯರು ಡೆಕ್ಕನ ಫರ್ಟಿಲಾಯಿಜರ ಕಂಪನಿಯವರು ೧೦೧ ರೂಪಾಯಿ ಕಾಣಿಕೆ ಕೊಡುವದಾಗಿ ಸಾರಿ ೫೦ ರೂಪಾಯಿ ರೋಖ ಕೊಟ್ಟಿರುವರು.

ಅಬ್ಬಿಗೇರಿಯ ಭೀಮಪ್ಪಾ ಬಸವ ರಡ್ಡೇರರ ಕೊಲೆಯ ಸಂಬಂಧದಲ್ಲಿ ಸಬ್ ಇನಸ್ಪೆಕ್ಟರ ಶ್ರೀ ಮಹಮ್ಮದ ಇವರು ಬಸಲಿಂಗಪ್ಪಾ ಬಸವರಡ್ಡೇರ ಮತ್ತು ಶರಣಪ್ಪಾ ಬಸವರಡ್ಡೇರ ಇವರನ್ನು ಬಂಧಿಸಿ ಒಂದನೇ ವರ್ಗದ ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿ ಮಾಡಿದೆ.

ಬೆಳಗಾವಿ

ಬೆಳಗಾವಿ ಜಿಲ್ಹೆಯಲ್ಲಿ ಸ್ವಾತಂತ್ರ್ಯೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಬೇಕೆಂದು ಜಿಲ್ಹಾ ಕಾಂಗ್ರೆಸ ಸಮಿತಿಯವರು ನಿರ್ಧರಿಸಿದ್ದಾರೆ. ಬಿಚ್ಚುಗತ್ತಿಯ ಪಳಬರು ಮತ್ತು ತೋಫಿನ ಗರ್ಜನೆಯಿಂದ ಧ್ವಜವಂದನೆ ಮಾಡಬೇಕೆಂದೂ ಸಾಧ್ಯವಿದ್ದಲ್ಲೆಲ್ಲ ಪೋಲೀಸರ ಮತ್ತು ಸೈನಿಕರ ಕೂಚು ಮಾಡಿಸಬೇಕೆಂದೂ ಗೊತ್ತಾಗಿದೆ. ಹಳ್ಳಿಗರ ನೃತ್ಯ ಮೊದಲಾದ್ದನ್ನೂ ಏರ್ಪಡಿಸಬೇಕೆಂದು ಮಾಡಿದ್ದಾರೆ. ಧಾನ್ಯ ಕೂಡಿಸಿ ಸಹಭೋಜನ ಇಲ್ಲವೆ ದಲಿತ ವರ್ಗದವರಿಗೆ ಅನ್ನಸಂತರ್ಪಣೆ ನಡೆಯುವದು.

ನಿಪ್ಪಾಣಿಯವರು ಸ್ವಾತಂತ್ರ್ಯೋತ್ಸವಕ್ಕಾಗಿ ೧೫ ಸಾವಿರ ರೂಪಾಯಿ ವೆಚ್ಚ ಮಾಡತಕ್ಕದ್ದೆಂದು ಗೊತ್ತುಪಡಿಸಿದ್ದಾರೆ. ಪಟ್ಟಣದವರಿಂದ ತಲಾ ಎರಡಾಣೆಯಂತೆ ಈ ನಿಧಿಯನ್ನು ಕೂಡಿಸಬೇಕೆಂದು ಗೊತ್ತುಪಡಿಸಲಾಗಿದೆ.

ಬೆಳಗಾವಿ ಮುನಸಿಪಾಲಿಟಿಯವರು ತಮ್ಮ ನೋಕರರಿಗೆಲ್ಲ ಸ್ವಾತಂತ್ರ್ಯೋತ್ಸವದ ನಿಮಿತ್ತ ತಿಂಗಳ ಪಗಾರದ ಒಂದು ನಾಲ್ಕಾಂಶದಷ್ಟು ಹಣವನ್ನು ಬೋನಸ್ಸೆಂದು ಕೊಡಲು ನಿರ್ಧರಿಸಿದ್ದಾರೆ.

ಸ್ವಾತಂತ್ರ್ಯೋತ್ಸವಕ್ಕಾಗಿ ಬೆಳಗಾವಿ ನಗರ ಸಭೆಯವರು ೧೦೦೦ ರೂಪಾಯಿ ವೆಚ್ಚ ಮಾಡಬೇಕೆಂದು ನಿರ್ಣಯಿಸಿದ್ದಾರೆ. ಎಲ್ಲ ಪಕ್ಷ ಸಂಗಡಗಳ ಜನರೂ ಈ ಉತ್ಸವದಲ್ಲಿ ಭಾಗವಹಿಸಲು ಒಪ್ಪಿಕೊಂಡಿದ್ದಾರೆ.

ಬಳ್ಳಾರಿ

ಉರುವಕೊಂಡ ಸಂಸ್ಥಾನಾಧಿಪತಿಗಳು ತಮ್ಮ ಜಾಗೀರಿ ಗ್ರಾಮದಲ್ಲಿ ಒಂದು ಭವ್ಯ ಮಂದಿರವನ್ನು ಕಟ್ಟಿಸುತ್ತಿದ್ದು ಅದಕ್ಕೆ ಕನ್ನಡ ಸ್ವರಾಜ್ಯ ಭವನವೆಂಬ ನಾಮಕರಣ ಮಾಡಿ ಅಗಸ್ಟ ೧೫ ನೇ ತಾರೀಕು ಜಾಗೀರಿನ ಪ್ರಜೆಗಳ ರಾಜಕೀಯ ವಿಚಾರದ ಬೆಳವಣಿಗೆಗಾಗಿ ಉಪಯೋಗಿಸಿಕೊಳ್ಳುವಂತೆ ಅನುಕೂಲಪಡಿಸಿ ಆಶೀರ್ವದಿಸುವರೆಂದು ತಿಳಿಯುತ್ತದೆ.

ಕೊಟ್ಟೂರ ಪಂಚಾಯತಿಯ ಉಪಾಧ್ಯಕ್ಷ ಜನಾಬ ಬಿ ಸೈಯ್ಯದ ಸಾಹೇಬರ ಅಧ್ಯಕ್ಷತೆಯಲ್ಲಿ ಕಳೆದ ರವಿವಾರ ಸಭೆ ಸೇರಿ ಮುಸಲ್ಮಾನರ ಏಳಿಗೆಗಾಗಿ ಅಂಜುಮಾನ್ ನೂರುಲ್ಲಾ ಇಸ್ಲಾಂ ಎಂಬ ಸಂಘದ ಸ್ಥಾಪನೆಯಾಯಿತು. ಜನಾಬ ಮಹಮ್ಮದ ಕಾಸೀಮಸಾಹೇಬರು ಸಂಘದ ಉದ್ದೇಶವನ್ನು ವಿವರಿಸುತ್ತ ಹಿಂದೂ ಮುಸಲ್ಮಾನರ ಬಂಧುಪ್ರೇಮದ ಚಿಹ್ನವಿದೆಂದು ಹೇಳಿದರು.

ಕನ್ನಡ ಸಂಸ್ಥಾನ

ತುಮಕೂರ ಜಿಲ್ಲಾ ಬೋರ್ಡಿಗೆ ಕಾಂಗ್ರೆಸ್ಸಿನ ಶ್ರೀ ಬಿ. ಸಿ. ನಂಜುಂಡಯ್ಯನವರು ೧೮ ಮತಗಳನ್ನು ಪಡೆದು ಅಧ್ಯಕ್ಷರಾಗಿ ಆರಿಸಿ ಬಂದರು. ಪ್ರತಿಸ್ಪರ್ಧಿಗಳಾದ ಎಂ. ಆರ್. ಶಿವಪ್ಪನವರಿಗೆ ೯ ಮತಗಳು ಬಿದ್ದವು.

ಶಿವಮೊಗ್ಗೆಯ ದೊಡ್ಡಬ್ರಾಹ್ಮಣಕೇರಿಯಲ್ಲಿರುವ ಲಕ್ಷ್ಮೀನಾರಾಯಣದೇವರ ಮೇಲಿನ ವಸ್ತು ಒಡವೆಗಳನ್ನು ಗುಡಿಯ ಬೀಗ ಮುರಿದು ಯಾರೋ ಅಪಹರಿಸಿಕೊಂಡು ಹೋಗಿದ್ದಾರೆ.

ವಿಜಾಪುರ

ವಿಜಾಪುರ ನಗರಸಭೆಯ ಹೊಸ ಅಧ್ಯಕ್ಷ ಶ್ರೀ ಭೋರಿ ಮತ್ತು ದೇರೆ ಎವರು ಸದಸ್ಯರು ನಗರಸಭೆಯ ಸಭೆಗಳಿಗೆ ನಾಲ್ಕು ತಿಂಗಳು ಸತತ ಬಾರದ ಮೂಲಕ ಅವರ ಸದಸ್ಯತ್ವವನ್ನು ಏಕೆ ರದ್ದು ಗೊಳಿಸಬಾರದೆಂದು ಕಲೆಕ್ಟರರು ನೋಟೀಸು ಮಾಡಿ ಕೇಳಿರುವರೆಂದು ತಿಳಿಯುತ್ತದೆ. ಬಾಗಲಕೋಟೆ ನಗರಸಭೆಯ ನಾಲ್ವರು ಸದಸ್ಯರು ಸತತ ನಾಲ್ಕು ತಿಂಗಳು ಸಭೆಗೆ ಬಾರದ್ದಕ್ಕಾಗಿ ಕಲೆಕ್ಟರರು ಅವರ ಸದಸ್ಯತ್ವವನ್ನು ರದ್ದು ಮಾಡಿದ್ದಾರೆ.

ವಿಜಾಪುರ ನಗರ ಸಭೆಯವರು ಸ್ವಾತಂತ್ರ್ಯೋತ್ಸವಕ್ಕಾಗಿ ೧೦೦೦ ರೂಪಾಯಿ ವೆಚ್ಚ ಮಾಡಬೇಕೆಂದು ನಿರ್ಧರಿಸಿದ್ದಾರೆ. ಸ್ಥಾಯಿ ಸಮಿತಿಗೆ ಎಂ ಡಿ ತಾಳಿಕೋಟೆ ನೀರಿನ ಕಾಮಗಾರಿಗೆ ಶ್ರೀ ಸಾವಳಗಿ, ಸ್ವಚ್ಛತೆ ಸಮಿತಿಗೆ, ಶ್ರೀ ಚೌಧರಿ, ಹಣಕಾಸಿನ ಸಮಿತಿಗೆ ಶ್ರೀ ಕಾಡಿ, ನಗರ ಸುಧಾರಣೆ ಹಾಗು ಆಸ್ಪತ್ರಿ ಸಮಿತಿಗೆ ಶ್ರೀ ಜಾಲವಾದಿಯವರು ಚೆಅರಮನ್ ರಾಗಿ ಆರಿಸಲ್ಪಟ್ಟಿರುವರು ಕಾಂಗ್ರೆಸ ಸಮಿತಿಯವರು ೨೦೦೦ ರೂಪಾಯಿ ಸ್ವಾತಂತ್ರ್ಯೋತ್ಸವಕ್ಕಾಗಿ ವೆಚ್ಚ ಮಾಡಲಿರುವರು.

ಉತ್ತರ ಕನ್ನಡ

ಸಿರ್ಸಿ ನಗರ ಸಭೆಯ ಭಂಗೀ ಜನರು ಬೋನಸ್ಸಿನ ಸಲುವಾಗಿ ೨೪ ರಿಂದ ಹೂಡಿದ ಸಂಪು ಎಸ್. ಎಸ್. ಕೇಶವಾಯನ್‌ರ ಮಧ್ಯಸ್ತಿಯಿಂದ ಬಗೆಹರಿದು ತಾ. ೩೧ ರಿಂದ ಭಂಗಿ ಜನರು ಪುನಃ ಕೆಲಸ ಪ್ರಾರಂಭಿಸಿರುವರು.

ಹಾರುಗ್ರಾಮದ ಪಾಟೀಲರು ಸರಕಾರಿ ಅಪ್ಪಣೆಯಿಲ್ಲದೆ ಕೂಡಿಸಿಟ್ಟ ಸೀಸ ಮತ್ತಿ ಹೊನ್ನಿ ಮೊದಲಾದ ಜಾತಿಯ ಸುಮಾರು ೬೦ ಖಂಡಿ ನಾಟಿನ ತುಂಡುಗಳನ್ನು, ರೆಂಜ ಫಾರೆಸ್ಟ ಅಧೀಸರರು ಹಿಡಿದು ಪಂಚನಾಮೆ ಮಾಡಿರುವುದಾಗಿ ತಿಳಿಯುತ್ತದೆ.

ಹೊನ್ನಾವರದ ಗುಣಗುಣೆ ಮತ್ತು ಮಕಪ ಕೇರಿಯಲ್ಲಿರುವ ಹಾಲಕ್ಕಿಗೌಡರ ಸಮಾಜದ ೪—೫ ಪ್ರಾಯಸ್ಥ ಜನರು ಮಾರೀ ಬೇನೆಯಿಂದ ತೀರಿಕೊಂಡ ಸುದ್ದಿಯುಂಟು.

ಕಾರವಾರದ ವಕೀಲರಾದ ಶ್ರೀ ಭವಾನಿ ಶಂಕರ ಶಿವರಾವ ಮಾವಿನ ಕುರ್ವೆ ಇವರನ್ನು ಸರಕಾರಿ ವಕೀಲರನ್ನಾಗಿ ನೇಮಿಸಲಾಗಿದೆಂದು ತಿಳಿಯುತ್ತದೆ.

ಅಂತರರಾಷ್ಟ್ರೀಯ ವಿದ್ಯಾರ್ಥಿ ಮಂದಿರಗಳು

(೬ನೇ ಪುಟದಿಂದ)

ಉಳಿದ ವಿದ್ಯಾರ್ಥಿಗಳು ಈ ಮಂದಿರದ ಸದಸ್ಯರುಗಳಾಗಿ ನಿಲಯದ ಚಟುವಟಿಕೆಗಳಲ್ಲಿ ಭಾಗವಹಿಸಬಹುದು.

“ಕ್ಯಾಂಡಲ್ ಲೈಟ್ ಹಬ್ಬ” ವರ್ಷದ ಕೊನೆಯಲ್ಲಿ ವಿಜೃಂಭಣೆಯಿಂದ ಜರಗುವದು. ಈ ನಿಲಯಗಳ ವೈಶಿಷ್ಟ್ಯ ಇದು. ವರ್ಷದ ಕೊನೆಯ ಭಾನುವಾರದ ಭೋಜನದಲ್ಲಿ ನಡೆಯುತ್ತದೆ. ಊಟಕ್ಕೆ ಮೊದಲು ಮೇಜಿನ ಮೇಲೆ ಪ್ರತಿಯೊಬ್ಬ ವಿದ್ಯಾರ್ಥಿಗೂ ಕ್ಯಾಂಡಲ್ ಬತ್ತಿಯನ್ನು ಕೊಡುತ್ತಾರೆ. ಒಬ್ಬೊಬ್ಬರಾಗಿ ದೀಪಹಚ್ಚುತ್ತ ಬರಬೇಕು. ಮಂದಿರವೆಲ್ಲ ಬೆಳಕಾಗಿ ‘ದೀಪಾವಳಿ’ಯಾಗುತ್ತದೆ. ಆಗ ಪ್ರತಿಯೊಬ್ಬ ವಿದ್ಯಾರ್ಥಿಯೂ ಪ್ರಪಂಚದ ಶಾಂತಿಗೆ ಅನುಕೂಲವಾಗುವಂತೆ ತಮ್ಮ ತಮ್ಮ ದೇಶಗಳಲ್ಲಿ ಅಂತರ್ ರಾಷ್ಟ್ರೀಯ ಸ್ನೇಹ ಸೌಹಾರ್ದವನ್ನು ಬೀರುವ ಈ ನಿಲಯದ ತತ್ವವನ್ನು ಪ್ರತಿಪಾದಿಸುವುದಾಗಿ ಪ್ರತಿಜ್ಞೆಗೈಯುತ್ತಾನೆ.

“ದೀಪ ದೀಪವನ್ನು ಹೊತ್ತಿಸಿದಂತೆ ಪ್ರೀತಿ, ಸ್ನೇಹ, ಅನ್ಯೋನ್ಯತೆಗಳು ಒಬ್ಬರಿಂದೊಬ್ಬರಿಗೆ ಪ್ರವಹಿಸುತ್ತವೆ. ಆದಿತ್ಯವಾರದ ಸಂಜೆಯ ವಿಶೇಷ ಭೋಜನಕ್ಕೆ ಬಂದ ನಾವು ಈ ಪ್ರಕಾರ ಹೊತ್ತಿಸಲ್ಪಟ್ಟ ಸ್ನೇಹಜ್ಯೋತಿಯು ಎಂದೂ ನಂದದಂತೆ ನೋಡಿಕೊಳ್ಳಲು ಪ್ರತಿಜ್ಞಾಬದ್ಧರಾಗಿದ್ದೇವೆ.”

ಈ ನಿಲಯಗಳನ್ನು ನೋಡುತ್ತ ಭಾರತದ ಕಡೆ ಕಣ್ಣು ಹೊರಳಿಸಿದೆ. ನಮ್ಮಲ್ಲಿ ಇಂತಹ ನಿಲಯುಗಳು ಸಾಧ್ಯ. ಜಾತಿಯ ಜಗಳ ನಿರ್ಮೂಲವಾಗಬೇಕು. ಪರಸ್ಪರ ದ್ವೇಷವು ತೊಲಗಬೇಕು. ಮೊದಲು ರಾಷ್ಟ್ರೀಯ ನಿಲಯಗಳ ಸ್ಥಾಪನೆಯಾಗಬೇಕು. ನಂತರ ವಿಶ್ವ ನಿಲಯದ ಮಾತು.

ಸಾಕಷ್ಟು ಸ್ವಚ್ಛತೆ ಇಲ್ಲೆಂದು ಶಿವಮೊಗ್ಗೆಯ ೫—೫ ಹೋಟೆಲುಗಳನ್ನು ಪೂರ್ತಿ ಅಚ್ಚುಕಟ್ಟು ಮಾಡುವ ವರೆಗೂ ಮುಚ್ಚಲಾಗಿದೆ.

ರಶಿಯದಲ್ಲಿ [illegible] ಮಗ್ಗ

ಲೇ—ಶ್ರೀ ಎಂ. [illegible]

ಈಚೆಗೆ ಮಾಸ್ಕೋದಲ್ಲಿ ಪಠಿತ [illegible] ದಲ್ಲಿ ಕಳೆದ ೨ ವರ್ಷಗಳಲ್ಲಿ ೧೧,[illegible] ಸಂಶೋಧನೆಗಳೂ ಮತ್ತು [illegible] ವಿಧಾನಗಳೂ ಕಂಡು ಹಿಡಿಯಲ್ಪಟ್ಟ [illegible] ಫಲಿತಾಂಶಗಳನ್ನು ತೋರಗೆದ [illegible]. ಈ ಯೋಜನೆಯು ಜಾರಿಯಾಗಿ [illegible] ೨ ವರ್ಷ ನಡೆವದ್ದರ ಫಲ [illegible] ೧೧,೧೬೬ ಸಂಶೋಧನೆಗಳು ಪ್ರತ್ಯ [illegible] ಕಾರ್ಯ ಒಂದರಲ್ಲಿ [illegible].

ಹೊಸದಾಗಿ ಕಂಡು [illegible] ಮುಖ್ಯವಾದದ್ದು ಲಿಯೋನ್ ಜೀವ್ [illegible] ಇಂಜನಿಯರ್ ಕಂಡು ಹಿಡಿದ [illegible] ಯಿಲ್ಲದ ಮಗ್ಗ. ಈ ಮಗ್ಗಗಳ [illegible] ಟ್ಟಿನ ಗಿರಣಿಗಳಲ್ಲಿ ಹೂಡಿ [illegible] ಗಿದೆ. ೨೪ ಘಟಲುಳ್ಳ ಮಗ್ಗಗಳ [illegible] ೧೬ ಲಾಳಿಯಿಲ್ಲದ ಮಗ್ಗಗಳು [illegible] ಯಂತೆ.

ಸೋವಿಯಟ್ ರಶಿಯದ ಕೇಂದ್ರ ಹತ್ತಿ ಪರಿಶೋಧನಸಂಸ್ಥೆಯವರು ಹೊಸ ಹತ್ತಿ [illegible] ಯಂತ್ರವನ್ನು (“ಜಿನ್”) ಪ್ರದರ್ಶಿಸಿದರು. ವಿದ್ಯುಚ್ಛಕ್ತಿಯಿಂದ ನಿಮಿಷಕ್ಕೆ ೨೦೦೦ ಸಲ ತಿರುಗುವ ಯಂತ್ರವೇ ಇದಕ್ಕೆ ಆಧಾರ. ೧೦ ರಷ್ಟು ಕೆಲಸ ಮಾಡುವ ಕಡೆ ೧೫ [illegible] ರಷ್ಟು ಕೆಲಸ ಮಾಡಬಹುದು. ಮತ್ತು ಸೋಸನ್ನು [illegible] ಮಾಡುವ ಖರ್ಚು ಈ ಯಂತ್ರದ ಸಹಾಯದಿಂದ ಬಹಳ ಕಡಿಮೆಯಾಗುತ್ತದೆ. ಹಳೆಯ “ಜಿನ್ನಿ” ಗಿಂತ ಹೊಸ “ಜಿನ್ನು” ಆರುಪಟ್ಟು ಹೆಚ್ಚು ಕೆಲಸ ಮಾಡುವುದಂತೆ.

ನೂಲುವುದು, ಹುರಿ ಮಾಡುವುದು ಸುರುಳಿ ಮಾಡುವುದು ಮತ್ತು ಒಣಗಿಸುವುದು—ಈ ನಾಲ್ಕು ಭಾಗಗಳ ಕೆಲಸಗಳನ್ನು ಒಂದೇ ಯಂತ್ರವು ಮಾಡುವಂತೆ ಏರ್ಪಡಿಸಿರುವುದು ಮತ್ತೊಂದು ಮಾರ್ಪಾಡು; ಈ ಕೆಲಸಗಳಲ್ಲಿ ಒಂದೊಂದನ್ನು ಮಾಡಲೂ ಒಂದೊಂದು ಯಂತ್ರ ಬೇಕು; ಪ್ರತಿಯೊಂದೂ ಪ್ರತ್ಯೇಕವಾಗಿ ಕೆಲಸ ಮಾಡಬೇಕು. ಈಗ ಈ ಸಂಶೋಧನೆಯ ಫಲವಾಗಿ ಒಂದೇ ಯಂತ್ರದಿಂದ ನಡೆಯುವುದು.

ನೇಯುವಾಗ ಎಳೆ ಹರಿದರೆ ಈಗ ಮಗ್ಗದ ಮೇಲಿರುವ ನೇಕಾರನು ಯಂತ್ರವನ್ನು ನಿಲ್ಲಿಸಬೇಕು ಆದರೆ ಸೋವಿಯಟ್ಟಿನವರ ಹೊಸ ಶೋಧನೆಯಂತೆ ಎಳೆ ಹರಿದ ಕೂಡಲೆ ಮಗ್ಗ ತನ್ನಷ್ಟಕ್ಕೆ ತಾನೇ ನಿಲ್ಲುವಂತೆ ಮಾಡಲಾಗಿದೆ.

ಹೀಗೆಯೇ ಬಟ್ಟೆಯನ್ನು “ಪ್ರಿಂಟ್ ಬಣ್ಣ ಮಾಡುವ” ವಿಧಾನಗಳಲ್ಲೂ ಅನೇಕ ಹೊಸ ಮಾರ್ಪಾಡಾಗಿವೆ. ನಾಲ್ಕು ವಿಧದ ಬಣ್ಣಗಳನ್ನು ಒಂದೇ ಸಲ ಮಾಡುವುದಕ್ಕೆ ವ್ಯವಸ್ಥೆ ಮಾಡಿದೆ.


ಈ ಹೊಸ ಶೋಧನೆಗಳೆಲ್ಲ ಸೋವಿಯಟ್ ಮಿಲ್ಲುಗಳಲ್ಲಿ ಉಪಯೋಗಿಸಲ್ಪಟ್ಟವೆ.

ನಮ್ಮ ದೇಶದಲ್ಲಿ ಒಂದಾದರೂ ಸಂಶೋಧನೆ ಈ ಭಾಗದಲ್ಲಿ ಆಗಿದ್ದನ್ನು ನಾವು ಕೇಳಿಲ್ಲ. ಪರಕೀಯ ಆಡಳಿತದಲ್ಲಿ ಆಗಲು ಅವಕಾಶವಿರಲಿಲ್ಲವೇನೋ, ಸಂಶೋಧನೆಗೆ ಅವಕಾಶವೂ ಉತ್ತೇಜನವೂ ಇಲ್ಲಿಲ್ಲವೇನೋ? ಇನ್ನು ಮುಂದೆ ಸ್ವತಂತ್ರ ಭಾರತದಲ್ಲಾದರೂ ಹೆಚ್ಚು ಹೆಚ್ಚು ಸಂಶೋಧನೆಗೆ ಅವಕಾಶಗಳೊದಗಿ ಬಡವರು ಬಟ್ಟೆಯಿಲ್ಲದೆ ಬರಿ ಮೈಯಲ್ಲಿರುವುದನ್ನು ತಪ್ಪಿಸಲು ಸಾಧನವಾಗುವುದೇನೋ ನೋಡಬೇಕು.

ಗೊಡ್ಡು ಆಕಳುಗಳಿಂದ ಹಾಲು
ಪಶು ವೈದ್ಯರೊಬ್ಬರ ಶೋಧ

ಗೊಡ್ಡು ಆಕಳುಗಳಿಂದ ಹಾಲು [illegible] ಡಾ. ವಾಸುದೇವ ಮುದಲಿಯಾರರೆಂಬ [illegible] ಪಶು ವೈದ್ಯರು ನಡೆಸಿದ ಪ್ರಯೋಗವು [illegible] ಯಾಗಿದೆ. ಆರುವರ್ಷದ ಒಂದು [illegible] ದಿದ್ದರೂ ಈಗ [illegible] ಕೊಡುತ್ತಿದೆ.

ಡಾ. ಮುದಲಿಯಾರರು ಆರು [illegible] ಗೊಡ್ಡು ಆಕಳದ ಮೇಲೆ ಪ್ರಯೋಗ [illegible] ರಂಭಿಸಿದರು. [illegible] ತಿಂಗಳಲ್ಲಿ [illegible] ಕ್ಕೊಂದು ಇಂಜೆಕ್ಶನ್ ಕೊಟ್ಟರು [illegible] ಇಂಜೆಕ್ಶನ್ನನ್ನು ಪ್ರತಿ [illegible] [illegible] ಯಿತು.



ಮುಂಬಯಿ

ಕೊಲ್ಹಾಪುರದ ಅಧ್ಯಕ್ಷರು ಪ್ಯಾಲಾಚಸ್ಥರ ... ... ಆಳ್ವಿಕೆ ... ... ತಿಳಿದು ಬಂದಿದೆ.

... ಮುಂಬಯಿ ದ್ವಿಭಾಷಾ ಪ್ರಾಂತದ ... ಸಂಪಾದಕರಾದ ಶ್ರೀ ಜಿ. ವಿ. ... ... ಸಂಪಾದಕತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ ಶ್ರೀ ಗೋಖಲೆಯವರು ಆಡಳಿತ ... ... ಸಂಬಂಧ ಪಟ್ಟಿದ್ದಾರೆ.

ಕೊಲ್ಹಾಪುರ ನಗರದಲ್ಲಿ ಅಗಸ್ಟ ೧ ರ ರಾತ್ರಿ ಸಾಂಪ್ರದಾಯಿಕ ಗಲಭೆಯುಂಟಾಗಿ ಇಲ್ಲಿಯ ವರೆಗೆ ೧೫ ... ... ನಗರದಲ್ಲಿ ಶಾಂತತೆ ನೆಲಸಿದೆಯೆಂದೂ ತಿಳಿದು ಬಂದಿದೆ.

ಅಧಿಕಾರವಾಣಿಗೆ ಅನುಸಾರ ವೃತ್ತಗಳನ್ನು ಕಳಿಸಿ ... ... ಹಿಂದೀ ಚಲನ ಚಿತ್ರ ಉತ್ಪಾದಕ ಸಂಘದವರು ನಿರ್ಧರಿಸಿದ್ದಾರೆ. ಇಲ್ಲಿಯ ವೃತ್ತಗಳನ್ನು ಚಿತ್ರಿಸಲು ಈಗಾಗಲೇ ಅವರಿಗೆ ಅನುಕೂಲ ಮಾಡಿಕೊಡಲಾಗುವುದು. ಮುಂಬಯಿ ಸರ್ಕಾರ ಅವರಿಗೆ ಅನುಕೂಲ ಮಾಡಿಕೊಡಲಾಗುವುದು.

ಸತ್ಯಾಗ್ರಹ ಹೋರಾಟ ಪ್ರಾರಂಭವಾಗುವ ... ... ಶ್ರೀಮಂತ ದಿಗ್ವಿಜಯ ... ... ಎಲ್ಲ ಮುಖ ಸಭೆಯ ಕಾರ್ಯಕರ್ತರನ್ನು ಸೆರೆಹಿಡಿದದ್ದ ಕ್ಕಾಗಿ ಅ. ಭಾ. ಹಿಂದು ಮಹಾಸಭೆಯ ಕಾರ್ಯದರ್ಶಿಗಳಾಗಿದ್ದ ಶ್ರೀ ವಿ. ಜಿ. ದೇಶಪಾಂಡೆಯವರು ಅಗಸ್ಟ ೩ ರಲ್ಲಿ ಸಂಯುಕ್ತ ಪ್ರಾಂತ ಸರಕಾರವನ್ನು ಖಂಡಿಸಿದರು.

ಕೊಂಕಣ, ಅಗ್ರಿಪಾಡ, ನಾಗಪಾಡ ಹಾಗೂ ಮಾಹೀಮ ಭಾಗಗಳಲ್ಲಿ ತಾ. ೩ ರ ರಲ್ಲಿ ೧೦ ಇರಿತಗಳು ಸಂಭವಿಸಿ ಒಬ್ಬನು ಸತ್ತಿದ್ದು ಕೋಂಗ್ರೆಸ್ಸಿನ ... ... ಗಾಯಗೊಂಡಿದ್ದಾರೆ. ... ಸಂಬಂಧದಲ್ಲಿ ೩೬ ಜನರನ್ನು ಬಂಧಿಸಲಾಗಿದೆ.

ಅಗಸ್ಟ ೧ ನೆಯ ತಾರೀಕಿನಿಂದ ಮುಂಬಯಿ ಪ್ರಾಂತಕ್ಕಾಗಿ ಪ್ರತ್ಯೇಕ ಪಬ್ಲಿಕ್ ಸರ್ವಿಸ ಕಮಿಶನ್ ಘಟಿಸಲ್ಪಟ್ಟಿದೆ. ಅದಕ್ಕೆ ಪ್ರೊ. ಡಿ. ಗೋಡಬೋಲೆಯವರು ಅಧ್ಯಕ್ಷರಾಗಿದ್ದಾರೆ.

ಮದ್ರಾಸ

ಭಾರತದಲ್ಲಿ ಶಿಕ್ಷೆ ಪ್ರದರ್ಶಿಸುವ ಪ್ರತಿಜ್ಞೆಯನ್ನು ಮದ್ರಾಸ ಗವರ್ನರರು, ಮುಖ್ಯ ಮಂತ್ರಿಗಳು ಹಾಗೂ ಇತರ ಮಂತ್ರಿ ವರ್ಗದವರು ಅಗಸ್ಟ ೧೫ ಕ್ಕೆ ಸ್ವೀಕರಿಸುವರೆಂದು ಶ್ರೀ ಓಮಂಡೂರು ರಾಮಸ್ವಾಮಿ ರೆಡ್ಡಿಯಾರರು ಒಂದು ಸಂದರ್ಶನದಲ್ಲಿ ತಿಳಿಸಿದರು.

ಮಲೆಯಾಳದ ಕಮ್ಯುನಿಸ್ಟ ದಿನಪತ್ರಿಕೆಯಾದ 'ದೇಶಾಭಿಮಾನಿ' ಯ ಮುದ್ರಣಕ್ಕೆ ಮದ್ರಾಸು ಸರಕಾರವು ೧೦ ಸಾವಿರ ರೂಪಾಯಿಗಳ ಜಾಮೀನು ಕೇಳಿದೆ.

ಡಿ. ಸಿ. ಎಮ್. ವರ್ಗದ ೬–೭ ಮುಸಲ್ಮಾನರು ಪಾಕಿಸ್ತಾನ ಸರಕಾರದ ಕಡೆಗೆ ಹೋಗಲು ಇಚ್ಛೆ ಪ್ರದರ್ಶಿಸಿದ್ದರಿಂದ ಅವರನ್ನು ಶೀಘ್ರವಾಗಿ ಮುಕ್ತಗೊಳಿಸಲಾಗುವುದೆಂದು ತಿಳಿದು ಬಂದಿದೆ. ಅದರಂತೆ ಮದ್ರಾಸ ಹೈಕೋರ್ಟಿನ ಇಬ್ಬರು ಮುಸಲ್ಮಾನ ನ್ಯಾಯಮೂರ್ತಿಗಳಲ್ಲಿ ಒಬ್ಬರು ಪಾಕಿಸ್ತಾನಕ್ಕೆ ಹೋಗುವುದಾಗಿ ತಿಳಿಸಿದ್ದಾರೆ.

ಭಾರತ ಸಾಮಂತ ಸರಕಾರದ ಮಂತ್ರಿಮಂಡಲದಲ್ಲಿ ಶ್ರೀ ಆರ್. ಕೆ. ಷಣ್ಮುಖಂ ಚೆಟ್ಟಿಯಾರರು ಅರ್ಥಮಂತ್ರಿ ಪದವನ್ನು ಸ್ವೀಕರಿಸುವರೆಂದು ತಿಳಿದು ಬಂದಿದೆ. ಈ ಪದವನ್ನು ಸ್ವೀಕರಿಸುವ ವಿಚಾರವನ್ನು ಮದ್ರಾಸ ಗವರ್ನರರ ಮುಖಾಂತರ ಚೆಟ್ಟಿಯಾರರ ಮುಂದಿಡಲಾಗಿತ್ತೆಂದು ತಿಳಿದಿದೆ.

ಯುಕ್ತಪ್ರಾಂತ

೧೦೦ ಜನ ಕೈದಿಗಳನ್ನು ಬಿಡುಗಡೆ ಮಾಡಲಿಕ್ಕಾಗಿ ಅಗಸ್ಟ ೩ ರಲ್ಲಿ ೧೨ ಜನರ ತಂಡವು ನೆರೆದಿದೆ. ಇವರಲ್ಲಿ ... ಬಾಬಾ ಉಮಾರ ಸಿಂಗರು ಹಾಗೂ ಮೇರಠದ ... ... ಇರುವರು.

ಸ್ವಾತಂತ್ರ್ಯದ ಕಹುಮೈರಿಗಳಾದ ಹಿಂದು ... ... ಕೇಳಿದರು.

ಹೊಸದಿಲ್ಲಿ

ಸ್ವಾತಂತ್ರ್ಯೋತ್ಸವ ವಿಶೇಷ ಸಂಚಿಕೆ ಹೊರಡಿಸಲು ಅನುಕೂಲ ಮಾಡಿಕೊಡುವುದಕ್ಕೆ ಸಾಧಿಲಿಸಲಾದ ವೃತ್ತಪತ್ರ ನಿಯಂತ್ರಣ ಕಾನೂನು ಸಾಪ್ತಾಹಿಕಗಳಿಗೆ ಮತ್ತು ಅರ್ಧ ಸಾಪ್ತಾಹಿಕ ಉಪಯೋಗಕ್ಕೆ ಅನ್ವಯಿಸುವುದಿಲ್ಲೆಂದು ತಿಳಿದು ಬಂದಿದೆ.

ಕಾಂಗ್ರೆಸ್ಸಿನ ಭಾವೀಧೋರಣದ ಬಗ್ಗೆ ಅದರ ಪ್ರಧಾನ ಕಾರ್ಯದರ್ಶಿ ಶ್ರೀ ಶಂಕರರಾವ ದೇವರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ತಾವು ಸಂಪೂರ್ಣವಾಗಿ ಸ್ವಾಗತಿಸುವುದಾಗಿಯೂ ದೇಶದಲ್ಲಿ ಸಾಮ್ಯವಾದವನ್ನು ಸ್ಥಾಪಿಸಲು ಕಾಂಗ್ರೆಸ್ಸು ಯೋಗ್ಯವಾದ ಸಂಸ್ಥೆಯಾಗುವಂತೆ ಪ್ರಯತ್ನಿಸುವುದಾಗಿಯೂ ಶ್ರೀ ಜಯಪ್ರಕಾಶ ನಾರಾಯಣರು ಒಂದು ಪ್ರಕಟನೆ ಹೊರಡಿಸಿದ್ದಾರೆ.

ಅಗಸ್ಟ ೧೫ ಕ್ಕೆ ಅಧಿಕಾರ ವರ್ಗೀಕರಣವಾದ ನಂತರ ವೈಸರಾಯಭವನಕ್ಕೆ ಸರಕಾರೀ ಭವನವೆಂದು ನಾಮಕರಣ ಮಾಡಲಾಗುವುದೆಂದು ತಿಳಿದು ಬರುತ್ತದೆ.

೧೯೪೨ ರ ಅಗಸ್ಟ ೯ ರಿಂದ ಭೂಗತರಾಗಿದ್ದ ಕೊಲ್ಹಾಪುರ ಸಂಸ್ಥಾನದ ವೀರ ರತ್ನಪ್ಪ ಕುಂಭಾರರು ತಾ. ೨ ರಲ್ಲಿ ಹೊಸದಿಲ್ಲಿಯಲ್ಲಿ ಪ್ರಕಟವಾಗಿ ಅ. ಭಾ. ಸಂಸ್ಥಾನೀ ಪ್ರಜಾ ಪರಿಷತ್ತಿನ ಅಧ್ಯಕ್ಷರಾದ ಡಾ. ಪಟ್ಟಾಭಿಯವರನ್ನು ಭೆಟ್ಟಿಯಾದರು.

ಸಾರ್ವಭೌಮ ಹಿಂದೀ ವಿಮಾನ ದಲದ ೧೦ ತಂಡಗಳಲ್ಲಿ ಹಿಂದುಸ್ಥಾನಕ್ಕೆ ೮ ಹಾಗೂ ಪಾಕಿಸ್ತಾನಕ್ಕೆ ೨ ತಂಡಗಳು ಕೊಡಲ್ಪಡುವುವೆಂದು ವಿಶ್ವಸನೀಯವಾಗಿ ತಿಳಿಯುತ್ತದೆ.

ಬಂಗಾಲ

ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರನ್ನು ಪಶ್ಚಿಮ ಬಂಗಾಲದ ಗವರ್ನರರನ್ನಾಗಿ ನೇಮಿಸುವುದೆಂದರೆ ಪಶ್ಚಿಮ ಬಂಗಾಲದ ಅಪಮಾನ ಮಾಡಿದಂತೆಯೇ ಸರಿ ಎಂದು ಶ್ರೀ ಶರತ್ಚಂದ್ರ ಬೋಸರು ಅಗಸ್ಟ ೫ ರಲ್ಲಿ ತಾವು ಹೊರಡಿಸಿದ ಪ್ರಕಟನೆಯಲ್ಲಿ ಹೇಳಿದ್ದಾರೆ.

ಕಲಕತ್ತಾ ಕಾರ್ಪೋರೇಶನ್ನು ಅಗಸ್ಟ ೧೫ ಮತ್ತು ೧೬ ನ್ನು ಪೂರ್ಣ ಸ್ವಾತಂತ್ರ್ಯ ಸಿಗುವವರೆಗೆ ವಾರ್ಷಿಕ ಹಬ್ಬವೆಂದು ಆಚರಿಸಬೇಕೆಂದೂ ಆ ಸಂದರ್ಭದಲ್ಲಿ ಬ್ರಿಟಿಶರ ಹೆಸರಿದ್ದ ಕೋಟೆ ಮತ್ತು ಬೀದಿಗಳಿಗೆ ರಾಷ್ಟ್ರೀಯ ಮುಂದಾಳುಗಳ ಹೆಸರನ್ನಿಡಬೇಕೆಂದೂ ತೀರ್ಮಾನಿಸಿತು. ಅದರಿಂದ ಹ್ಯಾರಿಸನ್ ಮತ್ತು ಕ್ಲೈವ ಬೀದಿಗಳಿಗೆ ಸುಭಾಸ ಬೀದಿ ಎಂದು ಹೊಸ ನಾಮಕರಣ ಮಾಡಲಾಗುವುದು.

ಮಿದನಾಪುರ ಜಿಲ್ಲೆಯ ಖರಗಪುರ ಹಾಗೂ ಸುತ್ತಲಿನ ಭಾಗಗಳಲ್ಲಾದ ಗಲಭೆಗಳಲ್ಲಿ ೨೪ ಜನರು ಮರಣಹೊಂದಿ ೧೦೯ ಜನರು ಗಾಯಗೊಂಡಿರುವರೆಂದು ತಿಳಿಯುತ್ತದೆ. ೨೦೦ ಕ್ಕಿಂತ ಹೆಚ್ಚು ಗುಡಿಸಲುಗಳು ಬೆಂಕಿಗಾಹುತಿಯಾಗಿ ಸುಮಾರು ೩೫ ಲಕ್ಷ ರೂಪಾಯಿ ಹಾನಿಯಾಗಿರುವುದು. ಸರಕಾರದವರು ಈ ವರೆಗೆ ೪೯ ಸಾವಿರ ರೂಪಾಯಿಗಳನ್ನು ಪರಿಹಾರಕ್ಕಾಗಿ ಹಂಚಿರುವರು.

ಅಗಸ್ಟ ೫ ರಲ್ಲಿ ಗಡಿ ಸಮಿತಿಯು ಸಿಲ್ಹೆಟಿನ ವಿಭಜನೆಯ ಬಗ್ಗೆ ಅಸಾಮು ಸರಕಾರದ ಹೇಳಿಕೆಯನ್ನು ಕೇಳಿಕೊಂಡಿತು. ಆ ಮೇಲೆ ಅಸಾಮು ಪ್ರಾಂತದ ಕಾಂಗ್ರೆಸ ಸಮಿತಿ, ಹಿಂದುಮಹಾಸಭೆ, ಸಿಲ್ಹೆಟ ವಿಭಜನಾ ಸಮಿತಿ ಇವುಗಳ ಹೇಳಿಕೆಗಳನ್ನೂ ಕೇಳಿಕೊಳ್ಳಲಾಯಿತು. ಅಸಾಮು ಸರಕಾರದ ಪರವಾಗಿ ಶ್ರೀ ಅತುಲಚಂದ್ರ ಚಕ್ರವರ್ತಿ ಮತ್ತು ಹೋಲಿಸ ೩ ಸಮಿತಿಗಳ ಪರವಾಗಿ ಶ್ರೀ ಎಸ್. ಸಿ. ಚಕ್ರವರ್ತಿಯವರೂ ಹಾಜರಿದ್ದರು.

ತಾ. ೧ ರಲ್ಲಿ ಕಲಕತ್ತೆಯಲ್ಲಿ ನೆರೆದ ಮುಸಲ್ಮಾನರ ಸಭೆಯಲ್ಲಿ ಪಶ್ಚಿಮ ಬಂಗಾಲದ ಮುಸಲ್ಮಾನರು ಪಾಕಿಸ್ತಾನದ ಮೇಲೆ ಯಾವತ್ತ ಹೂಡಿದ ಕೈಯನ್ನು ತೆಗೆದು ಹಿಂದುಸ್ಥಾನ ಸರಕಾರವು ಭಕ್ತಿ ತೋರಬೇಕೆಂದು ಒಂದು ಠರಾವು ಪಾಸಾಗಿ ಅದನ್ನು ಅಧಿಕಾರಿಗಳಿಗೆ ಕಳಿಸಲಾಯಿತು.

ಸಿಂಧ

ವ್ಯಾಪಾರೋದ್ಯೋಗಕ್ಕಾಗಿ ಬಹಳ ದಿನಗಳಿಂದ ಫಿಲಿಪೈನ್ಸಿನಲ್ಲಿದ್ದ ಅನೇಕ ಸಿಂಧೀಯರು ಪಾಕಿಸ್ತಾನ ನಿರ್ಮಾಣದಿಂದ ಬಹಳ ವ್ಯಥೆಗೊಂಡಿದ್ದಾರೆ. ಪಾಕಿಸ್ತಾನಕ್ಕೆ ಬರುವುದಕ್ಕಿಂತ ಅಲ್ಲಿಯೇ ಫಿಲಿಪೈನ್ಸ ನಾಗರಿಕರಾಗಿ ಉಳಿಯುವುದು ಲೇಸೆಂಬ ಇಚ್ಛೆಯನ್ನು ಅವರು ವ್ಯಕ್ತಮಾಡಿದ್ದಾರೆ.

ಜಕೋಬಾಬಾದ ಜಿಲ್ಲೆಯ ಮೂವರು ಕಾಂಗ್ರೆಸ್ ಮುಖಂಡರು ಸಿಂಧ ಗಡಿ ಕಾಯದೆಯನ್ವಯ ಬಂಧಿಸಲ್ಪಟ್ಟಿದ್ದಾರೆ. ಹಾಗೂ ಅವರ ಸದ್ವರ್ತನೆಯ ಬಗ್ಗೆ ಜಿಲ್ಲೆಯ ಡೆಪ್ಯುಟಿ ಕಮಿಶನರು ಜಾಮೀನು ಬೇಡಿದ್ದಾರೆ.

ಪಾಕಿಸ್ತಾನ ಗವರ್ನರ ಜನರಲ್ಲರಾದ ಬ್ಯಾ. ಜಿನ್ನಾರ ಪ್ರತಿಜ್ಞಾ ವಿಧಿಯು ಅಗಸ್ಟ ೧೫ ರ ಮುಂಜಾನೆ ೯ ಗಂಟೆಗೆ ಕರಾಚಿ ಸರಕಾರೀ ಭವನದಲ್ಲಿ ನಡೆಯುವುದೆಂದೂ ಆ ಬಳಿಕ ಪಾಕಿಸ್ತಾನ ಸಾಮಂತ ಸರಕಾರದ ಮುಖ್ಯ ಮಂತ್ರಿಗಳಾದ ಶ್ರೀ ಲಿಯಾಕತ ಅಲ್ಲಿಖಾನರೂ ಇತರ ಮಂತ್ರಿಗಳೂ ಬ್ಯಾ. ಜಿನ್ನಾರ ನೇತೃತ್ವದಲ್ಲಿ ಪ್ರತಿಜ್ಞಾ ವಿಧಿಯನ್ನು ನೆರವೇರಿಸುವರೆಂದೂ ತಿಳಿಯುತ್ತದೆ.

ಕರಾಚಿ ನಗರ ಸಭೆಯವರು ಪಟ್ಟಣದಲ್ಲಿಯ ಅನೇಕ ಕುಟುಂಬಗಳ ನಾಶಕ್ಕೆ ಕಾರಣವಾದ ಕುದುರೆ ಜೂಜನ್ನು ಕೂಡಲೇ ನಿಲ್ಲಿಸಬೇಕೆಂದು ಸಿಂಧ ಸರಕಾರವನ್ನು ಒತ್ತಾಯಪಡಿಸುವ ಠರಾವನ್ನು ಪಾಸುಮಾಡಿರುತ್ತಾರೆ.

ಸಿಂಧದ ಅಂಚೆ ಮತ್ತು ತಂತಿ ಖಾತೆಗೆ ಒಟ್ಟು ೩೦೦ ಹೊಸ ನವಕರರನ್ನು ಭರತಿ ಮಾಡಲಾಗಿದೆ. ಇವರಲ್ಲಿ ಎಲ್ಲರೂ ಮುಸಲ್ಮಾನರಿದ್ದು ಒಬ್ಬ ಹಿಂದುವೂ ಕಾಣಲಾರನು. ಬಿಹಾರ ಪಂಜಾಬ, ಸಂಯುಕ್ತಪ್ರಾಂತ ಮತ್ತು ಬಂಗಾಲ ದಿಂದಲೇ ಭರತಿ ಮಾಡಿಕೊಂಡು ಸಿಂಧೀ ಮುಸಲ್ಮಾನರನ್ನು ಬಿಟ್ಟದ್ದು ಅವರ ಅಸಮಾಧಾನಕ್ಕೆ ಕಾರಣವಾಗಿದೆಯೆಂದು ತಿಳಿದು ಬರುತ್ತದೆ.

ಸಿಂಧ ಮುಖ್ಯ ಮಂತ್ರಿ ಶೇಖ ಗುಲಾಮ ಹುಸೇನರು ಪ್ರಾಂತದ ಗವರ್ನರರಾದ ಬಳಿಕ ಅಗಸ್ಟ ಮಧ್ಯದಲ್ಲಿ ಸಿಂಧ ಶಾಸನ ಸಭೆಯಲ್ಲಿ ತೆರವಾಗಲಿರುವ ಅವರ ಸ್ಥಳಕ್ಕಾಗಿ ನಡೆವ ಚುನಾವಣೆಯಲ್ಲಿ ಸರ್ವ ಸಿಂಧ ಹಿಂದು ಪಂಚಾಯತ ಅಧ್ಯಕ್ಷರಾದ ಮುಖಿ ಗೋವಿಂದರಾಮ ಮತ್ತು ರಾಷ್ಟ್ರೀಯ ಮುಸ್ಲಿಂ ಪಕ್ಷಕೋದ್ಯಮಿಯಾದ ಪೀರ್. ಅಲಿ. ಮಹಮ್ಮದ್ ರಾಶ್ದಿಯವರು ಉಮೇದುವಾರರಾಗಿ ನಿಲ್ಲುವರೆಂದು ತಿಳಿದು ಬರುತ್ತದೆ.

"ಕಾಂಗ್ರೆಸ್ಸು ಅಖಂಡಭಾರತದ ಧ್ಯೇಯಕ್ಕಾಗಿ ಶಾಂತರೀತಿಯಿಂದ ಹೆಣಗುವುದು. ಭಾರತದ ಈ ವಿಭಕ್ತ ಪ್ರದೇಶಗಳೆರಡೂ ಒಂದುಗೂಡಿದ ಹೊರತು ದೇಶದಲ್ಲಿ ಶಾಂತಿಯಾಗಲಿ ಅಭಿವೃದ್ಧಿಯಾಗಲಿ ಕಂಡುಬರದು" ಎಂದು ರಾಷ್ಟ್ರಪತಿ ಕೃಪಲಾನಿಯವರು ತಾ. ೩ ರಲ್ಲಿ ಕರಾಚಿಯಲ್ಲಿ ನೆರೆದ ಸುದ್ದಿಗಾರರ ಸಭೆಯಲ್ಲಿ ಹೇಳಿದರು.

ತಿರುವಾಂಕೋರು ಸಂಸ್ಥಾನದ ಬೇರೆ ಬೇರೆ ಕಡೆಯಲ್ಲಿ ಪ್ರಜಾದಿನಾಚರಣೆಯಾಯಿತು. ಆ ಸಂದರ್ಭದಲ್ಲಿ ಯಾವ ದುರ್ಘಟನೆಯೂ ಸಂಭವಿಸಿಲ್ಲ.

ಪಂಜಾಬ

ಪಂಜಾಬಿನ ೧೨ ವಿವಾದಾಸ್ಪದ ಜಿಲ್ಲೆಗಳಲ್ಲಿ ಶಾಂತಿರಕ್ಷಣೆಗೆಂದು ಎರಡೂ ಸಾಮಂತ ರಾಜ್ಯಗಳ ಒಪ್ಪಿಗೆಯಿಂದ ಒಂದು ತಟಸ್ಥ ಸೈನ್ಯವಿಡಲಾಗಿದೆ. ಈ ಸೈನ್ಯಕ್ಕೆ ಪಂಜಾಬ ಗಡಿ ಸೈನ್ಯವೆಂದು ಹೆಸರು ಕೊಡಲಾಗಿದೆ.

ಲುಧಿಯಾನಾದಿಂದ ೨೫ ಮೈಲುಗಳ ದೂರದಲ್ಲಿದ್ದ ಜರಾಲಾ ಎಂಬ ಹಳ್ಳಿಯನ್ನು ಸಶಸ್ತ್ರ ಗುಂಡರು ಮುತ್ತಿ ೧೩ ಜನರನ್ನು ಕೊಂದು ೯ ಜನರನ್ನು ಗಾಯಗೊಳಿಸಿದರು. ಜಿಲ್ಲಾ ಮ್ಯಾಜಿಸ್ಟ್ರೇಟರು ಮತ್ತು ಪೋಲೀಸ ಸೂಪರಿಂಟೆಂಡೆಂಟರು ಕೂಡಲೆ ಆ ಹಳ್ಳಿಗೆ ಹೋಗಿ ಪರಿಸ್ಥಿತಿಯನ್ನು ಹಿಡಿತದಲ್ಲಿ ತಂದರು.

ಪಂಜಾಬ ಗವರ್ನರರು ತಮ್ಮ ಅಧಿಕಾರದಲ್ಲಿ ಸ್ಥಾವರ ಆಸ್ತಿ ವರ್ಗಪಡಿಸಿಕೊಳ್ಳುವ ಬಗ್ಗೆ, ಆಕ್ರಮಣ ಬಗ್ಗೆ, ವಿಶೇಷ ನ್ಯಾಯಾಲಯಗಳ ಬಗ್ಗೆ ಮತ್ತು ಪಂಜಾಬ ದಂಗೆ ಪ್ರದೇಶಗಳ ಬಗ್ಗೆ— ಈ ಪ್ರಕಾರ ನಾಲ್ಕು ಕಾಯದೆಗಳನ್ನು ಹೊಸದಾಗಿ ರಚಿಸಿದ್ದಾರೆ.

ನಾರ್ಥ ವೆಸ್ಟರ್ನ್ ರೇಲ್ವೆಯಲ್ಲಿ ಕೆಲಸ ಮಾಡುವ ೨/೬ ಭಾಗ ಎಂದರೆ ೩೫೦೦೦ ಮುಸ್ಲಿಮೇತರ ನೌಕರರು ತಮ್ಮನ್ನು ಪೂರ್ವ ಪಂಜಾಬ ರೇಲ್ವೆಗೆ ವರ್ಗಾಯಿಸಬೇಕೆಂದು ಕೇಳಿಕೊಂಡಿದ್ದಾರೆ. ಸೂರಕ್ಕೆ ಒಬ್ಬರಂತೆ ಮುಸ್ಲಿಮೇತರರು ಅಲ್ಲಿಯೇ ಉಳಿಯಲು ನಿಶ್ಚಯಿಸಿದ್ದಾರೆ. ಯುರೋಪಿಯನ್ ಅಧಿಕಾರಿಗಳನ್ನೂ ಹಾಗೆಯೇ ಉಳಿಸಿಕೊಳ್ಳಲಾಗುವುದು.

ಆಸಾಮ

ಶಿವರಾತ್ರಿಯಲ್ಲಿ ಅಸಂಖ್ಯ ಭಕ್ತಜನರಿಂದ ಪೂಜಿಸಲ್ಪಡುವ ಶಿವಸಾಗರದ ಅಹೋಂ ಅರಸರ ಕಾಲದ ಸುಂದರ ಶಿವಮಂದಿರದ ಬಂಗಾರದ ಗುಮ್ಮಟವು ಭೂಕಂಪದಿಂದ ಕಳಚಿಬಿದ್ದದ್ದು ಅದನ್ನು ಈಗ ಗುಡಿಯ ಹೊರಭಾಗದಲ್ಲಿಡಲಾಗಿದೆ.

ಪಾಕಿಸ್ತಾನ ಘಟನಾಸಮಿತಿಗೆ ಅಸಾಮು ಶಾಸನ ಸಭೆಯ ಲೀಗು ಗುಂಪಿನ ಸದಸ್ಯರ ಪೈಕಿ ಅಬ್ದುಲ ಹಮೀದ ಮತ್ತು ಚೌಧರಿಯವರು ಮುಸಲ್ಮಾನರ ೨ ಸ್ಥಳಗಳಿಗೂ ಶ್ರೀ ಅಕ್ಷಯಕುಮಾರದಾಸರು ಒಂದು ಸಾಮಾನ್ಯ ಸ್ಥಳಕ್ಕೂ ಆರಿಸಲ್ಪಟ್ಟಿದ್ದಾರೆ.

ಹಿಂದೀಸಂಸ್ಥಾನ

ಹಿಂದೀ ಒಕ್ಕೂಟದಲ್ಲಿ ಸೇರದಂತೆ ಇಂದೂರು ಮಹಾರಾಜರಿಗೆ ತಾವು ಲಂಡನ್ನಿನಲ್ಲಿ ಸಲಹೆ ಕೊಟ್ಟರುವುದಾಗಿ ಹಿಂದುಸ್ಥಾನದಲ್ಲಿ ಹಬ್ಬಿದ ಸುದ್ದಿ ನಿರಾಧಾರವಾದುದೆಂದು ಡಾ. ಜಯಕರರು ಪ್ರಕಟಿಸಿರುತ್ತಾರೆ.

ಖಾಸಗಿ ಸಂಸ್ಥೆಗಳು ನಿರ್ಮಿಸುವ ಸೈನ್ಯ ಇಲ್ಲವೆ ಸಶಸ್ತ್ರ ಕವಾಯತುಗಳ ಮೇಲೆ ನಿರ್ಬಂಧ ಹಾಕುವ ಆಜ್ಞೆಯನ್ನು ಅಗಸ್ಟ ೪ ರಲ್ಲಿ ನಿಜಾಮು ಸರಕಾರ ಹೊರಡಿಸಿತು.

ಪುಣೆಯ ಫರ್ಗುಸನ್ ಕಾಲೇಜಿನ ಪ್ರಿನ್ಸಿಪಾಲರಾದ ಡಾ. ಜಿ. ಎಸ್. ಮಹಾಜನಿಯವರು ೩ ವರ್ಷಗಳ ಮಟ್ಟಿಗೆ ರಜಪುತಾನ ವಿಶ್ವವಿದ್ಯಾಲಯದ ವೈಸ ಛಾನ್ಸಲರರಾಗಿ ನೇಮಿಸಲ್ಪಟ್ಟಿರುವರೆಂದು ಜಯಪುರ ಸಂಸ್ಥಾನ ಪ್ರಕಟನಾಧಿಕಾರಿಗಳು ತಿಳಿಸುತ್ತಾರೆ. ಡಾ. ಮಹಾಜನಿಯವರು ನವೆಂಬರ ೧ ಕ್ಕೆ ಅಧಿಕಾರ ವಹಿಸುವರು.

ಮಹಾತ್ಮಾ ಗಾಂಧಿಯವರ ದರ್ಶನಕ್ಕಾಗಿ ಕಾಶ್ಮೀರ ರಾಷ್ಟ್ರೀಯ ಪರಿಷತ್ತಿನ ಕಾರ್ಯಕರ್ತರು ತಂಡ ತಂಡಗಳಲ್ಲಿ ತಾ. ೨ ರ ಬೆಳಗಿನ ಜಾವದಿಂದ ಅವರು ಇಳಿದುಕೊಂಡಿರುವ ನೇಕ ಕಿಶೋರಿಲಾಲರ ಬಂಗಲೆಗೆ ಬರುತ್ತಿದ್ದಾರೆ.

ಹೈದರಾಬಾದ ಸರಕಾರದವರು ಹೈದರಾಬಾದ ಸಂರಕ್ಷಣ ಕಾನೂನಿನ ಮೇರೆಗೆ ಹೈದರಾಬಾದ ಕಾಂಗ್ರೆಸ್ಸಿನ ಪ್ರಮುಖರಾದ ಪಂಡಿತ ನರೇಂದ್ರಜಿ ಮತ್ತು ಮೂವರು ಆರ್ಯಸಮಾಜದ ಕಾರ್ಯಕರ್ತರನ್ನು ಜುಲೈ ೩೦ ರ ಸಾಯಂಕಾಲ ಸೆರೆ ಹಿಡಿದರು.

ನಾಲ್ಕು ಮಾತು — ರಂಗನಾಥ ದಿವಾಕರ

ಆಗಸ್ಟ ೧೫

ಇಡೀ ಹಿಂದುಸ್ತಾನದಲ್ಲಿ, ಪಾಕಿಸ್ತಾನವನ್ನೊಳಗೊಂಡ ಅಖಂಡ ಹಿಂದುಸ್ತಾನದಲ್ಲಿ ಅಗಸ್ಟ ೧೫ನೆ ದಿನಾಂಕವು ಸ್ವಾತಂತ್ರ್ಯ ದಿನವೆಂದು ಆಚರಿಸಲಾಗುವದು. ಈ ಸಮಾರಂಭಕ್ಕೆ ಅಲ್ಲಲ್ಲಿ ಬೇರೆ ಬೇರೆ ಸ್ವರೂಪವು ಬರುವದು ಸ್ವಾಭಾವಿಕವು. ಇಡೀ ಸರಕಾರವೆ ಆಸೇತುಹಿಮಾಚಲ ಈ ಸಮಾರಂಭವನ್ನು ಸಾರಿದ್ದರಿಂದ ಅದಕ್ಕೆ ಅನೇಕ ಕಡೆಗೆ ಕೇವಲ 'ಸರಕಾರಿ' ಸ್ವರೂಪವು ಬರುವ ಸಂಭವವೂ ಇದೆ. ಸರಕಾರಿ ಸ್ವರೂಪ ಅಂದರೆ ನಿರ್ಜೀವ ಯಾಂತ್ರಿಕ ಸ್ವರೂಪ, ಅದರಲ್ಲಿ ಅಂತಃಕರಣದ ಊಟೆ ಇಲ್ಲದ ಸ್ವರೂಪ. ಗವರ್ನರರು ಹುಕುಮು ಕೊಟ್ಟಿರುವರೆಂದು ಕಲೆಕ್ಟರರು ಮಾಡುವದು, ಕಲೆಕ್ಟರರು ಹೇಳಿದರೆಂದು ಮಾಮಲೇದಾರರು ಮಾಡುವದು, ಮಾಮಲೇದಾರರು ಸಿಟ್ಟಿಗೇಳಬಹುದೆಂದು ಗೌಡಕುಲಕರ್ಣಿಯವರು ಓಡಾಡುವದು, ಇದು 'ಸರಕಾರಿ' ಸಮಾರಂಭಗಳ ರೀತಿ! ಹಾಗೆ ಕನಿಷ್ಟ ಈ ಸಮಾರಂಭದ ವಿಷಯದಲ್ಲಿಯಂತೂ ಆಗದಂತೆ ನೋಡಿಕೊಳ್ಳುವದು ಪ್ರತಿಯೊಬ್ಬ ಕಾಂಗ್ರೆಸ್ ಭಕ್ತನ ಹಾಗೂ ನಾಗರಿಕನ ಕರ್ತವ್ಯವಿರುವದು. ಸರಕಾರಿ ನೌಕರರು ಕೂಡ ೧೫ನೇ ಅಗಸ್ಟದಿಂದ ಸ್ವತಂತ್ರ ಹಿಂದುಸ್ತಾನದ ಸೇವಕರಾಗುವರು. ಪರಕೀಯ ಸತ್ತಾಧಿಕಾರಿಗಳ ಕೂಲಿಯಾಳಾಗಿದ್ದವರು, ದೇಶವನ್ನು ಪಾರತಂತ್ರ್ಯದಲ್ಲಿ ಹಲವು ಶತ್ರುಗಳಿಗೆ ಸಹಾಯಮಾಡಲು ಟೊಂಕಕಟ್ಟಿದವರು ೧೫ ಅಗಸ್ಟದಿಂದ ಜನಸೇವಕರಾಗಿ ಬಿಡುವರು. ಈ ಮಹತ್ವದ ಪರಿವರ್ತನೆಯನ್ನು ಅವರು ಹಾಗೂ ಜನತೆಯು ಲಕ್ಷ್ಯದಲ್ಲಿಟ್ಟುಕೊಂಡು ಇನ್ನು ಮುಂದೆ ವರ್ತಿಸುವದು ಅತ್ಯವಶ್ಯ. ಇದು ವರೆಗೆ 'ಸರಕಾರಿ ನೌಕರಿ, ೫ ಗಂಟೆಗೆ ಅದಷ್ಟು ಮಾಡಿ ಚಟಪಟ ಝಾಡಿಸಿ ಎದ್ದರಾಯಿತು' ಎಂಬ ವೃತ್ತಿ ಹೋಗಿ, 'ಇದು ನನ್ನ ದೇಶ, ನನ್ನವರ ರಾಜ್ಯ, ಇದನ್ನು ಸುಸೂತ್ರವಾಗಿ ಸಾಗಿಸಿಕೊಂಡುಹೋಗುವ ಹೊಣೆ ನನ್ನ ಮೇಲೆಯೆ ಇದೆ' ಎಂಬ ಭಾವನೆ ಪ್ರತಿಯೊಬ್ಬ ಸೇವಕನಲ್ಲಿ ನೆಲೆಗೊಳ್ಳಲಿಕ್ಕೆ ಬೇಕು. ಪರಿಸ್ಥಿತಿಯಲ್ಲಿ ಆದ ಈ ಬದಲಾವಣೆಯನ್ನು ಜನತೆಗೆ ತಿಳಿಸಿ ಹೇಳಿ ಅವರಿಗೆ ಹೊಸ ವಾತಾವರಣದಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂಬುದನ್ನು ತೋರಿಸಿಕೊಡುವದು ಕಾಂಗ್ರೆಸ್ ಸಂಸ್ಥೆಯ ಕರ್ತವ್ಯವಾಗಿರುವದು. ಈ ಸಂಸ್ಥೆಯೆ ಸ್ವಾತಂತ್ರ್ಯಪ್ರಾಪ್ತಿಗೆ ಎಲ್ಲಕ್ಕೂ ಹೆಚ್ಚು ಹೆಣಗಿದ್ದರಿಂದ ಹಾಗೂ ಹೊಣೆಗಾರವಿದ್ದುದರಿಂದ ಈ ಕಾರ್ಯವನ್ನು ಆ ಸಂಸ್ಥೆಯೆ ಮಾಡಬಲ್ಲದು. ಈ ನವಸ್ವಾತಂತ್ರ್ಯದ ಉಜ್ವಲ ಸಂದೇಶವು ಪ್ರತಿಹಳ್ಳಿಗೆ ಹೋಗಿ ಆ ದಿನ ನಸುಕಿನಲ್ಲಿ ಮುಟ್ಟುವಂತೆ ಪಂಜಿನ ಸ್ವಯಂ ಸೇವಕರನ್ನು ಅಲ್ಲಲ್ಲಿಗೆ ಕಳುಹಿ ಅವರೊಡನೆ ನವ ಧ್ವಜವನ್ನೂ ಕೊಟ್ಟು ಕಳುಹುವದು ಅವಶ್ಯ. ಈ ಕೆಲಸಕ್ಕೆ ಸಾವಿರಾರು ಸ್ವಯಂಸೇವಕರು ಸಿದ್ಧರಾಗುವರೆಂಬಲ್ಲಿ ಸಂಶಯವಿಲ್ಲ.

x x x

ಈಗ ಸರಕಾರದವರಿಂದ ಹೊರಬಿದ್ದ ಆ ದಿನದ ಕಾರ್ಯಕ್ರಮದಲ್ಲಿ ಜನಮನವನ್ನು ಆಕರ್ಷಿಸುವ ಇಲ್ಲವೆ ಜನರ ಕಲ್ಪಕತೆಯನ್ನು ಕಲಕಿಸುವ ಕಾರ್ಯಕ್ರಮವು ಒಂದೂ ಇದ್ದಂತೆ ತೋರುವದಿಲ್ಲ. ತೋಫು, ಮದ್ದುಗುಂಡು, ಕಲೆಕ್ಟರ ಮುಂತಾದ ಅಧಿಕಾರಿಗಳ ಕಾರ್ಯಕ್ರಮಗಳು ಇವೆಲ್ಲ 'ವ್ಹಿಕ್ಟರಿ ಡೇ' ಮುಂತಾದವುಗಳ ಕಾರ್ಯಕ್ರಮಗಳಂತೆಯೆ ಇರುವವು. ಜನರಿಗೆ, ಜನಸಾಮಾನ್ಯರಿಗೆ, ಕೂಲಿಕಾರರಿಗೆ ಒಕ್ಕಲಿಗರಿಗೆ, ಚಿಕ್ಕ ಚಿಕ್ಕದ್ದಿ ಅಂಗಡಿಯವರಿಗೆ, ಸಣ್ಣ ಪುಟ್ಟ ಗುಮಾಸ್ತರಿಗೆ, ಕಾರಕೂನರಿಗೆ ಇದೊಂದು ಹೊಸ ಯುಗದ ಪ್ರಾರಂಭ ಎಂಬ ಎಚ್ಚರ ಹುಟ್ಟುವಂತೆ ಕಾಂಗ್ರೆಸ್ ಕಮೀಟಿಗಳೆ ಕಾರ್ಯಕ್ರಮಗಳನ್ನು ಕಲ್ಪಿಸಬಲ್ಲವು ಹೊರತು ಸರಕಾರದವರಿಂದ ಆ ಕಾರ್ಯವು ಅಸಾಧ್ಯ. ಮೇಲಾಗಿ ಇದು ಅರಕ್ತಕ್ರಾಂತಿಯಿಂದ ಬಂದ ಅಧಿಕಾರ. ಅದುದರಿಂದ ಜನಮನದ ಮೇಲೆ ಒಮ್ಮೆಲೆ ಪೂರ್ಣ ಸ್ವಾತಂತ್ರ್ಯವು ದೊರಕಿದೆ ಎಂಬರಿವು ಕೂಡ ಆಗುವದು ಕಠಿಣ. ಇಡೀ ಜಗತ್ತಿನ ಇತಿಹಾಸದಲ್ಲಿ ಇದೊಂದು ಅದ್ವಿತೀಯ ದೃಶ್ಯ. ನಾಲ್ವತ್ತು ಕೋಟಿ ಜನರಿಗೆ ಮುಕಾಟಲೆ ರಾಜ್ಯಾಧಿಕಾರ ಕೊಟ್ಟು ಬ್ರಿಟಿಶರು ಹೊರಟು ಹೋಗುವ ದಿನವದು! ಈ ಬಗೆಯ ಶಾಂತಿಮಯ ಸತ್ತಾಂತರವು ಇಷ್ಟು ದೊಡ್ಡ ಪ್ರಮಾಣದಲ್ಲಿ ಈ ವರೆಗೆ ಜಗತ್ತಿನಲ್ಲಿ ಆಗಿಲ್ಲ. ಮುಂದೆ ಆಗುವದೊ ಇಲ್ಲವೊ ಸಂಶಯ. ಅದುದರಿಂದ ಸಂದರ್ಭಕ್ಕೆ ತಕ್ಕಂತೆ, ಈ ವಿಷಯವು ಜನಮನದಲ್ಲಿ ಇಳಿಯುವಂತೆ, ಈ ದಿನದ ಆಚರಣೆಯಾಗುವದು ಅತ್ಯಾವಶ್ಯಕ.

x x x

ಈ ದಿನದ ಸಮಾರಂಭಕ್ಕೆ ಹಲವರು ವಿರೋಧವನ್ನೂ ಮಾಡತಕ್ಕವರಿರುವರೆಂದು ವೃತ್ತಪತ್ರಗಳಲ್ಲಿ ಬಂದಿದೆ. ವಿಶೇಷತಃ ಹಿಂದೂ ಸಭೆಯವರು ವಿರೋಧ ಮಾಡತಕ್ಕವರಿರುವರಂತೆ. ಹಲವೊಂದು ಸಂಗತಿಗಳು ನಮ್ಮೆಲ್ಲರ ಮನಸಿನಲ್ಲಿದ್ದಂತೆ ಆಗಲಿಲ್ಲವೆಂಬುದು ಎಲ್ಲರೂ ಒಪ್ಪುವಂಥ ಮಾತಾಗಿದೆ. ಹಿಂದುಸ್ತಾನದ ವಿಭಜನೆಯಾಗದೆ ಸ್ವಾತಂತ್ರ್ಯವು ಸಿಕ್ಕಿದ್ದರೆ ಹಾಲಲ್ಲಿ ಸಕ್ಕರೆ ಬೆರಸಿದಂತಾಗುತ್ತಿತ್ತು. ಈ ಮಾತನ್ನು ಯಾರೂ ಅಲ್ಲಗಳೆಯಲಾರರು. ಆದರೆ ಸಕ್ಕರೆ ದೊರೆಯಲಿಲ್ಲವೆಂದು ಉಪ್ಪಿನ ಹರಳುಗಳನ್ನು ಬೆರಸುವ ಮೂರ್ಖತನವನ್ನು ಮಾಡುವದು ಸಮಂಜಸವಾಗಲಾರದು. ಆ ಸಕ್ಕರೆಯನ್ನು ದೊರಕಿಸಲು ಯತ್ನಮಾಡಲು ಯಾವ ಅಡ್ಡಿಯೂ ಇಲ್ಲ. ಅದೇ ರೀತಿ ಪಾಕಿಸ್ತಾನದ ಹಿಂದುಗಳ ಸುಖದುಃಖಗಳನ್ನು ಲಕ್ಷಕ್ಕೆ ತರದೆ ಇಲ್ಲಿ ಸಮಾರಂಭವನ್ನು ಏರ್ಪಡಿಸುವದು ತಪ್ಪೆಂದು ಹಲವರು ಹೇಳುವರು. ಅವರ ದುಃಖವು ನಮ್ಮ ಕಣ್ಣೆದುರು ಕಟ್ಟಿಲ್ಲವೆಂದು ಯಾರಾದರೂ ತಿಳಿದಿದ್ದರೆ ಅದು ತಪ್ಪು. ಆದರೆ ಆ ದುಃಖ ಪರಿಹಾರಕ್ಕೆ ಹಿಂದುಸ್ತಾನವನ್ನು ಬಲಪಡಿಸುವದೊಂದೇ ಮುಖ್ಯ ಉಪಾಯ. ಆದರೆ ಒಂದು ದೊಡ್ಡ ಮಾತನ್ನು ನಾವು ಲಕ್ಷ್ಯದಲ್ಲಿಡಲಿಕ್ಕೆಬೇಕು. ಅದೇನೆಂದರೆ ಪಾಕಿಸ್ತಾನವೆ ಆಗಲಿ ಹಿಂದುಸ್ತಾನವೆ ಆಗಲಿ, ಎರಡೂ ಬ್ರಿಟಿಶರ ಹಿಡಿತದೊಳಗಿಂದ ಪಾರಾಗಿರುವವು. ಇನ್ನು ಮತ್ತೆ ಬ್ರಿಟಿಶರ ವಶಕ್ಕೆ ನಾವು ಹೋದರೆ ಅದು ನಮ್ಮ ತಪ್ಪಿನಿಂದ. ಯಾಕಂದರೆ ಅವರು ನಮಗೆ ಸ್ವಾತಂತ್ರ್ಯವನ್ನು ಕೊಟ್ಟುಬಿಟ್ಟರುವರು. ಆ ಸ್ವಾತಂತ್ರ್ಯವನ್ನು ಕಾಯ್ದುಕೊಂಡುಹೋಗುವ ಸಾಮರ್ಥ್ಯ, ಸಮಂಜಸತನ, ಒಕ್ಕಟ್ಟು ನಮ್ಮಲ್ಲಿಲ್ಲದೆ ಹೋಗಿದ್ದರೆ, ನಾವು ಗುಲಾಮರಾಗಿರುವದಕ್ಕೆ ಯೋಗ್ಯರಿದ್ದೇವೆ ಎಂದು ಒಪ್ಪಬೇಕಾಗುವದು! ಆದರೆ ಅಂಥ ದುರ್ಧರ ಪ್ರಸಂಗ ನಮ್ಮ ಮೇಲೆ ಬಂದೀತೆಂದು ನನಗಂತೂ ತೋರುವದಿಲ್ಲ.

ಹೈದರಾಬಾದು

ಹೈದರಾಬಾದ ಹಾಗು ತ್ರಾವಣಕೋರ ಸಂಸ್ಥಾನಗಳು ಸಂಯುಕ್ತ ಹಿಂದುಸ್ತಾನಕ್ಕೆ ಕೂಡಿಕೊಂಡವೆಂಬ ಸುದ್ದಿ ಮೊನ್ನೆ ೩೧-೭-೪೭ ನೆಯ ದಿನ ಪ್ರಕಟವಾಯ್ತು. ಸಂರಕ್ಷಣೆ, ವಿದೇಶ, ರಾಜಕಾರಣ, ಹಾಗೂ ಸಾರಿಗೆ ಈ ಮೂರು ವಿಷಯಗಳಲ್ಲಿ ಮಾತ್ರ ಅವು ಕೂಡಿಕೊಂಡಿರುವವೆಂದು ಸುದ್ದಿ. ಆ ಸುದ್ದಿ ಇನ್ನೂ ಗಟ್ಟಿಯಾಗಿಲ್ಲ. ಒಂದೊಪ್ಪತ್ತು ಗಟ್ಟಿಯಾಯಿತೆಂದು ತಿಳಿಯುವಾ ಹಾಗೆ ಆದರೂ ಹೈದರಾಬಾದದ ಸಮಸ್ಯೆ ಜನತೆಯ ದೃಷ್ಟಿಯಿಂದ ಮುಕ್ತಾಯಹೊಂದಿತೆಂದು ಹೇಳಲಿಕ್ಕಾಗುವದಿಲ್ಲ. ಯಾಕಂದರೆ ಹೈದರಾಬಾದ ಜನತೆಯ ಧ್ಯೇಯವು ಪೂರ್ಣ ಕೈಗೂಡುವವರೆಗೆ ಅವರು ಸಕಲ ಶಾಂತಿಮಯ ಉಪಾಯಗಳಿಂದ ಹೋರಾಡುತ್ತಲೆ ಇರಬೇಕಾಗುವದು. ಅವರ ಧ್ಯೇಯವು ಸ್ಪಷ್ಟವೆ ಇದೆ—ಸಂಸ್ಥಾನವು ಹಿಂದುಸ್ತಾನದಲ್ಲಿ ಅಂದರೆ ಹಿಂದುಸ್ತಾನದ ಸಂಯುಕ್ತ ರಾಜ್ಯಘಟನೆಯಲ್ಲಿ ಸೇರ್ಪಡೆಹೊಂದಿ ಸಂಪೂರ್ಣ ಹೊಣೆಗಾರ ಪದ್ಧತಿಯನ್ನು ನಿಜಾಮರು ಸಂಸ್ಥಾನದಲ್ಲಿ ಸ್ಥಾಪಿಸಬೇಕು. ಈಗ ಮೂರು ವಿಷಯಗಳಲ್ಲಿ ಮಾತ್ರ ಆ ಮಟ್ಟಿಗಷ್ಟೇ ಹೈದರಾಬಾದ ಸಂಸ್ಥಾನದವರು ಸಂಯುಕ್ತ ರಾಜ್ಯದಲ್ಲಿ ಸೇರಿದ್ದಾರೆ. ಅದು ಕೇವಲ ಮೊದಲನೆ ಅಥವಾ ಪ್ರಾಥಮಿಕ ಹೆಜ್ಜೆ ಎಂದು ಹೇಳಬಹುದು ನಿಜವಾಗಿ ಯಾವ ಘಟನೆಯ ಪ್ರಕಾರ ತಾವು ಅದರಲ್ಲಿ ಸೇರಬೇಕೆನ್ನುವರೋ ಆ ಘಟನೆಯನ್ನು ಸಿದ್ಧಪಡಿಸುವ ಕೆಲಸದಲ್ಲಿ ಭಾಗವಹಿಸದೆ ಇರುವದು ಅಯೋಗ್ಯವು. ಅದುದರಿಂದ (೧) ಹೈದರಾಬಾದು ಮೂರು ವಿಷಯಗಳ ಸಂಬಂಧದಿಂದ ಈಗಾಗಲೇ ಸೇರಿದ್ದರೆ ಎಲ್ಲ ವಿಷಯಗಳ ಸಂಬಂಧದಿಂದಲೂ ಸಂಯುಕ್ತ ಘಟನೆಯಲ್ಲಿ ಸೇರಬೇಕು. (೨) ಆ ಘಟನೆಯನ್ನು ಸಿದ್ಧಿಸುವದರದಲ್ಲಿ ಭಾಗವಹಿಸುವದಕ್ಕಾಗಿ ಹೈದರಾಬಾದ ಸಂಸ್ಥಾನವು ೧೬ ಪ್ರತಿನಿಧಿಗಳನ್ನು ಕಳಿಸಬಲ್ಲದು. ಸಂಯುಕ್ತ ರಾಜ್ಯವನ್ನು ಸೇರಬೇಕೆಂದು ನಿಶ್ಚಯವಾದ ಬಳಿಕ ಘಟನಾ ಸಮಿತಿಯಲ್ಲಿ ಹೋಗದೆ ಇರುವದು ಮೂರ್ಖತನವು. ಅದುದರಿಂದ ಅಲ್ಲಿಗೆ ೧೬ ಸಭಾಸದರನ್ನು ಕಳಿಸಿಯೇ ತೀರಬೇಕು. (೩) ಮೂರಾರು ವಿಷಯಗಳ ಸಂಬಂಧದಿಂದ ಸಂಯುಕ್ತ ರಾಜ್ಯದಲ್ಲಿ ಸೇರುವದಾದಾಗ [illegible] ರನ್ನು ಸೇರಿಸುವದಾಗಲಿ ಇವೆರಡೂ ಸಂಸ್ಥಾನದ ಪರವಾಗಿ ನಡೆಯತಕ್ಕ ಕೆಲಸಗಳು. ಜನತೆಯ ದೃಷ್ಟಿಯಿಂದ ಅವರಿಗೆ ಪೂರ್ಣ ಹೊಣೆಗಾರ ರಾಜ್ಯಪದ್ಧತಿಯು ದೊರೆಯುವ ವರೆಗೆ ಅವರ ಉದ್ಧಾರವಾಗಲರಿಯದು. ಅದುದರಿಂದ ಈ ಕ್ರಮದಿಂದ ಅಲ್ಲಿಯ ಜನರು ಒಂದೇ ಸಮನಾಗಿ ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಕಾಂಗ್ರೆಸ್ಸಿನ ಮಾರ್ಗಗಳಿಂದಲೆ ಹೋರಾಡುತ್ತ ಹೋಗಬೇಕಾಗುವದು. ಹಿಂದುಸ್ತಾನವೆಲ್ಲ ಸ್ವತಂತ್ರವಾದರೂ ಹೈದರಾಬಾದದಲ್ಲಿಯ ಒಂದೂವರೆ ಕೋಟಿ ಜನರು ಇನ್ನೂ ಪರತಂತ್ರರೆ ಇರುವರೆಂಬುದು ನಿರ್ವಿವಾದವು. ಹೊಣೆಗಾರ ರಾಜ್ಯಪದ್ಧತಿ ಯಾವ ಸಂಸ್ಥಾನಗಳಲ್ಲಿಲ್ಲವೊ ಅಲ್ಲಿಯ ಜನತೆಯು ಗುಲಾಮಗಿರಿಯಲ್ಲಿಯೆ ಇರುವದೆನ್ನಬೇಕಾಗುವದು. ಪ್ರತ್ಯಕ್ಷ ಪರಿಸ್ಥಿತಿಯತ್ತ ಕಣ್ಣು ಮುಚ್ಚಿ ನಡೆಯಲಾಗದು. ಸ್ವಾತಂತ್ರ್ಯವೆಂಬುದು ಸ್ವತಃ ಉಂಡು ಉಪಭೋಗಿಸುವ ವಸ್ತು. ನಮ್ಮ ನೆರೆಯವರು ಉಂಡಿದ್ದಾರೆ, ನಾವು ಉಪವಾಸವಿರುವ, ಎಂದು ಸ್ವಾತಂತ್ರ್ಯದ ವಿಷಯದಲ್ಲಿ ಯಾರೂ ಹೇಳಲಾರರು. ಅದುದರಿಂದ ಹೈದರಾಬಾದದ ಜನರು ತಮ್ಮ ಸ್ವಾತಂತ್ರ್ಯಕ್ಕಾಗಿ—ಹೊಣೆಗಾರ ರಾಜ್ಯಪದ್ಧತಿಗಾಗಿ—ಒಂದೇ ಸಮನಾಗಿ ಹೋರಾಡುತ್ತ ಹೋಗಲೇಬೇಕು.

ಪಾಕಿಸ್ತಾನದಲ್ಲಿಯ ಹಿಂದುಗಳು

ಧರ್ಮಾನುಸಾರವಾಗಿ ರಾಜ್ಯಗಳನ್ನು ನಿರ್ಮಿಸುವದು ಎಷ್ಟು ಅಶುದ್ಧವೆಂಬದು ಪಾಕಿಸ್ತಾನದಲ್ಲಿಯ ಹಿಂದುಗಳ ಸಂಖ್ಯೆ ಹಾಗೂ ಹಿಂದುಸ್ತಾನದಲ್ಲಿಯ ಮುಸಲ್ಮಾನರ ಸಂಖ್ಯೆ ಇವುಗಳನ್ನು ನೋಡಿದರೆ ಚನ್ನಾಗಿ ಹೊಳೆಯುವದು. ಪಾಕಿಸ್ತಾನದಲ್ಲಿಯ ಸುಮಾರು ಏಳು ಕೋಟಿ ಜನಸಂಖ್ಯೆಯಲ್ಲಿ ಸುಮಾರು ಎರಡು ಕೋಟಿ ಹಿಂದು ಹಾಗು ಸೀಖರು ಇರುವರು. ಅದೇ ರೀತಿ ಹಿಂದುಸ್ತಾನದಲ್ಲಿರುವ ಮೂವತ್ತೆರಡು ಕೋಟಿ ಜನಸಂಖ್ಯೆಯಲ್ಲಿ ಸುಮಾರು ಮೂರುವರೆ ಕೋಟಿ ಮುಸಲ್ಮಾನರಿರುವರು ! ಇವರ ಗತಿ ಏನು ಎಂಬ ಪ್ರಶ್ನೆಯನ್ನು ಎಲ್ಲರೂ ಕೇಳುವರು. ಧರ್ಮಾನುಸಾರ ವಿಭಜನೆ ಆಗದಿದ್ದರೆ ಈ ಪ್ರಶ್ನೆಯೆ ಉಂಟಾಗುತ್ತಿರಲಿಲ್ಲ. ಈಗ ಈ ಪ್ರಶ್ನೆ ಬಹಳ ತೀವ್ರತೆಯಿಂದ ನಮ್ಮೆದುರು ಬಂದಿರುವದು. ವಿಶೇಷತಃ ನೌಖಾಲಿಯಲ್ಲಿ ಅಶಾಂತಿ ಆದರೆ ಏನು ಮಾಡಬೇಕು? ಎಂದು ಹಿಂದುಗಳು ಅನ್ನುವರು. ಬಿಹಾರದಲ್ಲಿ ಅಶಾಂತಿ ಆದರೆ ಏನು ಮಾಡಬೇಕು ಎಂದು ಮುಸಲ್ಮಾನರು ಅನ್ನುವರು. ಮುಲ್ತಾನ, ಸಿಂಧಿ ಮುಂತಾದ ಕಡೆಗೆ ಅಶಾಂತಿ ಆದರೆ ನಾವೇನು ಮಾಡಬೇಕೆಂದು ಸೀಖರು ಕೇಳುತಿರುವರು. ಅರ್ಥಾತ್ ಅಂಥ ಪ್ರಸಂಗಗಳಲ್ಲಿ ಪೋಲೀಸ ಅಥವಾ ಸೈನ್ಯಪಡೆ ಇವುಗಳಿಂದ ಸಹಾಯ ಸಂರಕ್ಷಣೆಯಾಗುವದಿಲ್ಲ ಎಂದು ತಿಳಿದೇ ಜನರು ಈ ಪ್ರಶ್ನೆಯನ್ನು ಮಾಡುವರು. ಈ ಪ್ರಶ್ನೆಗೆ ಸಮರ್ಪಕ ಉತ್ತರ ಕೊಡುವದು ಕಠಿಣವಿರುವದು. ಆದರೆ ಇಂಥ ಕಠಿಣ ಪ್ರಸಂಗಗಳಲ್ಲಿಯೂ ನಾವು ಧೈರ್ಯದಿಂದ ನಡೆಕೊಂಡರೆ ಮಾತ್ರ ಪಾರಾಗಬಲ್ಲೆವು.

ಈ ಪ್ರಶ್ನೆಗೆ ಮೂರು ಉತ್ತರಗಳನ್ನು ಕೊಡಬಹುದು. ಆಯಾ ಧರ್ಮದವರು ಆಯಾ ಸ್ಥಳಗಳಲ್ಲಿಯೆ ಆಯಾ ಸರಕಾರಕ್ಕೆ ನಿಷ್ಠರಾಗಿ ಇರಬೇಕು, ಆದರೆ ಅವರ ಸಂರಕ್ಷಣದ ಪೂರ್ಣ ಹೊಣೆಯನ್ನು ಆಯಾ ಸರಕಾರದವರು ಹೊರಬೇಕು ಹಾಗೂ ಜನರಿಗೆ ಜಾತೀಯ ಗಲಭೆಗಳ ಮೂಲಕ ಆಗಬಹುದಾದ ಹಾನಿಯನ್ನು ತುಂಬಿಕೊಡುವ ಆಶ್ವಾಸನ ಕೊಡಬೇಕು. ಇದೊಂದು ಹಾದಿ. ಆಯಾ ಧರ್ಮದ ಜನರು ಸ್ಥಾನತ್ಯಾಗಮಾಡಿ ಆಯಾ ಧರ್ಮದವರ ರಾಜ್ಯವಿದ್ದಲ್ಲಿ ಹೋಗಿ ಇರಬೇಕು. ಇದು ಎರಡನೆ ಮಾರ್ಗವು. ಆದರೆ ಸಣ್ಣ ಪುಟ್ಟ ಸಂಖ್ಯೆ ಇದ್ದಲ್ಲಿ ಇದು ಸಾಧ್ಯವಾಗಬಹುದಾಗಿತ್ತು. ಕೋಟ್ಯಂತರ ಜನರ ಸ್ಥಳಾಂತರವು ಈ ರೀತಿ ಆಗುವದು ದುರಾಪಾಸ್ತ ಕಾಣುವದು. ಬೇಕಾದಂಥ ಪ್ರಸಂಗ ಬಂದರೂ ಯಾವುದಕ್ಕೂ ಹೆದರದೆ ಇದ್ದಲ್ಲಿಯೆ ಇದ್ದು ಸಂಕಟಗಳನ್ನು ಎದುರಿಸುತ್ತ ಹೋರಾಡುತಿರುವದು. ಇದು ಮೂರನೆಯ ಮಾರ್ಗ. ಸದ್ಯದ ಪರಿಸ್ಥಿತಿಯಲ್ಲಿ ಮೊದಲನೆ ಹಾಗೂ ಮೂರನೆ ಈ ಎರಡೂ ಮಾರ್ಗಗಳ ಸಮನ್ವಯವು ಅವಶ್ಯವೆಂದು ನಮಗೆ ತೋರುವದು. ಜನರು ಅಲ್ಪಸಂಖ್ಯಾಕರಿದ್ದಲ್ಲಿ ಸಂಘಟಿತರಾಗಿ ನಿಶ್ಚಯ ಚಿತ್ತದಿಂದ ಸ್ವಸಂರಕ್ಷಣೆ ಮಾಡಿಕೊಳ್ಳುತ್ತ ಗಟ್ಟಿಯಾಗಿ ನಿಲ್ಲಬೇಕು. ಇದು ಜನರ ಕರ್ತವ್ಯ. ಅತ್ತ ಆಯಾ ಸರಕಾರದವರು ಕೂಡ ಅವರ ಕೂದಲೆಳೆಗೆ ಸಹ ಧಕ್ಕೆ ತಗಲದಂತೆ ಹಾಗೂ ಅವರ ಭಾಷೆ, ಧರ್ಮ, [illegible] ತುಂಬಿಕೊಡುವ

ದಕ್ಷಿಣ ಕನ್ನಡ

ಮಂಗಳೂರು ಜಿಲ್ಲಾ [illegible] ಸಭೆ ಜುಲೈ ೨೮ರಲ್ಲಿ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸೇರಿದಾಗ [illegible] ಗೋಷ್ಠಿ ಮತ್ತು [illegible] ರಾವ—ಜೋಶಿ ಮ. ಕ. ಶೆಟ್ಟಿ [illegible] ಯೆಂದು ವಿವರಿಸಲ್ಪಟ್ಟಿತಲ್ಲದೆ [illegible] ಸಂಗ್ರಹಕ್ಕಾಗಿ ಕೈಕೊಂಡ ವಿವಿಧ ಕಾರ್ಯಕ್ರಮಗಳನ್ನು ಮತ್ತು ಹೊರಗಿನಿಂದ ತರಿಸಿಕೊಳ್ಳಲು [illegible] ಪ್ರಯತ್ನಗಳನ್ನು ಸ್ಪಷ್ಟಪಡಿಸಲಾಯಿತು.

ಕಾಂಗ್ರೆಸ ಕಾರ್ಯಕಾರಿ ಮಂಡಲದ [illegible] ಜುಲೈ ೨೮ರಲ್ಲಿ ಮಂಗಳೂರಲ್ಲಿ ಸೇರಿ ಸ್ವಾತಂತ್ರ್ಯ ದಿನಾಚರಣೆಗೆ ವ್ಯವಸ್ಥೆಮಾಡಲು [illegible] ತಿಯನ್ನು ಪ್ರಧಾನ ಕಾರ್ಯದರ್ಶಿ [illegible] ಏರ್ಪಡಿಸಬೇಕೆಂಬುದನ್ನೂ ಸಾರ್ವಜನಿಕ [illegible] ಸಂಬಂಧ ಸಮಿತಿ ಹಾಗೂ ಹರಿಜನ ಸಮಿತಿಗಳು ಯಾವ ಯಾವ ಕಾರ್ಯಕೈಕೊಳ್ಳಬೇಕೆಂಬುದನ್ನೂ ನಿಶ್ಚಯಿಸಲಾಯಿತು.

ದ. ಕ. ಪಂಡಿತ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ಜುಲೈ ೨೭ರಲ್ಲಿ ಮಂಗಳೂರಿನ ಗಣಪತಿ ಹೈಸ್ಕೂಲಿನಲ್ಲಿ ಶ್ರೀ ಸೇಡಿಯಾಪು ಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ಜರುಗಿ ಬರುವ ಡಿಸೆಂಬರ ತಿಂಗಳಲ್ಲಿ ಕಾಸರಗೋಡಿನಲ್ಲಿ ಜರಗುವ ಕ. ಸಾ. ಪರಿಷತ್ತಿನ ವಾರ್ಷಿಕ ಸಮ್ಮೇಳನದಲ್ಲಿ ದ. ಕ. ಪಂಡಿತ ವರ್ಗದವರೆಲ್ಲರೂ ಭಾಗವಹಿಸಬೇಕೆಂಬ ಮತ್ತು ಇತರ ಗೊತ್ತುವಳಿಗಳನ್ನು ಅಂಗೀಕರಿಸಿತು.

ಮಂಗಳೂರಿನ ಭಗಿನೀ ಸಮಾಜದ ವಾರ್ಷಿಕ ಮಹಾಸಭೆಯು ಜುಲೈ ೨೬ರ ರಂದು ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಜರುಗಿ ಕಾರ್ಯಕಾರಿ ಸಮಿತಿಯ ಸದಸ್ಯರ ಆಯ್ಕೆ ನಡೆಯಿತು.

ದ. ಕ. ಜಿಲ್ಲಾ ಪೋಸ್ಟಮೆನ್ ಮತ್ತು ಕೆಳ ತರಗತಿಯ ನೌಕರರ ಸಭೆಯು ಜುಲೈ ೨೭ರಲ್ಲಿ ನಡೆದು ಸಂಘದ ಗೊತ್ತುವಳಿಗಳನ್ನು ಅಖಿಲ ಭಾರತ ಸಂಘದ ಸಮ್ಮೇಳನಕ್ಕೆ ಕಳುಹಬೇಕೆಂದು ನಿರ್ಣಯವಾಯಿತು.

ದ. ಕ. ಜಿಲ್ಲೆಯ ಅಡಿಕೆ ತೋಟಗರ ದೂರಿಗೆ ಉತ್ತರವಾಗಿ ಪಡಿಯಕ್ಕಿ ಸಿಗಲಾರದೆಂದು ಸರಕಾರದ ಕಾರ್ಯದರ್ಶಿಗಳಾದ ಶ್ರೀ ಪಿ. ವಿ. ಸುಬ್ಬರಾಯರು ತೋಟಗರ ಸಂಘದ ಕಾರ್ಯದರ್ಶಿಯವರಿಗೆ ಪತ್ರಮುಖೇನ ತಿಳಿಸಿದ್ದಾರೆ.

ಸುರತ್ಕಲ್ ಪ್ರಾಥಮಿಕ ಶಾಲೆಯಲ್ಲಿ ಗ್ರಾಮಯುವಕ ಸಂಘದ ಪರವಾಗಿ ಆಟಪಾಟಕೂಟದ ೩ ನೆಯ ಮಹಾಸಭೆಯು ಜುಲೈ ೨೦ ರಲ್ಲಿ ಸಾಂಗವಾಗಿ ನೆರವೇರಿತು.

ಪುತ್ತೂರು ತಾಲೂಕಿನಲ್ಲಿ ಆಹಾರ ಪರಿಸ್ಥಿತಿಯು ಹದಗೆಟ್ಟಿದ್ದು ಸೀದಾ ಅಂಗಡಿಗಳಲ್ಲಿ ಪಡಿ ಅಕ್ಕಿ ಹಂಚಲಾಗುತ್ತಿದೆಯೆಂದೂ ಪೇಟೆಗೆ ಹೋದರೆ ಹೊಟೇಲುಗಳಲ್ಲಿ ಊಟ ದೊರೆಯುವುದು ಕಠಿನವಾಗಿದೆಯೆಂದೂ ತಿಳಿದು ಬರುತ್ತದೆ.

ಜುಲೈ ೨೬ ರಲ್ಲಿ ಮಂಗಳೂರು—ಬಂಟವಾಳ ರಸ್ತೆಯ ೧೯ ನೆಯ ಮೈಲು ಕಲ್ಲಿನ ಹತ್ತಿರ ಮಧ್ಯಾಹ್ನ ಲಾರಿ ಮತ್ತು ಕಾರುಗಳಿಗೆ ಢಿಕ್ಕಿಯಾಗಿ ಕಾರಿನಲ್ಲಿದ್ದ ಒಬ್ಬ ಜೈನ ಯುವಕನಿಗೆ ಸ್ವಲ್ಪ ಪೆಟ್ಟಾಗಿ ಅವನು ಬಂಟವಾಳದ ಆಸ್ಪತ್ರೆಯಲ್ಲಿ ಔಷಧೋಪಚಾರ ಹೊಂದುತ್ತಿರುವನು.


ಜುಲೈ ೧೯ ರಲ್ಲಿ ಕುಂದಾಪುರ ತಾಲೂಕು ಸಮಿತಿಯು ರೆವಿನ್ಯೂ ಡಿವಿಜನಲ್ ಆಫೀಸರರ ಅಧ್ಯಕ್ಷತೆಯಲ್ಲಿ ಸೇರಿ ಅನೇಕ ಮಹತ್ವದ ನಿರ್ಣಯಗಳನ್ನು ಅಂಗೀಕರಿಸಿತು. ಆಹಾರ ಪರಿಸ್ಥಿತಿಯನ್ನು ಸುಧಾರಿಸಲು ಪರಪ್ರಾಂತದಿಂದ ಧಾನ್ಯಗಳನ್ನು ಬೇಗ ತರಿಸಬೇಕೆಂದೂ ಜಿಲ್ಲೆಯಿಂದ ಹೊರಗೆ ಧಾನ್ಯ ಹೋಗದಂತೆ ತಡೆಯಬೇಕೆಂದೂ ಕಲೆಕ್ಟರರನ್ನು ಕೇಳಿಕೊಳ್ಳಲಾಯಿತು.

ರಾಷ್ಟ್ರಧ್ವಜಗಳು ಬೇಕೆಂಬವರು ದ. ಕ. ಜಿಲ್ಲಾ ಕಾಂ. ಕಮಿಟಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಕೆ. ಕೆ. ಶೆಟ್ಟರಿಂದ ತರಿಸಿಕೊಳ್ಳಬಹುದೆಂದು ಪ್ರಕಟಿಸಲಾಗಿದೆ.

ಜುಲೈ ೨೯ ರಂದು ಉಪ್ಪಿನಂಗಡಿ ಭಾಗದ ಗುತ್ತೇದಾರ ಮೂಲೇಗಾರರ ಸಭೆಯು [illegible] ಬಿಲ್ಲದ ಯೋಗ್ಯತೆಯ [illegible] ವಿ. ಆರ್. ಶೇರೀಗಾರರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಗೆ ೫೦೦–೬೦೦ ಜನರು [illegible].

ಆಶ್ವಾಸನವನ್ನು ಕೊಡತಕ್ಕದ್ದು. [illegible] ರವು ಈಸ್ಟ್ ಪ್ರಜೆಗಳ [illegible] ಅದು ಸರಕಾರ [illegible] ರುವದು.

[illegible]



ಮುಂಬಯಿ ಶೇರ ಪೇಟೆ

ಶೇರ ಪೇಟೆಯಲ್ಲಿ ಲಾಭಾಂಶ ಹಂಚುವಿಕೆ ಕಡಿಮೆಯಾದ ಕಾರಣದಿಂದಲೂ ಅರಿವೆ ಬೆಲೆ ಏರಿಸುವ ಆಶೆ ಮುರಿದದ್ದರಿಂದಲೂ ಉತ್ಸಾಹ ಕಡಿಮೆಯಾಗಿದೆ. ಮಾರುವವರೇ ಹೆಚ್ಚಾಗಿ ದ್ದಾರೆ. ಟಾಟಾ ಸ್ಟೀಲ ಡೆಫರ್ಡ ಪಾಲುಗಳು ೨೦೦೫-೦-೦ ರ ಹರಿಗೆಳದು ತಿರುಗಿ ೨೦೨೦-೦-೦ ಕ್ಕೆ ಸುಧಾರಿಸಿತು. ಇಂಡಿಯನ್ ಅಯರ್ನ ೨೬೮-೦-೦ ರಿಂದ ೨೬೪-೦-೦ ಕ್ಕಿಳಿದಿದೆ. ಜವಳಿ ಪಾಲುಗಳಲ್ಲಿ ಡಾಯಿಂಗ ೧೦೮೫-೦-೦ ರಿಂದ ೧೦೫೦-೦-೦ ಕ್ಕೂ ಫಿನ್ಲೆ ೪೧೧-೦-೦ ರಿಂದ ೪೮೦-೦-೦ ಕ್ಕೂ ಕೋಹಿನುರು ೬೦೦-೨-೦ ರಿಂದ ೫೬೯-೦-೦ ಕ್ಕೂ ಸ್ವದೇಶಿ ೬೦೨-೦-೦ ರಿಂದ ೬೦೭-೦-೦ ಕ್ಕೂ ಗೋಕಾಕ ೩೨೨-೦-೦ ರಿಂದ ೩೧೮-೦-೦ ಕ್ಕೂ ಇಳಿದುವು. ಅಸೋಸಿಯೇಟೆಡ್ ಸಿಮೆಂಟ ೧೭೦-೦-೦ ರಿಂದ ೧೬೯-೦-೦ ಕ್ಕಿಳಿಯಿತು. ಬ್ಯಾಂಕುಗಳಲ್ಲಿ ಸೆಂಟ್ರಲ ೯೭-೮-೦ ರಿಂದ ೯೬-೦-೦ ಕ್ಕಿಳಿದರೆ, ಇಂಪೀರಿಯಲ್ ಎಫ್. ಪಿ. ೨೧೫೦-೦-೦ ರಿಂದ ೨೧೯೫-೦-೦ ಕ್ಕೆ ಸುಧಾರಿಸಿತು. ರಿಝರ್ವ ಬ್ಯಾಂಕ ೨೪೨-೦-೦ ರಲ್ಲಿ ಯಥಾಸ್ಥಿತಿ.

ಸರಕಾರಿ ಸಾಲಪತ್ರಗಳಲ್ಲಿ ೩% (೧೯೬೬) ೧೦೦-೫-೦, ೩½% (೧೯೪೭-೫೦) ೧೦೦-೧೧-೩ ಮತ್ತು ೪% (೧೯೫೩) ೧೦೨-೧೦-೦ ಯಲ್ಲಿವೆ.

ಚಿನ್ನ—ಬೆಳ್ಳಿ

ಚಿನ್ನಬೆಳ್ಳಿಗಳ ಬೆಲೆಯನ್ನು ಏರಿಳಿಯಲ್ಲೆ ಇರಿಸುವ ಸಲುವಾಗಿ ವ್ಯಾಪಾರಿಗಳ ಕೂಟ ವೊಂದು ಸ್ಥಾಪಿತವಾಗಿದ್ದು ಅದು ಬಿಗಿಬಂದಂತೆ ಕೊಂಡು ಹೊರಗೆ ಹಾಕದಿರುವದರಿಂದ ಬೆಲೆಗಳು ಇನ್ನೂ ಏರಬಹುದೆಂದು ನಂಬಲಾಗಿದೆ. ಚಿನ್ನ ೧೦೯-೮-೦ ರ ವರೆಗೇರಿ ೧೦೯-೨-೦ ವಾಯಿದಾ ೧೦೫-೧೪-೦. ಬೆಳ್ಳಿ ೧೭೭-೮-೦ ಕ್ಕೇರಿ ೧೭೬-೧೧-೦ ಕ್ಕೆ ಇಳಿಯಿತು ವಾಯಿದಾ ೧೭೪-೨-೦.

ಅರಳೆ

ಜುಲೈ ವಾಯಿದೆ ಅರಳೆ ತಾ. ೨೫ ಕ್ಕೆ ಲೆಕ್ಕಾಚಾರವಾದ ನಂತರ ಸೆಪ್ಟಂಬರ ಅರಳೆಯಲ್ಲಿ ವಾಯಿದಾ ವ್ಯಾಪಾರಕ್ಕೆ ಸರಕಾರ ಇನ್ನೂ ಅನುಮತಿ ಕೊಡಲಿಲ್ಲ. ಈ ವರ್ಷದಲ್ಲಿ ಅರಳೆ ವ್ಯಾಪಾರ ವರವಾವಧಿಗೆ ಮುಟ್ಟಿ ನಿಶ್ಯಬ್ದಾವಸ್ಥೆಗೆ ಬಂತು. ಈಗ ಕೊಳ್ಳುವವರು ಇಲ್ಲ. ನಿರ್ಯಾತದ ವ್ಯವಸ್ಥೆ ಇನ್ನೂ ಪೂರ್ತಿಯಾಗಿಲ್ಲ. ಹೀಗಾಗಿ ಬೆಲೆಗಳು ಏರುವಂತಿಲ್ಲ. ಸೆಪ್ಟಂಬರ ಅರಳೆ ೪೩೫-೧೪-೦ ರಿಂದ ೪೩೬-೬-೦ ಕ್ಕೇರಿತು.

ಎಣ್ಣೆ ಕಾಳು

ಶೇಂಗಾ	೮೬೭-೦-೦
ಅಗಸಿ	೩೦-೧೨-೦
ಅಗಸಿ ಎಣ್ಣೆ	೨೦-೧೪-೦

ಸಾಂಗಲಿ ಪೇಟೆ

ಅರಿಷಣ ಹೇರು	೧೦೫-೧೧೧
ಮೆಣಸಿನಕಾಯಿ ಹೇರು ,,	೧೦೦-೧೫೦
ಶೇಂಗಾ ಖಂಡಿ	೧೩೫-೧೬೦

ಶಿವಮೊಗ್ಗ

(ಸ್ವ. ಸು) ಅಗಸ್ಟ ತಾ॥ ೫

ಅಡಿಕೆ ದೇಶಾವರ ನಂ ೧ ಮಣ ೧ಕ್ಕೆ	೫೩-೫೫
,, ,, ೨	೫೯-೫೨
,, ,, ೩	೪೮-೫೦
ಕೊರಸಾಲು	೪೮-೫೨
ಅನ್ಯಾವರ	೪೯-೫೩
ಸುಲಿ	೪೮-೫೦
ರಾಜಾಅಲವು	೪೮-೫೦
ಬೆಟ್ಟ ವಂತಿ	೩೨-೩೪
ಬೆಟ್ಟ	೨೮-೩೨

ತ್ತಿ ದೇಡಿಕೆ ಕಡಿಮೆ. ಪಾಲಘಾಟ ಅಡಿಕೆ ಮದ್ರಾಸ ಕಡೆ ಹೋಗತೊಡಗಿದ್ದು ಅದರ ಬೆಲೆ ಕಡಿಮೆ ಇರುವದು ಇದಕ್ಕೆ ಕಾರಣವಿರಬಹುದು.

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ ನಂ. ೧	೨೭೦-೨೮೦
,, ನಂ. ೨	೨೫೦-೨೬೦
,, ನಂ. ೩	೨೪೦-೨೫೦
ಹಳೇ ಜಯವಂತ ಹತ್ತಿ	೨೮೫-೨೯೫
ಅಪ್ಲಂಡ ಹತ್ತಿ	೨೬೦-೨೭೦
ಜಿನ ಹೊಸದು	೧೭೫-೧೮೦
ಜಿನ ಹಳೇದು	೧೯೦-೧೯೫
ಡಬಲರೋಲ	೧೬೦-೧೮೦
ಸಾಜಿನ	೧೭೦-೧೭೫

ಬೆಂಗಳೂರು—ಮೈಸೂರು

ಮೈಸೂರು ಸಂಸ್ಥಾನದ ರೇಲ್ವೆ ಕೆಲಸಗಾರರ ಕೇಂದ್ರ ಸಮಿತಿಯ ಪ್ರತಿನಿಧಿಗಳು ತಾ ೪ ರಲ್ಲಿ ರೇಲ್ವೆ ಮಂತ್ರಿಗಳಾದ ಅಪ್ಪಾಜಿಗೌಡರನ್ನು ಭೆಟ್ಟಿಯಾಗಿ ಮಾತುಕತೆ ನಡೆಸಿದ ನಂತರ ರೇಲ್ವೆ ನವಕರರಿಗೂ ಇತರರಿಗೂ ವೇತನದ ವಿಚಾರದಲ್ಲಿ ತಾರತಮ್ಯ ಕಲ್ಪಿಸಲಾಗುವುದಿಲ್ಲವೆಂದೂ ಇತರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಲಾಗುವುದೆಂದೂ ಮಂತ್ರಿಗಳು ಹೇಳಿದರು.

ಈ ವರೆಗೆ ಸಾರ್ವಭೌಮ ಸರಕಾರದ ಅಧೀನದಲ್ಲಿದ್ದ ಎಂ. ಅಂಡ್ ಎಸ್. ಎಮ್. ರೇಲ್ವೆಯ ಬೆಂಗಳೂರು—ಮದ್ರಾಸ ಶಾಖೆಯ ಭಾಗ, ವಿಮಾನ ಕಾರಖಾನೆಯ ಕಡೆಯ ಭಾಗ ಮತ್ತು ಅಸ್ಸತ್ತೆ ನಗರ ವಿಸ್ತರಣ ಭಾಗ—ಇವುಗಳ ಅಧಿಕಾರವನ್ನು ತಾ. ೨ ರಿಂದ ಮೈಸೂರಿಗೆ ಬಿಟ್ಟು ಕೊಡಲಾಗಿದೆ.

ಬೆಂಗಳೂರು ಯುನೈಟೆಡ್ ಕ್ರಿಕೆಟ್ ಕ್ಲಬ್ಬಿನ ವಾರ್ಷಿಕ ಸಭೆಯು ತಾ ೨ ರಲ್ಲಿ ಸೇರಿದಾಗ ಶ್ರೀ ಆರ್ ರಾಮಸ್ವಾಮಿ ಮತ್ತು ಶ್ರೀ ಕೆ. ಮ್ಯಾಥ್ಯೂ ಕಾರ್ಯದರ್ಶಿಗಳಾಗಿಯೂ, ಶ್ರೀ ಕೆ. ತಿಮ್ಮಪ್ಪಯ್ಯನವರ ಕ್ಯಾಪ್ಟನ್ನರಾಗಿಯೂ ನೇಮಕ ಹೊಂದಿದರು.

ವಿಶ್ವವಿದ್ಯಾಲಯ ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಶ್ರೀ ಆರ್. ಜಯಾನಂದ ಸಾಗರರು ಮತ್ತು ಕಾರ್ಯದರ್ಶಿಗಳೊಡನೆ ತಾ ೩ ರಲ್ಲಿ ದಿವಾನರ ಭೆಟ್ಟಿ ಮಾಡಿ ತೆರವಾಗಿರುವ ಸೈನಿಕ ವಸತಿಗೃಹಗಳನ್ನು ಜಾಗತಿಕ್ಕದೆ ಸರಕಾರ ವಿದ್ಯಾರ್ಥಿಗಳಿಗೆ ಕೊಡುವಂತಾಗಿ ಅದರಿಂದ ವಾಸ್ತವ್ಯ ಪರಿಸ್ಥಿತಿಯನ್ನು ಸುಧಾರಿಸಬೇಕೆಂದು ಅಗಸ್ಟ ೧೫ ರಿಂದ ೩ ದಿನ ಸ್ವಾತಂತ್ರ್ಯೋತ್ಸವದ ನಿಮಿತ್ತ ವಿಶ್ವವಿದ್ಯಾಲಯಕ್ಕೆ ರಜೆ ಕೊಡಿಸುವ ಬಗ್ಗೆ ಸಹಾನುಭೂತಿಯನ್ನೂ ಪಡೆದರು.

ಬೆಂಗಳೂರಿನ ಭಾರತ ಸಂಸ್ಕೃತಿ ಸಂಸ್ಥೆಯ ಆಶ್ರಯದಲ್ಲಿ "ಭಾರತದ ಆದರ್ಶ" ಎಂಬುದರ ಮೇಲೆ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು ಜುಲೈ ೩೧ ನೆಯ ದಿನ ಬಸವನ ಗುಡಿಯ "ವಿಲಿಯಂ ಕ್ವಾನ್ ಜಜ್" ವಿದ್ಯಾರ್ಥಿ ಮಂದಿರದಲ್ಲಿ ಭಾಷಣ ಮಾಡಿದರು.

ಮೈಸೂರು ಸಂಸ್ಥಾನದಲ್ಲಿರುವ ಲೇಬರ್ ಸಂಘಗಳು ಮೈಸೂರು ಲೇಬರ್ ಮಹಾಮಂಡಳ ಅಥ್ವಾಗಲಿ ಸಂಸ್ಥಾನದ ಹೊರಗಿನ ಇತರ ಸಂಸ್ಥೆಯೊಡನಾಗಲಿ ಸೇರಕೂಡದೆಂದು ಮೈಸೂರು ಲೇಬರ್ ಕಮಿಶನ್ನನವರು ಹೊರಡಿಸಿದ ಅಜ್ಞೆಯು ಖಂಡನೀಯವೆಂದು ಅ. ಭಾ. ಟ್ರೇಡ್ ಯುನಿಯನ್ ಕಾಂಗ್ರೆಸ್ಸಿನ ಮತ್ತು ಇತರ ಕೆಲವು ಲೇಬರ್ ಸಂಘಗಳ ಸದಸ್ಯರು ತಿಳಿಸಿದ್ದಾರೆ.

ದಂಡಿನ ರಾಜಬೀದಿಗಳಲ್ಲಿ ಮಹಾರಾಜರು ರಾಜಮರ್ಯಾದೆಯಿಂದ ಮೆರವಣಿಗೆಯಲ್ಲಿ ಹೋಗಬೇಕೆಂದೂ ಮುನಿಸಿಪಲ್ ಕಮಿಶನ್ನಿನ ಬಿನ್ನವತ್ತಳೆಯನ್ನು ಸ್ವೀಕರಿಸಬೇಕೆಂದೂ ಮಹಾರಾಜರನ್ನು ಪ್ರಾರ್ಥಿಸುವ ಏರ್ಪಾಡು ನಡೆದಿದೆ.

ಪರಸ್ಥಳದ ಪ್ರಯಾಣಿಕರೊಬ್ಬರ ಮೇಲೆ ಬಲಾತ್ಕಾರ ಮಾಡಿ ಅವರ ನಗದು ಹಣ ಮತ್ತು ಉಂಗುರಗಳೆರಡನ್ನು ಕಸಿದುಕೊಂಡ ಅಪಾದನೆಯ ಮೇಲೆ ಇಟಕಾಪಾಲನೊಬ ನನ್ನು ಮಲ್ಲೇಶ್ವರದ ಪೋಲೀಸರು ಸೆರೆಹಿಡಿದರು.

೧೯೪೭ ನೆಯ ಜನವರಿಯಿಂದ ೫ ತಿಂಗಳ ಪರಿಹಾರವಾಗಿ ಸುಮಾರು ೨೦ ಲಕ್ಷ ರೂಪಾಯಿಗಳನ್ನು ಚಿನ್ನದ ಗಣಿ ಕಂಪನಿಗಳಿಗೆ ಕೊಡಬಹುದೆಂದು ವಿಶೇಷ ಸಮಿತಿಯು ಸರಕಾರಕ್ಕೆ ಸಲಹೆ ಕೊಟ್ಟಿದೆಯೆಂದು ಗೊತ್ತಾಗಿದೆ.

ಬೆಂಗಳೂರಲ್ಲಿ ಶ್ರೀ ಎಂ. ರಾಮಯ್ಯನವರು "ಅನಂತ ಜ್ಯೋತಿ" ಯೆಂಬ ಹೊಸ ವಾರಪತ್ರಿಕೆಯನ್ನೂ ಶ್ರೀ ವೀರಕೇಸರಿ ಸೀತಾರಾಮ ಶಾಸ್ತ್ರಿಯವರು ಪ್ರತಿಭಾನುವಾರ "ವೀರಕೇಸರಿ" ಯೆಂಬ ಸಾಪ್ತಾಹಿಕವನ್ನೂ ಹೊರಡಿಸುವರೆಂದು ತಿಳಿಯುತ್ತದೆ.

ತಾ॥ ೨—೩ ರಲ್ಲಿ ಲಾಲಬಾಗ್ ಗಾಜಿನಮನೆಯಲ್ಲಿ ಮೈಸೂರು "ಹಾರ್ಟಿಕಲ್ಚರ್" ಸಂಘದ ಆಶ್ರಯದಲ್ಲಿ ಆಕರ್ಷಣೀಯವಾದ ಫಲಪುಷ್ಪ ಪ್ರದರ್ಶನ ನಡೆಯಿತು.

ಬೆಂಗಳೂರು ಯುವಕ ಸಂಘದ ಕೆಲಸಗಾರರು ಅಗಸ್ಟ ೧೫ ರಲ್ಲಿ ಬಸವನ ಗುಡಿಯಲ್ಲಿ ಸ್ವಾತಂತ್ರ್ಯೋತ್ಸವ ಜರುಗಿಸಬೇಕೆಂದು ನಿರ್ಧರಿಸಿದ್ದಾರೆ.

ಮೈಸೂರು ಅರಮನೆಯ ಅಧಿಕಾರದಲ್ಲಿ ಶ್ರೀಗಳಾದ ಬಿ. ಲಿಂಗರಾಜ ಅರಸರನ್ನು "ಖಾಸಾ ಸಮುಖ" ಭಕ್ಷಿಯನ್ನಾಗಿಯೂ ಬಿ. ಚೆನ್ನರಾಜ ಅರಸರನ್ನು "ಫರಾಸಖಾನಾ"ದ ಭಕ್ಷಿಯನ್ನಾಗಿಯೂ ಎಂ. ಜಿ. ಗೋಪಾಲಕೃಷ್ಣ ಅರಸರನ್ನು ತಾತ್ಕಾಲಿಕ ಸೈನ್ಯಶಾಖೆಯ ಭಕ್ಷಿಯನ್ನಾಗಿಯೂ ನಿಯಮಿಸಲಾಗಿದೆ.


ಸ್ಕೌಟ ಚಳವಳವು ವೃದ್ಧಿ ಹೊಂದಬೇಕೆಂದೂ ಅದಕ್ಕೆ ಬೇಕಾದ ಸಹಾಯ ನೀಡಲಾಗುವುದೆಂದೂ ಸಂಸ್ಥಾನದ ಶಿಕ್ಷಣ ಶಾಖೆಯ ಮುಖ್ಯಾಧಿಕಾರಿಗಳಾದ ಶ್ರೀ ಆರ್. ಕಸ್ತೂರಿರಾಜ ಚೆಟ್ಟಿಯವರು ಅಗಸ್ಟ ೨ ರಲ್ಲಿ ಬೆಂಗಳೂರಲ್ಲಿ ಏರ್ಪಡಿಸಿದ್ದ "ಸ್ಕೌಟ್ ರ್‍ಯಾಲಿ" ಯಲ್ಲಿ ಅಧ್ಯಕ್ಷಸ್ಥಾನದಿಂದ ಅಪ್ಪಣೆ ಕೊಡಿಸಿದರು.

ಶ್ರೀ ಎಸ್. ಎಸ್. ಹಿರಿಯಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಅಗಸ್ಟ ೨ ರಲ್ಲಿ ಮೈಸೂರು ಪೌರ ಸಭೆಯ ವಿಶೇಷ ಸಭೆ ಸೇರಿ ತಾ ೧೫ ರಲ್ಲಿ ಸ್ವಾತಂತ್ರ್ಯ ದಿನೋತ್ಸವವನ್ನು ವಿಜೃಂಭಣೆಯಿಂದ ನಡೆಸಬೇಕೆಂದು ಗೊತ್ತುವಳಿ ಪಾಸಾಯಿತು. ಆ ದಿನದ ವೆಚ್ಚಕ್ಕಾಗಿ ೨ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿ ವಿದ್ಯಾರ್ಥಿಗಳಿಗೆ ಸಿಹಿ, ಬಡಬಗ್ಗರಿಗೆ ಅನ್ನ ಮುಂತಾದವನ್ನು ಹಂಚಬೇಕೆಂದೂ ನಿರ್ಧರಿಸಲಾಯಿತು.

ಬೆಂಗಳೂರಿನ ಬ್ರಹ್ಮಚರಣ ಸಮಾಜದವರು ಅವರ ಪಂಗಡದಲ್ಲಿ ಪ್ರಮುಖರಾದ ಕಾಚರಕನಹಳ್ಳಿಯ ಶ್ರೀ ಎಸ್. ಶ್ರೀನಿವಾಸರಿಗೆ ವರ್ಧಂತಿಯಲ್ಲಿ ಸಾರ್ವಜನಿಕ ಸೇವಾ ಪ್ರಶಸ್ತಿ ದೊರೆತ ಬಗ್ಗೆ ತಾ. ೩ ರಲ್ಲಿ ಸಂತೋಷಕೂಟವನ್ನೇರ್ಪಡಿಸಿದರು.

ಮೈಸೂರಿನಲ್ಲಿ ನಡೆವ ಅ. ಮೈ. ಕಾಂಗ್ರೆಸ ಸಮಿತಿಯ ಅಧಿವೇಶನದ ಪ್ರತಿನಿಧಿಗಳಿಗೆ ಮೈಸೂರು ಪುರಭವನದೆದುರಿಗಿರುವ ಶ್ರೀ ಕಾವೇರಿ ಪಟ್ಟಣ ಸುಬ್ರಾಯಚೆಟ್ಟಿ ಛತ್ರದಲ್ಲಿ ವಸತಿ ಸೌಕರ್ಯ ಏರ್ಪಡಿಸಲಾಗಿದೆಯೆಂದು ಸ್ವಾಗತ ಸಮಿತಿ ತಿಳಿಸುತ್ತದೆ.

ಚಿಕ್ಕ ಕಥೆ



ಹೆಂಗರುಳು

ಬರೆದವರು:- ಶ್ರೀಮುರಲಿ

ನಿತ್ಯದಂತೆ ಕಾಲೇಜು ಕೊನೆಗೊಂಡಿತು. ವಿದ್ಯಾರ್ಥಿ ವಿದ್ಯಾರ್ಥಿನಿಯರೆಲ್ಲ ಭರ ಭರ ಹೊರ ಬಂದರು. ತುಂಬಿನಿಂತ ಕೆರೆಯ ಕಾಲುವೆ ತೆರೆದರೆ ಬರುವ ನೀರಿನಂತೆ ಅವರ ಆನಂದಮುದ್ರೆ, ಸಂತುಷ್ಟ ನೋಟ, ಚೇಷ್ಟೆಯ ಮಾತುಕತೆಗಳು ಎಂತಹ ದುಃಖಿಯನ್ನೂ ಒಂದು ಕ್ಷಣ ದುಃಖ ಮರೆಯುವಂತೆ ಮಾಡುತ್ತಲಿದ್ದುವು. ಬಸಂತ ಬರಲು ಬನ ಸಿಂಗರಿಸದಿದ್ದೀತೆ? ಕೋಗಿಲೆಯ ಕಲರವ ಕೇಳದಿದ್ದೀತೆ? ಮಾನವತೆಯ ವಸಂತಋತುವೆಂದರೆ ಕಾಲೇಜಿನ ಕಾಲ! ಒಬ್ಬರೊಬ್ಬರು ಹಾಸ್ಯಮಾಡುತ್ತಲಿದ್ದರು. ನೂಕುತ್ತಲಿದ್ದರು, ಪ್ರಾಧ್ಯಾಪಕರ ರುಕ್ಷ ಭಾಷಣ ಕೇಳಿದ್ದರ ಸಂಪೂರ್ಣ ಪ್ರತೀಕಾರಮಾಡಲೊ ಎಂಬಂತಿದ್ದಿತು ಆ ಸುಂದರ ವಸ್ತ್ರಾಭರಣ ಭೂಷಿತರಾದ ತರುಣ ತರುಣಿಯರ ಸಮೂಹ!

ವಿಮಲೆಯೂ ಕಾಲೇಜ ವಿದ್ಯಾರ್ಥಿನಿ-ಸುಂದರವಾದ ಶರೀರಯಷ್ಟಿ, ತೆಳ್ಳನ್ನ ಉದ್ದ ಶರೀರ, ದುಂಡುಮುಖ, ದೊಡ್ಡ ಕಣ್ಣು, ನೀಳವಾದ ಮೂಗು, ಅನೇಕ ಕಾಲೇಜ ತರುಣರನ್ನಾಕರ್ಷಿಸಿದ ಸುಂದರಿಯೆಂದರೆ ಸಾಕು! ಸುಂದರಿಯಾದರೂ ಅಭ್ಯಾಸದತ್ತ ಲಕ್ಷ ಬಹಳ. ಜಾಣೆಯೂ ಅಹುದು. ತಂದೆ ಶ್ರೀಮಂತ ದೇಸಾಯರು.

ಅವಳೂ ತನ್ನ ಮಿತ್ರೆಯರೊಡನೆ ಚಲ್ಲಾಟವಾಡುತ್ತ ಹೊರಟಿದ್ದಳು. ಮುಂದೆ ಬರಬಹುದಾದ ಭೀಕರ ವಿಪತ್ತಿನಕಲ್ಪನೆಯಿದ್ದರೆ:— 'ಅಜ್ಞಾನವೊಂದು ವರ' ಎಂದು ಹೇಳುವುದು ನಿಜವಾಗಿಯೂ ಯೋಗ್ಯವಾಗಿದೆ; ಇಲ್ಲವಾದರೆ ಮಾನವನು ಸುಖವನ್ನೇ ಕಾಣುತ್ತಿರಲಿಲ್ಲ.

"ಅಯ್ಯೋ ಸತ್ತೆ!" ಭೀಕರ ಕೂಗೊಂದು ಕೇಳಬಂದಿತು. "ಗುಂಡರು ಗುಂಡರು" ಎಂದು ಹಲ ಧ್ವನಿಗಳುದ್ಭವಿಸಿದುವು. "ದಂಗೆ" ಎಂಬ ಅತ್ಯಂತ ಭೀಕರ—ಭಯಾನಕ ಕಲ್ಪನೆ ಎಲ್ಲರ ಕಣ್ಣಿಗೂ ಕಟ್ಟಿತು. "ಓಡಿರಿ, ಓಡಿರಿ ಮುಸಲ್ಮಾನರು, ಗುಂಡರು, ಪುಂಡರು" ಎಂಬ ಅನೇಕಾನೇಕ ಕೂಗುಗಳು ಉತ್ಪನ್ನವಾದುವು.

ದಾರಿಹೋಕರು ಚಲ್ಲಾಪಿಲ್ಲಿಯಾದರು. ಎಲ್ಲಿ ಹೋಗಬೇಕೆಂಬ ವಿಚಾರವೇ ಇರಲಿಲ್ಲ. ಎಲ್ಲರೂ ದಾರಿ ಸಿಕ್ಕತ್ತ, ಕಾಲು ಒಯ್ದತ್ತ, ಮನಬಂದತ್ತ ಓಡತೊಡಗಿದರು. ಸುಂದರವಾಗಿ ತೋರುತ್ತಲಿದ್ದ ಬೀದಿಯೆಲ್ಲವೂ ನಿರ್ಜನವಾಯಿತು.

ಈ ಭೀಕರಾವಸ್ಥೆಗೆ ಎಲ್ಲರಂತೆ ವಿಮಲೆಯೂ ಗುರಿಯಾದಳು; ಎಲ್ಲರಂತೆ ಅವಳೂ ಓಡಿದಳು. ಅಲ್ಪಾವಕಾಶದಲ್ಲಿ ಬೀದಿಯಲ್ಲಿ ಅವಳೊಬ್ಬಳೇ ಆದಳು. ಎಲ್ಲರ ಮುಂದೆಯೋ ಇನ್ನೆಲ್ಲಿಯೋ ಹೋದಳು. ಎಲ್ಲಿ ಹೋಗಬೇಕೆಂಬ ವಿಚಾರವೇ ಇರಲಿಲ್ಲ. ದಾರಿ ಸಿಕ್ಕತ್ತ ಓಡುವದೇ. ಪುಂಡರ ಪುಂಡಾಟಿಕೆಯ ಕೂಗುಗಳು ಇನ್ನೂ ಹೆಚ್ಚಾದುವು. ವಿಮಲೆ ತೀರಾ ಭೀತಳಾದಳು. ಮನೆ ಸೇರಬೇಕೆಂಬದೊಂದೇ ಒಂದು ವಿಚಾರ-ಬೇಗ—ಅದಷ್ಟು ಬೇಗ—ಶಕ್ಯವಿದ್ದರೆ ಅದೇ ಕ್ಷಣ ಮನೆ ಸೇರಬೇಕೆಂದು ವಿಮಲೆ ಹಾರೈಸಿದಳು. ಆದರೂ ಮನೆ ಎಂದಿನಂತೆ ಬೇಗ ಬಾರದೆ ಮುಂದೆ ಮುಂದೆ ಬಲು ದೂರ ಹೋಗುತ್ತಲಿದ್ದಿತು. ಮನಸ್ಸಿನಲ್ಲಿ ಭೀಕರ ಕಲ್ಪನೆಗಳ ತಾಂಡವ ನಡೆದಿದ್ದಿತು. "ಭೀಕರ ಮರಣ" ಅಸಹನೀಯ ಅತ್ಯಾಚಾರ, "ಜೀವಕ್ಕಿಂತಲೂ ಶ್ರೇಷ್ಠವಾದ ಮಾನ—ಸತೀತ್ವದ ಭಂಗ" ಒಂದೇ, ಎರಡೇ, ಹಲವು, ನೂರು, ಸಾವಿರ—ಬಂಗಾಲದಲ್ಲಿ, ಪಂಜಾಬದಲ್ಲಿ ನಡೆದ, ಕೇಳಿದ, ವೃತ್ತಪತ್ರಗಳಲ್ಲೋದಿದ ಭೀಕರ ಕಲ್ಪನೆಗಳೆಲ್ಲ ಒಂದುಗೂಡಿ ವಿಮಲೆಯನ್ನು ಭಯ ಪಡಿಸಲಾರಂಭಿಸಿದುವು.

ವಿಮಲೆ ಓಡುತ್ತಲಿದ್ದಳು. ಮೈಯಲ್ಲಿದ್ದ ಶಕ್ತಿಯನ್ನೆಲ್ಲ ಒಂದುಗೂಡಿಸಿ ಶಕ್ತಿಮೀರಿ ಓಡುತ್ತಲಿದ್ದಳು. ಎಂದೂ ಇಲ್ಲದಷ್ಟು ಜೋರಿನಿಂದ ಓಡುತ್ತಲಿದ್ದಳು. ಮುಂದಿನ ಕ್ಷಣದಲ್ಲೇನಾಗುವದೊ? ಎಂಬ ಭೀತಿಯಿಂದ ಕೈಕಾಲು ಕಳಚಿದರೂ ಓಡುತ್ತಲಿದ್ದಳು. ಮತ್ತೂ ಓಡುತ್ತಲಿದ್ದಳು—ಅಲ್ಲಲ್ಲಿ ಮುಗ್ಗರಿಸುತ್ತಲಿದ್ದಳು ಆಗಾಗ ಜನರನ್ನು ತಡೆಹಾಯುತ್ತಲಿದ್ದಳು, ಅಷ್ಟಾದರೂ ಮೈಮೇಲೆ ಎಚ್ಚರಿಲ್ಲದೆ 'ಗಾಳಿಗರು' ವಿನಂತೆ ಓಡುತ್ತಲಿದ್ದಳು.

"ಅದೋ ಅಲ್ಲೊಂದು ಸುಂದರ ಬೇಟೆ" ವಿಕಟ ಹಾಸ್ಯ ಕೇಳಬಂದಿತು. ಆ ವರೆಗೆ ಎಚ್ಚರಿಲ್ಲದೇ ಓಡುತ್ತಲಿದ್ದ ವಿಮಲೆಗೆ ಮೈಮೇಲೆ ಎಚ್ಚರು ಬಂದಿತು. ವಿಮಲೆ ಭೀತಳಾದಳು. ಆ ವರೆಗೆ ಓಡುವದೊಂದಲ್ಲದೆ ಬೇರೊಂದು ಕಲ್ಪನೆಯೇ ಸುಳಿದಿರಲಿಲ್ಲ. ಆ ವಿಕಟವಿಹಾಸ್ಯ ಕೇಳುತ್ತಲೇ ಎಂದೂ ಬಾರದ ಅನೇಕ ಭೀಕರ-ಭಯಾನಕ—ಅತ್ಯಂತ ವಿದ್ರೂಪ—ನೋಟ ಕಾಣಿಸಿತು. ವಿಮಲೆ ಭೀತಿಯ ಕೊನೆಮುದಿಯನ್ನೇ ಮುಟ್ಟಿದಳು. ಅತ್ಯಂತ ಅಸಹಾಯ ಸ್ಥಿತಿ ಹೇಗಿರುತ್ತದೆಂದರಿತವರಲ್ಲದೇ ಬೇರೆಯವರಿಗೆ ಅವಳ ಸ್ಥಿತಿ ತಿಳಿಯದು.

ಅಂತಹ ಅತ್ಯಂತ ದುಸ್ಸಹನೀಯಾವಸ್ಥೆಯಲ್ಲಿಯೂ ವಿಮಲೆ ತೀರಾ ಧೈರ್ಯಗುಂದಿರಲಿಲ್ಲ. ಒಂದು ಕ್ಷಣ-ಪೂರ್ಣ ಕ್ಷಣವಲ್ಲ ಅಲ್ಪ-ಅತ್ಯಲ್ಪ ಅವಕಾಶ-ಮಾತ್ರ ನೊಗದಿರುಹಿ ಓಡುತ್ತಲಿದ್ದಂತೆಯೆ ಹಿಂಬದಿ ತನ್ನ ದೃಷ್ಟಿಯೆಸೆದಳು. ಭೀಕರಾಕಾರದ-ರುದ್ರರೂಪದ-ಕೊಡಲಿ, ಚೂರಿಗಳನ್ನು-ಹಿಡಿದುಕೊಂಡ-ಅಕರಾಳ ವಿಕರಾಳವಾಗಿ ತೋರುವ-ಅವಳ ಮನದಲ್ಲಿ ತಾಂಡವಾಡುತ್ತಲಿದ್ದ ಭಯಂಕರ—ಅತಿಕಠೋರ ರೂಪಗಳು ಮೈಗೊಂಡು ತೋರಿದುವು. ವಿಮಲೆಯ ಕಣ್ಣು ಕತ್ತಲೆಗೂಡಿಸಿದುವು; ಕಾಲ ಶಕ್ತಿ ಅಡಗಿತು.

ಇಂತಹ ವಿಪನ್ನಾವಸ್ಥೆಯಲ್ಲಿಯೂ ವಿಮಲೆ ತೀರಾ ಪರವಶಳಾಗಲಿಲ್ಲ. ಒಂದುಕ್ಷಣ-ಒಂದು ನಿಮಿಷ ಯೋಚಿಸಿದಳು. ತನಗೂ ಗುಂಡರಿಗೂ ಇದ್ದುದು ಹಿಂದರೆ ಫರ್ಲಾಂಗಿನಂತರವು. ಅಷ್ಟರಲ್ಲಿ ಯಾವುದಾದರೊಂದು ಯುಕ್ತಿ ಸಾಧಿಸಬೇಕು. ಇದೆಲ್ಲ ಅರೆನಿಮಿಷದಲ್ಲಿ ನಡೆದುದು. ಅಕಸ್ಮಾತ್ತಾಗಿ ದಾರಿ ಕೊಂಡ ವಕ್ರವಾಯಿತು. ವಿಮಲೆ ಗುಂಡರಿಗೆ ಮರೆಯಾದಳು. ಅಲ್ಲಿಯೋ ಎರಡು ಮೂರು ಸಂದುಗಳು ಹೊರಳಿದ್ದುವು. ದೇವರ ಮನದಲ್ಲಿದ್ದಂತಾಗಲಿ ಎಂದೊಂದು ಇಕ್ಕಟ್ಟಾದ ಸಂದಿನಲ್ಲಿ ಸೇರಿದಳು. ಸಂದಿಯಲ್ಲಿ ಯಾರೊಬ್ಬರ ಮನೆ ಸೇರಿ ಆಶ್ರಯ ಪಡೆಯಬೇಕೆಂದರೆ ದಂಗೆಯ ವಾತಾವರಣದ ಪರಿಣಾಮವಾಗಿ ಮನೆಬಾಗಿಲುಗಳೆಲ್ಲ ಬಂದಾಗಿದ್ದುವು. ಎಲ್ಲಿಯಾದರೂ ಬಾಗಿಲು ಬಡಿದು ಬಾಗಿಲು ತೆಗೆಸಬೇಕೆಂದರೆ ಹೆಚ್ಚು ಸಮಯವಿಲ್ಲ-ಮತ್ತು ಬಾಗಿಲು ತೆರೆದು ಆಶ್ರಯವೀಯಬಹುದೆಂಬ ಭರವಸೆಯಿಲ್ಲ. ಮುಖ್ಯ ರಸ್ತೆಯಿಂದ ಶಕ್ಯವಿದ್ದ ಮಟ್ಟಿಗೆ ದೂರ ಹೋಗಬೇಕೆಂದು ಮುಂದೆ ಮುಂದೆ ಓಡಿದಳು. ಅಲ್ಪಾವಕಾಶದಲ್ಲಿಯೇ ದಾರಿ ಕೊನೆಗೊಂಡಿತು. ಮರಳಿದ ಹೊರತು ಮಾರ್ಗವಿರಲಿಲ್ಲ. ಮರಳುವದೆಂದರೆ ಗುಂಡರಕೈಗೆ ಬೀಳುವುದೊಂದೇ-ಒಂದು ನಿಮಿಷ—ಅರೆ ನಿಮಿಷ ಯೋಚಿಸಿದಳು. ದೈವದಲ್ಲಿದ್ದಂತಾಗಲೆಂದು ಅಲ್ಲಿಯೇ ಮುಚ್ಚಿದ ಬಾಗಿಲೊಂದನ್ನು ಜೋರಿನಿಂದ ಬಡಿದು ಆಶ್ರಯವೀಯಲು ದೀನವಾಣಿಯಿಂದ ಕೂಗಿದಳು.

ಬಾಗಿಲು ಸರ್ರನೆ ತೆರೆದುದಲ್ಲದೇ ವ್ಯಕ್ತಿಯೊಂದು ವಿಮಲೆಯ ಕೈಹಿಡಿದು ಒಳಗೆಳೆದು ಜೋರಿನಿಂದ ಬಾಗಿಲು ಮುಚ್ಚಿಬಿಟ್ಟಿತು. ತನ್ನನ್ನೆಳೆದವರಾರು? ತಾನಿರುವುದೆಲ್ಲಿ? ಹೀಗೆ ಯಾರದೋ ಮನೆಯಲ್ಲಿ ಸೇರಿದ್ದು ಒಳಿತಾಯಿತೋ ಹೇಗೆ? ವಿಮಲೆಗೆ ಅದಾವುದೂ ತಿಳಿಯುವಂತಿಲ್ಲ ಮಂದ ಪ್ರಕಾಶದಲ್ಲಿ ಆ ವ್ಯಕ್ತಿಯ ಮುಖವೂ ಚೆನ್ನಾಗಿ ಕಾಣುತ್ತಿರಲಿಲ್ಲ. ಆದರೂ ಬಳೆಗಳ ಸಪ್ಪಳ ಸ್ಪರ್ಶದ ಮಾರ್ದವ, ಕಂಡ ನೋಟ—ಇವುಗಳಿಂದ ಆ ವ್ಯಕ್ತಿ ಸ್ತ್ರೀಯೆಂದು ಚೆನ್ನಾಗಿ ಬಲ್ಲಳು. ಸ್ತ್ರೀಯೆಂಬ ವಿಚಾರದಿಂದಲೇ ವಿಮಲೆಗೆಷ್ಟೋ ಧೈರ್ಯ ಬಂದಿತು. ಒಡನೆಯೇ, "ಅಕ್ಕಾ, ನನ್ನನ್ನು ಕಾಪಾಡು" ಎಂದು ಕರುಣಾಪೂರ್ಣ ಸ್ವರದಲ್ಲಿ ನುಡಿದಳು.

ಆ ವ್ಯಕ್ತಿ—ಆ ಹೆಣ್ಣುಮಗಳು—ವಿಮಲೆಯ ಬಾಯ ಮೇಲೆ ಕೈ ಇಟ್ಟು ಅತ್ಯಂತ ಮೃದುವಾದ ಸ್ನೇಹಪೂರ್ಣ ಧ್ವನಿಯಲ್ಲಿ, "ತಂಗೀ ಕೂಗಬೇಡ. ಅದರಿಂದ ನಿನ್ನ ಸ್ಥಿತಿ ತೀರಾ ಕಠಿಣವಾದೀತು." ಎಂದು ಅವಳ ಕೈ ಹಿಡಿದು ಒಂದು ಕೋಣೆಯೊಳಗೆ ಕರೆದೊಯ್ದು ಬಾಗಿಲು ಮುಚ್ಚಿದಳು.

ಕೂಡಲೆ ವಿಮಲೆ ಮಾತಾಡಬೇಕೆಂದು ಬಾಯ್ದೆರೆದಳು. ಅವಳನ್ನು ತಡೆದು ಕಿರುದನಿಯಲ್ಲಿ "ತಂಗೀ ನಾನೆಲ್ಲ ಬಲ್ಲೆ. ಈ ಹದಿನೈದು ದಿನಗಳಿಂದ ಪುಂಡಾಟಿಕೆಯ ಸಿದ್ಧತೆ ನಮ್ಮ ಮನೆಯಲ್ಲಿಯೇ ನಡೆದಿದೆ. ನನ್ನ ಗಂಡನೇ ಇದರ ಮುಂದಾಳು" ಎಂದು ನುಡಿದಳು.

ವಿಮಲೆಗೆ ತನ್ನ ಅವಸ್ಥೆಯ ಅರಿವಾಯಿತು. ಮುಸಲ್ಮಾನರ ಅದೂ ಗುಂಡರ ನಾಯಕನ ಮನೆಯನ್ನೇ ಸೇರಿದುದಕ್ಕೆ ತನ್ನ ದೈವ ಹಳಿದುಕೊಂಡಳು. ಸಾವೆನೆಂದರೂ ಸಾಧ್ಯವಿರಲಿಲ್ಲ. ದಾರಿಯಲ್ಲಿಯೇ ಅನೇಕವಾಗಿದ್ದ ಕಲ್ಲುಗಳೊಂದಕ್ಕೆ ತಲೆಯಪ್ಪಳಿಸಿ ಸಾಯದಿದ್ದುದಕ್ಕೆ ಅಥವಾ ಕೊಂಚ ವೇಳೆ ಮೊದಲು ಮುಂಜೋಲಿಯಿಂದು ರುಳಿ ಬೀಳುತ್ತಲಿದ್ದ ಬಾವಿಯಿಂದ ಸಾವರಿಸಿಕೊಂಡು ಸರಿದೋಡಿದುದಕ್ಕೆ ತನ್ನನ್ನು ತಾನೇ ನಿಂದಿಸಿಕೊಂಡಳು. ಹುಲ್ಲೆ ಹುಲಿಯ ಪವಡೆಯಿಂದ ಪಾರಾಗಿ ಸಿಂಹದ ಬಾಯಲ್ಲಿ ಬಿದ್ದಂತಾಯಿತು. ತಾನಾಗಿ "ಆ" ಎಂದು ಬಾಯ್ದೆರೆದ ವಿಪತ್ತಿನಲ್ಲಿ ಬಿದ್ದಂತಾಯಿತು. ಮುಂಗಾಣದೆ ಮೂಢಳಾಗಿ ನಿಂತಳು.

ಅವಳ ಆ ಶೋಚನೀಯ ಸ್ಥಿತಿಯರಿತು ಆ ಹೆಣ್ಣುಮಗಳು ವಿಮಲೆಯ ಭುಜದ ಮೇಲೆ ತನ್ನ ಕಯ್ಯನ್ನಿರಿಸಿ ಪ್ರೇಮದಿಂದ "ತಂಗೀ ಭೀಕರ ವಿಪತ್ತಿನಲ್ಲಿ ನೀನಾಗಿ ಬಂದು ಬಿದ್ದಂತೆ ನಿನಗೆನಿಸಿದರೆ ಆಶ್ಚರ್ಯವಲ್ಲ. ವಸ್ತುಸ್ಥಿತಿ ಕೂಡಾ ಅಷ್ಟು ಮಟ್ಟಿಗೆ ಹಾಗೆಯೇ ಇದೆ. ನಿನ್ನನ್ನು—ಅಪಾಯ ತಟ್ಟದಂತೆ ಸುರಕ್ಷಿತಳಾಗಿದ್ದ—ನಿನ್ನನ್ನು ಳಿಸಬೇಕೆಂದರೂ ಅದೆಷ್ಟು ಮಟ್ಟಿಗೆ ಸಾಧ್ಯವೆಂದು ಹೇಳಲಾರೆ. ಆದರೂ ನನ್ನಲ್ಲಿ ಅವಿಶ್ವಾಸ ಬೇಡ. ಪುಂಡರ ನಾಯಕನ ಹೆಂಡತಿ—ಹಿಂದು ಧರ್ಮದ ಶತ್ರು ಮುಸಲ್ಮಾನರವಳು ನಾನಾಗಿದ್ದರೂ ನಾನೂ ಹೆಂಗಸು, ನನ್ನದೂ ಹೆಂಗರುಳು. ನನ್ನ ಗಂಡ ಗಂಡಸು. ಧಾರ್ಮಿಕ ಭಾವನೆಗಳಿಂದ ಪ್ರೇರಿತನಾದವನು, ಅದಕ್ಕಿಂತಲೂ ರಾಜಕಾರಣದೊಡನೆ ಆಟವಾಡುವ ಹಲವು ದುಷ್ಟ ಮುಂದಾಳುಗಳ ಕೈಗೊಂಬೆಯಾಗಿರುವವನು. ಮುಂದಾಳುಗಳೆನ್ನಿಸುವ ಹಲವರು ನಮ್ಮಂತಹ ದರಿದ್ರರ ಪ್ರಾಣದೊಡನೆ ಆಟವಾಡುತ್ತಲಿರುವರು. ನಮ್ಮ ಸಂಸಾರದ ಸಂತಸ ಕಳೆದಿರುವರು. ಇದೆಲ್ಲ ಬರಿಯ ರಾಜಕಾರಣದಾಟ, ಸಾಮಾನ್ಯ ಜನರಿಗೆ ಜೀವಸಂಕಟ ತಂಗೀ, ನಿಜಹೇಳಬೇಕೆಂದರೆ ನಾವು ಮುಸಲ್ಮಾನರಾದರೂ ಹಿಂದುಗಳ ನೆರವಿಯಲ್ಲಿಯೆ ಬೆಳೆದವರು. ಚಿಕ್ಕತನದಲ್ಲಿ ಶಾಲೆಗೆ ಹೋಗುವಾಗ ಹಿಂದು ಹುಡುಗಿಯರೇ ನನ್ನ ಗೆಳತಿಯರಾಗಿದ್ದರು. ಅಷ್ಟೇ ಏಕೆ, ಹಿಂದು ಸಂಸ್ಕೃತಿಯ ಪ್ರಭಾವವೇ ನಮ್ಮ ಮೇಲೆ ಬಹಳ. ಆಗ—ಹಿಂದುಗಳದೇ ಇರಲಿ, ಮುಸಲ್ಮಾನರದೇ ಇರಲಿ—ಯಾವದೇ ಉತ್ಸವದಲ್ಲಿ ಹಿಂದು ಮುಸಲ್ಮಾನರಿಬ್ಬರೂ ಬಂಧುಗಳಂತೆ ಹೆಗಲಿಗೆ ಹೆಗಲು ಹಚ್ಚಿ ಅತ್ಯಂತ ಆನಂದದಿಂದ ಭಾಗವಹಿಸುತ್ತಲಿದ್ದರು. ರಾಜಕೀಯ ಮುಂದಾಳುಗಳು ಆ ನೆಮ್ಮದಿಯನ್ನು ತಮ್ಮ ಸ್ವಾರ್ಥಮೂಲಕವಾದ ರಾಜಕಾರಣದಾಟಕ್ಕೆ ಬಲಿಗೊಟ್ಟರು. ಶತ್ರುತ್ವದ ಬೀಜ ಬಿತ್ತಿ ಬೆಳೆಸಿದರು. ಮೂಢ ಧಾರ್ಮಿಕ ಮಬ್ಬಿನಲ್ಲಿ ಸಮಾಜಘಾತಕ್ಕೆ ಕೈ ಕೊಟ್ಟರು ವರು—ಇರಲಿ ತಂಗೀ, ಮಾತನಾಡುತ್ತ ಕೂಡ್ರಲು ವೇಳೆಯಿಲ್ಲ, ನಿನ್ನ ಸುರಕ್ಷಿತತೆ ಮುಖ್ಯ ವಿಷಯವಷ್ಟೇ? ಅದಕ್ಕೇನು ಮಾಡಬೇಕೆಂದು ಯೋಚಿಸುವಾ... ಎಂದು ದುಃಖಮಿಶ್ರಿತ ಸ್ವರದಲ್ಲಿ ನುಡಿದಳು.

ಆ ಹೆಣ್ಣಿಗಳ ಒಂದೊಂದೇ ಮಾತು ವಿಮಲೆಯ ಹೃದಯಕ್ಕೆ ತಾಗುತ್ತಲಿದ್ದಿತು. ಉಚ್ಚ ಆಚಾರ ವಿಚಾರಗಳಿಗೆ ಧರ್ಮದ ಬಂಧನ ಬೇರೆ ಇಲ್ಲವಷ್ಟೆ? ಅಂತಹಳ ಬಗ್ಗೆ ತನ್ನ ಮನಸ್ಸಿನಲ್ಲಿ ಸಂಶಯ ತೆಗೆದುಕೊಂಡ ಬಗ್ಗೆ ವಿಮಲೆಗೆ ಬಹಳ ಹಳಹಳಿಯೆನಿಸಿತು. ಪುಂಡರ ಕೂಗು ಕೇಳಬಂದಿತು. ಇಬ್ಬರೂ ಗಾಬರಿಯಾಗಿ ನಿಂತರು. ಆ ಹೆಣ್ಣುಮಗಳು ವಿಮಲೆಗೆ—"ತಂಗೀ, ನಿನಗೆ ನಾನು ತಂಗಿಯೆಂದು ಕರೆದಾಗಿದೆ. ನಿನ್ನನ್ನು ತಂಗಿಯೆಂದು ಭಾವಿಸಿರುವೆ. ನಿನ್ನ ರಕ್ಷಣೆ ಮಾಡುವ ಹೊಣೆ ನನ್ನದು. ನಿನ್ನ ಸೂಕ್ಷ್ಮ ಬುದ್ಧಿಗೆ ... ಅದನ್ನು ನಾನು ಕಾಯುದಿಲ್ಲ ... ನನ್ನನ್ನು ಕೇಳದಿರುವಳೆ? ಪ್ರಸ್ತುತ ... ರಿಗಲ್ಲದಿನ್ನಾರಿಗೆ ಬರಬೇಕು...... ಎಂದು ನುಡಿದಳು. ಅಷ್ಟರಲ್ಲಿ ಪುಂಡರ ಕೂಗು ...... "ತಂಗೀ, ಗಾಬರಿಯಾದರೆ ಸರಿಯಲ್ಲ, ಇದು ಪರೀಕ್ಷೆಯ ಸಮಯ. ಈಗ ... ನಮ್ಮ ಉಡುಪು ಬದಲಿಸಬೇಕು ... ಅಲ್ಪಾವಕಾಶದಲ್ಲಿ ಸಾಧ್ಯವಾಗಬಹುದಾದ ಉಪಾಯವೊಂದೇ. ಸಂಕಟ ಸಮಯಕ್ಕೆ ... ನನ್ನ ಉಡುಪು ಧರಿಸಲು ಅನುಮಾನಿಸಬೇಡ..."

"ಅಕ್ಕಾ," ವಿಮಲೆ ಬಿಚ್ಚುಮನದಿಂದ ನುಡಿದಳು. "ನಿನ್ನಂತಹ ಅಕ್ಕನನ್ನು ದಯಪಾಲಿಸಿದ ಪರಮೇಶ್ವರನಿಗೆ ವಂದನೆಗಳು. ನಾನು ನಿನ್ನ—ಮುಸಲ್ಮಾನರುಡುಪು ಧರಿಸುವೆ. ಆದರೆ ನೀನೇಕೆ ನನ್ನ ಉಡುಪು ಧರಿಸಬೇಕು?"

"ತಂಗೀ ಪುಂಡರು ನೀನು ಬರುವಾಗ ನಿನ್ನನ್ನು ನೋಡಿರುವರು. ನಿನ್ನ ಶೋಧಕ್ಕೆಂದೇ ಅಲೆದು ಬೇಸತ್ತು ಕೋಪಿಸಿ ಬಂದಿರುವರು. ನಿನ್ನ ಉಡುಪಿನಲ್ಲಿ ನೀನು ಹೊರಬಿದ್ದರೂ ... ವಷ್ಟು ಸಮಯಬೇಕಷ್ಟೆ? ನಿನ್ನ ಉಡುಪಿನಲ್ಲಿ ನನ್ನನ್ನು ನೋಡಿ ಮೋಸ ಹೋಗುವರು. ಅಲ್ಪಾವಧಿಯಾದರೂ ನಾನವರನ್ನು ತಡೆಹಿಡಿಯುವೆನು, ನೀನು ಹೇಗಾದರೂ ಪಾರಾದರೆ ಸಾಕು." ಆಕೆ ಹೃದಯ ತುಂಬಿ ನುಡಿದಳು.

"ಆದರೆ ಅಕ್ಕಾ ನೀನು ವಿಪತ್ತಿಗೆ ಗುರಿಯಾಗುವೆಯಲ್ಲ?" ವಿಮಲೆ ಸಂಶಯಮಿಶ್ರಿತ ಸ್ವರದಲ್ಲಿ ಕೇಳಿದಳು.

"ತಂಗೀ ವಿಶೇಷವೇನೂ ಸಂಭವಿಸಲಾರದು. ಒಂದು ವೇಳೆ ಏನಾದರೂ ಸಂಭವಿಸಿದರೂ ಸಂತೋಷವೇ. ಅನ್ಯರಪ್ರಾಣ ತೆಗೆಯುವ, ಅನ್ಯ ಭಗಿನಿಯರ ಮಾನ ಭಂಗಿಸುವ ಇಂತಹ ಪಾಪಿಗಳ ಮಧ್ಯದಲ್ಲಿ ಕಾಲಕಳೆಯುವದಕ್ಕಿಂತ ಮರಣವನ್ನಪ್ಪುವದು ಬಹಳ ಒಳಿತು. ಓ ತಂಗೀ—ನನ್ನ ಭಗಿನಿ—ಬೇರೇ ಧರ್ಮದವಳಾದರೂ ನಿಮ್ಮ ಧರ್ಮದವರಿಂದಲೇ ಕಲಿತ ಪರಧರ್ಮಸಹಿಷ್ಣುತೆಯ ಪಾಠದ ಫಲವಾಗಿ ನಿನ್ನ—ಸತೀತ್ವ ರಕ್ಷಣೆಯಾದರೆ ನನಗೆ ಮರಣ ಬಂದರೂ ಬರಲಿ. ಇರಲಿ—ವ್ಯರ್ಥ ವೇಳೆಗಳೆಯದೆ ಮುಂದಿನ ಕಾರ್ಯ ಕೈಗೂಡಿಸುವಾ, ನೀನು ಹೊರಹೊರಡುವುದಾದಲ್ಲಿ—ಅದೇಕೆ ಹೊರಡಲೇಬೇಕು—ಈಬಾಗಿಲಿಂದಲೇಹೊರಡು. ಯಾರಾದರೂ ತಡೆದರೆ—ನೀನು ಒಳಗಿರುವೆಯೋ ಏನು ಎಂಬುದನ್ನು ಕೇಳಲೆಂದೇ ತಡೆಯುವರು. ಒಳಗಿರುವಳೆಂದು ಸೂಚಿಸಿ ಭರ ಭರ ನಡೆದು ಬಿಡು, ಮುಂದಿನ ವಿಚಾರ ನನ್ನನ್ನು ಕೂಡಿದೆ" ಎಂದಳು. ನಿಶ್ಚಯದ ತೇಜ ಅವಳ ಕಣ್ಣಲ್ಲಿ ಮಿಂಚಿತು.

ವಿಮಲೆ ಕಂಬನಿದುಂಬಿ, "ಅಕ್ಕಾ, ಹಿಂದು ಧರ್ಮದ ದಿವ್ಯಪಾಠ ಮುಸಲ್ಮಾನಳಾದ ನಿನ್ನಿಂದ ಕಲಿತೆ. ಈ ಬೇಗ ತಡೆಯಲು—ನಟಿಸಲು ನಾನೂ ಯತ್ನಿಸುವೆ. ಪ್ರಾಣದ ಪಣದಿಂದಲಾದರೂ ಪರಸತಿಯರ ಮಾನ ಕಾಯಲು ಯತ್ನಿಸುವೆ" ಎಂದು ನುಡಿದಳು.

ಪುಂಡರ ನಾಯಕ—ಫಾತಿಮೆಯೆಂಬ ಹೆಸರಿನ ಆ ಹೆಣ್ಣಿಗಳ ಗಂಡ, ಮಹಮ್ಮದ—ಬಾಗಿಲು ಬಡಿದು ಹೆಂಡತಿಗೆ ಬಾಗಿಲು ತೆರೆಯಲು ಕೂಗಿದನು.

ವಿಮಲೆ ಫಾತಿಮೆಯರಿಬ್ಬರೂ ಲಗುಬಗೆಯಿಂದ ಉಡುಪು ಬದಲಿಸಿ ಒಬ್ಬರೊಬ್ಬರನ್ನು ಅಪ್ಪಿಕೊಂಡು ಹೊರಡಲು ನಿರೋಪ ತೆಗೆದುಕೊಂಡರು. ವಿಮಲೆ ಭಾರವಾದ ಹೃದಯದಿಂದ ಹೊರಹೊರಟಳು. ಸುದೈವದಿಂದ ಯಾರೂ ತಡೆಯಲಿಲ್ಲ.

ಮಹಮ್ಮದ ತನ್ನ ಅನುಯಾಯಿಗಳೊಂದಿಗೆ ಬಾಗಿಲು ಮುರಿದು ಒಳಹೊಕ್ಕನು. ಅತ್ತಿತ್ತ ನೋಡುವದರಲ್ಲಿ ಮೂಲೆಯಲ್ಲಿ ವಿಮಲೆಯುಡುಪಿನಲ್ಲಿ ಫಾತಿಮೆ ಕಾಣಿಸಿದಳು. ವಿಕಟ ಹಾಸ್ಯದಿಂದ "ಬೇಟೆ ಅಯತ್ನವಾಗಿ ಕೈ ಸೇರಿತು" ಎಂದು ಮುಂಬರಿವದರಲ್ಲಿ ಫಾತಿಮೆ ಚಪಲತನದಿಂದ ಒಳ ಸೇರಿದಳು. ಅತ್ತಿಂದ ಇತ್ತ ಇತ್ತಿಂದ ಅತ್ತ ಓಡುವದರಲ್ಲಿ ಮಹಮ್ಮದ ತೀರಾ ಕೋಪಿಸಿ ಕೈಯಲ್ಲಿದ್ದ ಹರಿತ ಚೂರಿಯಿಂದ ಅವಳ ಎದೆಗೆ ಜೋರಿನಿಂದ ತಿವಿದನು.

ಫಾತಿಮೆ "ಅಲ್ಲಾ" ಎಂದು ಕೂಗಿ ನೆಲಕ್ಕೆ ಬಿದ್ದಳು.

ಮಹಮ್ಮದ ಗಾಬರಿಯಾಗಿ ಬಗ್ಗಿ ನೋಡಿದನು.

ತಾನು ಬಗೆದ ಕರುಳು ತನ್ನ ಹೆಂಡತಿಯದೇ ಆಗಿದ್ದಿತು.

ಪ್ರಶಾಂತವಾದ ಫಾತಿಮೆಯ ಮೊಗದಲ್ಲಿ ಅವನು ಏನು ಕಂಡನೋ ಅವನಿಗೇ ಗೊತ್ತು!

ಎಷ್ಟಾದರೂ ಹೆಂಗರುಳು!

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

[illegible]

ಗುರಗಾಂವಿನ ಒಂದು ಹಳ್ಳಿಯ ಸಂದರ್ಶನ

[illegible] ಪ್ರಾರ್ಥನೋತ್ತರ ಭಾಷಣದಲ್ಲಿ ಸಭೆ [illegible] ತಾವು ನೋಡಲು ಹೋದುದಾಗಿ [illegible]. ಅನೇಕರು ಅಲ್ವಾರ ಮತ್ತು ಭರತ[illegible] ಪಾಕಿಸ್ತಾನಕ್ಕೆ ಹೋಗಿದ್ದಾರೆ; ಉಳಿ[illegible] ತಾವು ಹೋಗಬೇಕೋ ಬೇಡವೋ ಎಂಬ [illegible] ತೊಳಲಾಡುತ್ತಿದ್ದಾರೆ. ತಮ್ಮ [illegible] ಡಾ. ಗೋಪೀಚಂದ ಭಾರ್ಗವರು [illegible] ಅವರಿಗೆ [illegible] ಪತ್ರಿಕೆಯೊಂದು ಆಶ್ವಾಸನಪತ್ರವೆಂದು [illegible]ಯುವರೆಂದರು. ಅವರ ವಿತ್ತ ಜೀವಿತ [illegible] ಸರಕಾರ ರಕ್ಷಿಸುವುದಾಗಿ ಗೋಪೀಚಂ[illegible] ವಚನವಿತ್ತರು. ಆದಾಗ್ಯೂ ತಮ [illegible] ಹಿತವಾಗದೆಂದರು ಗಾಂಧಿಯವರು. [illegible] ಹೆಂಗಸರು, ಗಂಡಸರು ಮಕ್ಕ[illegible] ಭೂತ [illegible] ಸಂದರ್ಭದಲ್ಲಿ [illegible] ಎಂಬುದನ್ನು [illegible] ಕೇಳಸಗೀತಕವೇ ಸರಿ. ಹಾಗೆ [illegible] ಶಾಂತಿಗೊಯ್ಯ ಪಾದಿಯಲ್ಲ. [illegible]ದಿಂದ ಪಾಕಿಸ್ತಾನಕ್ಕೆ ಹೋಗ[illegible] ಹೋಗಲಾರದ ಅಗ್ಗ ಯಾವ ಇಲ್ಲ. [illegible] ತತೆಯರು; ಯಾರೂ ಅವ[illegible] ಒಕ್ಕೂಟದಿಂದ ಹೊರದೂಡಲೂ ಸಮ[illegible]. [illegible]ಯೋಗಗಳು ಜೋಧಕರು[illegible] ಕೆಲವರೆಂದರು— ಅವರು ಅಪರಾಧಿಗಳ[illegible]— ಎಂದು. ಈ ಅಪಾದನೆ [illegible] ಆಗಿದ್ದರೂ ಸಂಸ್ಥಾನ ಅವರನ್ನು ಬಹಿ[illegible]ಲಾರದು. ಸರಿಯಾದ ಮಾರ್ಗವೆಂದರೆ— [illegible] ನಾಗರಿಕರಾಗುವಂತೆ ಅವರನ್ನು ಸುಧಾ[illegible] ಕೊಡುವುದು.

ಬೆಲೆಗಳು ಮತ್ತು ವಿನಿಯಂತ್ರಣ

[illegible] ಹೇಳಿದ — ತಾಸಿದ್ದಲ್ಲಿ ವಿನಿ[illegible]ದಿಂದ ಸಕ್ಕರೆಯ ಬೆಲೆ ಏರಿದೆ ಎಂದು. [illegible]ಡೆಗಳಲ್ಲಿ ಬೆಲೆ ಇಳಿದಿದೆ ಎಂದು ವರದಿ [illegible]ದಿರುವುದಾಗಿ ಗಾಂಧಿಯವರೆಂದರು. [illegible] ಇದ[illegible].

ಪೆಟ್ರೋಲಿನ ನಿಯಂತ್ರಣ

[illegible] ಡಾ. ಮಥಾಯಿಯ [illegible] ಕೇಂದ್ರದಲ್ಲಿಗಳಿದ್ದವು. [illegible] ಮತ್ತು [illegible]ಗಳ ಅಭಾವ [illegible] ಅವುಗಳನ್ನು ಸುಧಾ[illegible] ಪ್ರಯತ್ನಪಡುತ್ತಿದ್ದಾರೆ. [illegible] ನಡೆಸು[illegible] ಸಾಧನಗಳ ನ್ಯೂನತೆ [illegible] ಮೋಟಾರು ಸಾರಿಗೆ [illegible] ಆದರೆ ಪೆಟ್ರೋಲಿಲ್ಲ. [illegible] ಇದರಿಂದ [illegible] ನಿಯಂತ್ರಣವನ್ನು [illegible] ಮುಂದೆ ಬರುತ್ತದೆ. [illegible] ಕಷ್ಟವಾಗುವದೆಂಬು [illegible]. ಅರ್ಧ ಅರ್ಧ ಕೆಲಸವನ್ನು [illegible] ನಿಯಂತ್ರಣವು ಹೋಗ[illegible]. [illegible] ಹೋಗಬೇಕು. ಪೆಟ್ರೋಲು [illegible] ವಸ್ತುವಲ್ಲ. ತಮ [illegible] ಸರಕಾರವು ಇಟ್ಟು [illegible] ಮುಖ್ಯ [illegible]. ಮೋಟಾರು [illegible] ಉಪ್ಪಿನ ಬೆಲೆ [illegible]. ಉಪ್ಪಿನ ಉತ್ಪಾ[illegible] ಆದರೆ ಸಾರಿಗೆಯ [illegible].

[illegible] ಗೊಬ್ಬರ

[illegible]

ಹಾಕುವುದು ಉತ್ಪಾದನೆ ಹೆಚ್ಚಿಸುವ ಒಂದು ಸಮರ್ಥ ಮಾರ್ಗ. ಕೃತಕ ಗೊಬ್ಬರಗಳು ನೆಲಕ್ಕೆ ಹಾನಿಕರವೆಂದು ಗಾಂಧಿಯವರು ತಾವು ಕೇಳಿದ್ದೇವೆಂದರು.

ಗಾಂಧಿಯವರ ಪ್ರಾಣಸ್ತ್ರೀಯಳೂ ಒಕ್ಕಲಿಗಿತ್ತಿಯಾಗಿ ಯೋಚಿಸುವವಳೂ ಆದ ಮೀರಾ ಬೆಹನ (ಹಸುವಿನೆದೆಗೆ ಪ್ರಾಣ) ದಿಲ್ಲಿಯ ಮಲಸಾರ ಪರಿಷತ್ತನ್ನು ಸಂಘಟಿಸಲು ಕಾರಣಳು. ಡಾ. ರಾಜೇಂದ್ರ ಪ್ರಸಾದರು, ಸರದಾರ ದಾತಾರ ಸಿಂಗ ಮತ್ತು ಇತರರು ಅದರಲ್ಲಿ ಭಾಗವಹಿಸಲು ಅಲ್ಲಿಗೆ ಬಂದಿದ್ದರು. ೩ ದಿನಗಳ ಸಭೆಯ ನಂತರ ಅವರು ಒಂದು ಗೊತ್ತುವಳಿಯ ಮಾಲಿಕೆಯನ್ನು ಪಾಸು ಮಾಡಿದರು. ಸೆಗಣಿ, ಮಲ ಮತ್ತು ಹೊಲಸುಗಳಿಂದ ಗೊಬ್ಬರವನ್ನು ತಯಾರು ಮಾಡುವ ವಿಧಗಳನ್ನು ಅವುಗಳಲ್ಲಿ ವಿವರಿಸಲಾಗಿದೆ. ಅದರಿಂದ ಲಕ್ಷಗಟ್ಟಲೆ ರೂಪಾಯಿಗಳು ಉಳಿಯುವವಲ್ಲದೆ ದುರ್ಬಲಹೊಂದದೆ ನೆಲದ ಫಲವತ್ತೆ ಹೆಚ್ಚುತ್ತದೆ. ಉತ್ಪಾದನೆ ಹೆಚ್ಚಿಸುವುದೇ ಪರಿಷತ್ತಿನಲ್ಲಿ ಭಾಗಿಗಳಾದವರ ಮುಖ್ಯೋದ್ದೇಶವಾಗಿತ್ತು. ಇಂದು ಶ್ರೀಮತಿ ಮೀರಾ ಬೆಹನಳು ಋಷಿಕೇಶಕ್ಕೆ ಪಯಣ ಬೆಳಸಿದಳು; ಅವಳು ದನಕರುಗಳ ಪರಿಸ್ಥಿತಿಯ ಸುಧಾರಣೆ ಮತ್ತು ಮಲದ ಗೊಬ್ಬರವನ್ನು ಹಿಂದುಸ್ತಾನದಲ್ಲಿ ಎಲ್ಲೆಡೆಯೂ ತಯಾರಿಸುವಂತೆ ಮಾಡುವುದು ಈ ಕೆಲಸವನ್ನು ಮುಂಬರಿಸುವಳು. ಅದೊಂದು ಕಷ್ಟದ ಕೆಲಸ; ಅವರ ಸಾಫಲ್ಯವು ಜನರ ಸಹಕಾರದ ಮೇಲೆ ಅವಲಂಬಿಸಿದೆ.

ಬಿರ್ಲಾ ಭವನ, ಹೊಸದಿಲ್ಲಿ ೨೦—೧೨—೪೭,

ಹೇಡಿತನ ಬೇಡ

ಸಂಜಾವಾಗಿಯೋ ಆಗಲಿ ದಿಲ್ಲಿಯಲ್ಲಿ ಮತ್ತೆ ದೊಂಬಿಯಾಗುವದಕ್ಕೆ ನನಗೆ ತುಂಬ ನೋವೆನ್ನಿಸುತ್ತದೆ. ದಿಲ್ಲಿಯ ಹಿಂದುಗಳಾಗಲೀ ಶೀಖರಾಗಲೀ ಅಥವಾ ಪಾಕಿಸ್ತಾನದಿಂದ ಬಂದ ದುಃಖಿಗಳಾಗಲೀ ದಿಲ್ಲಿಯಲ್ಲಿ ಮುಸಲ್ಮಾನರನ್ನು ಇರಗೊಡಬಾರದೆಂದೇ ನಿರ್ಧರಿಸಿದ್ದರೆ ಹಾಗೆಂದು ಅವರು ದಿಟ್ಟತನದಿಂದ ಮುಕ್ತಕಂಠರಾಗಿ ಹೇಳಬೇಕು. ಇದರಂತೆ ಸರಕಾರವೂ ಪೀಡಿತ ಮುಸಲ್ಮಾನರನ್ನು ರಕ್ಷಿಸುವದಿಲ್ಲವೆಂದು ಸಾರಬೇಕು. ಹೀಗೆ ಮಾಡುವದೆಂದರೆ ಸರಕಾರ ದಿವಾಳಿಗೆ ಬಂದಂತೆಯೇ. ಈ ಜಾತಿ ದ್ವೇಷದ ಸಿಡುಗು ಪಸರಿಸಿದ್ದೇ ಆದಲ್ಲಿ ಅದು ಹಿಂದುಗಳ ಮತ್ತು ಶೀಖರ ಕುಲವನ್ನೇ ತೊಡೆದು ನಿರ್ನಾಮ ಮಾಡಿಬಿಡುವದು. ಇದರಂತೆ ಪಾಕಿಸ್ತಾನದಲ್ಲಿ ಹಿಂದುಗಳೂ ಶೀಖರೂ ಸುಖವಾಗಿ ಮರ್ಯಾದೆಯಿಂದ ಬಾಳುವದು ದುಸ್ತರವಾದರೆ ಹಿಂದುಸ್ತಾನದಲ್ಲಿ ಮುಸಲ್ಮಾನ ಧರ್ಮವನ್ನು ಅಳಿದು ಬಿಟ್ಟಂತೆಯೇ. ಈ ಹೇಡಿತನವೇಕೆ? ಅದನ್ನು ಬಿಸುಟು ಬಿಡಿರಿ. ಯಾವನ್ನಾಗಲೀ ಪರ್ಯಾಯವಾಗಿ ಹೊರ ನೂಕುವ ಹವಣಿಕೆಯು ಹೇಡಿತನವೆಂದೇ ನಾನು ತಿಳಿಯುತ್ತೇನೆ. ಮುಸಲ್ಮಾನರು ಕೆಡುಕರಾಗಿದ್ದರೆ ಶೀಖರೂ ಹಿಂದುಗಳೂ ಒಳ್ಳೆಯವರಾಗಿ ಉದಾರಿಗಳಾದರೆ ಕೆಡುಕರು ಖಂಡಿತ ಒಳ್ಳೆಯರಾಗುವರು. ಇದೇ ನೀವು ಭಜನೆಯಲ್ಲಿ ಕೇಳಿರಬೇಕು. ಮೀರಾದೇವಿ ಹೇಳಿದಳು, ದೇವಭಕ್ತನನ್ನು ಕಾಣುತ್ತಲೇ ತನಗೆ ಸುಖವೆನಿಸಿತೆಂದು. ಅದೇ ಸಂಸಾರಿಗಳನ್ನು ಕಂಡಾಗ ಆಕೆಗೆ ತುಂಬ ದುಃಖವಾಯಿತಂತೆ. ದೇವಭಕ್ತರನ್ನು ಕಂಡಾಗ ಆಕೆಗೆ ದೈವಿಕ ಅನುಭವವಾಯ್ತು. ಕೆಡುಕರ ಕೂಡ ವ್ಯವಹರಿಸುವದೆಂದರೆ ಅವರನ್ನು ತಿದ್ದುವದು. ಅವರನ್ನು ಹೊರದೂಡುವದಲ್ಲ ಅಥವಾ ಕೊಲ್ಲುವದಲ್ಲ.

ಗ್ರಾಮೋದ್ಯೋಗಗಳು

ಗಾಂಧೀಜಿ ಆಮೇಲೆ ಹರಿಜನ ಕೇರಿಯಲ್ಲಿ ಸೇರಿದ ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಸಭೆಗಳ ಮಾತೆತ್ತಿ ಹೀಗೆ ಹೇಳಿದರು.

“[illegible] ಮತ್ತು [illegible]ರ ನಡುವಿನ ವಾರದಲ್ಲಿ ಹರಿಜನ ಕೇರಿಯಲ್ಲಿ ಸೇರಿದ ಅ. ಭಾ. ಗ್ರಾ. ಸಂಘದ ಸಭೆಗಳಿಗೆ ನಾನು ಹೋಗಿದ್ದೆ. ಸಭೆಗಳ ಬಗ್ಗೆ ಈಗಾಗಲೇ ಹೇಳಿದ್ದೇನೆ. ಆದರೆ ಅ. ಭಾ. ಗ್ರಾ. ಸಂಘದ ಸಭೆಗಳ ಬಗ್ಗೆ ನನಗೆ ಹೇಳುವದಾಗಿಲ್ಲ. ಭಾರತದ ಗ್ರಾಮ ಪದ್ಧತಿಯಲ್ಲಿ ನೂಲುವ ರಾಟಿಯು ಸೂರ್ಯ ಸಮಾನವೆಂದು ನಾನಾಗಲೇ ಹೇಳಿದ್ದುಂಟು. ಕೆಲವೊಂದು ಪಟ್ಟಣಗಳಿಗೆ ಈ ಹೋಲಿಕೆ ಅನ್ವಯಿಸಲಿಕ್ಕಿಲ್ಲ. ಉಳಿದ ನಾನಾವಿಧ ಗ್ರಾಮೋದ್ಯೋಗಗಳು ಚರಖಾ ಸೂರ್ಯನ ಸುತ್ತ ತಿರುಗುವ ಗ್ರಹಗಳಂತಿವೆ. ಸೂರ್ಯನಿಲ್ಲದಿದ್ದರೆ ಗ್ರಹಗಳಿಗೆಲ್ಲಿಯ ಅಸ್ತಿತ್ವ? [illegible]

[illegible]ವಾಗಿ ನಾನು ಸಿದ್ಧ ಮಾಡಿ ತೋರಿಸಲಾರೆ. ಆದರೆ ಹಳ್ಳಿಗಳ ಬಗ್ಗೆ ಮಾತ್ರ ನಾನು ಅತ್ಯಂತ ಆತ್ಮವಿಶ್ವಾಸದಿಂದ ಹಾಗೆ ಹೇಳಬಲ್ಲೆ. ದಿಲ್ಲಿಯ ಸುತ್ತ ಅನೇಕ ಹಳ್ಳಿಗಳಿವೆ. ಅವುಗಳೆಲ್ಲ ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹನ ಕೊಟ್ಟರೆ ಆ ಹಳ್ಳಿಗಳೂ ದಿಲ್ಲಿ ಪಟ್ಟಣವೂ ಪರಸ್ಪರ ಊರ್ಜಿತಕ್ಕೆ ಕಾರಣವಾಗುವವು. ಹಾಗಾದಾಗ ಈ ಜನಗಳಿಗೆ ಜಾತೀಯ ದೊಂಬಿಯ ಬಗ್ಗೆ ಆಲೋಚಿಸಲು ಅನುವೇ ಸಿಕ್ಕುವದಿಲ್ಲ. ದಿಲ್ಲಿಯಲ್ಲಿಯೂ ಸುತ್ತಲಿನ ಭಾಗದಲ್ಲಿಯೂ ಅನೇಕರು ಮುಸಲ್ಮಾನ ಕುಶಲ ಶಿಲ್ಪಿಗಳಿರುವರಾಗಿ ಕೇಳಿದ್ದೇನೆ. ಇವರೆಲ್ಲ ತಮ್ಮ ತಮ್ಮ ಊರು ತೊರೆದು ಹೋದುದರಿಂದ ದಿಲ್ಲಿ ಪಟ್ಟಣದ ಜೀವನಕ್ಕೆ ಕುಂದುಂಟಾಗಿದೆ. ಪಾಣಿಪತ್ತದಲ್ಲಿ ಅನೇಕ ಮುಸಲ್ಮಾನರು ಉಣ್ಣೆಯ ಹೊದಿಕೆಗಳನ್ನು ರಚಿಸುತ್ತಿದ್ದರು. ಅವರು ಹೊರಟು ಹೋಗಿದ್ದರಿಂದ ಕೆಲಸ ನಿಲ್ಲದಿದ್ದರೂ ಈ ಕೆಲಸಕ್ಕೆ ದೊಡ್ಡ ತಡೆಯಾಗಿ ಹೋಗಿದೆ. ಹಿಂದುಗಳು ಮತ್ತು ಮುಸಲ್ಮಾನರು ಬೇರೆ ಬೇರೆ ಉದ್ಯೋಗಗಳಲ್ಲಿದ್ದುದುಂಟು. ಜಾತೀಯ ಗಲಭೆಯಿಂದಾದ ಅಸ್ತವ್ಯಸ್ತದಿಂದ ಹಿಂದುಸ್ತಾನ ಪಾಕಿಸ್ತಾನಗಳೆರಡೂ ಕಷ್ಟ ನಷ್ಟಗಳಿಗೆ ಗುರಿಯಾಗಿವೆ.

ಧನಿಕರೂ ಶ್ರಮಜೀವಿಗಳೂ

ಹಿಂದಿನ ದಿನ ಸಂಜೆ ನಾನು ಮಲದ ಗೊಬ್ಬರದ ಬಗ್ಗೆ ಮಾತನಾಡಿದ್ದೆ. ಪಶುಗಳ ಮತ್ತು ಮನುಷ್ಯರ ಮಲವು ಕಸದೊಡನೆ ಬೆರೆತೆಂದರೆ ಅಮೌಲ್ಯವಾದ ಸುವರ್ಣಸಮ ಗೊಬ್ಬರವಾಗುವದು. ಈ ಗೊಬ್ಬರ ಪಡೆದ ಭೂಮಿಗೆ ಫಲದಾನ ಶಕ್ತಿಯು ಅದೆಷ್ಟೋ ಹೆಚ್ಚುವದು. ಈ ಬಗೆಯ ಗೊಬ್ಬರ ಸಿದ್ಧಗೊಳಿಸುವದೂ ಒಂದು ಪ್ರಕಾರದ ಗ್ರಾಮೋದ್ಯೋಗವೇ. ಇನ್ನುಳಿದ ಗ್ರಾಮೋದ್ಯೋಗಗಳಂತೆ ಇದಾದರೂ, ಹಿಂದುಸ್ತಾನದ ಕೋಟ್ಯನುಕೋಟಿ ಜನರ ಸಹಕಾರವಿಲ್ಲದೆ ಸಾಕಷ್ಟು ಲಾಭ ತೋರಿಸಲಾರದು. ಎಲ್ಲರ ಸಹಕಾರದಿಂದ ಮಾತ್ರ ಉದ್ಯೋಗಗಳು ಪುನರುಜ್ಜೀವಿತವಾಗಿ ಹಿಂದುಸ್ತಾನದ ಏಳಿಗೆಯಾಗುವದು. ಧನಿಕರು ಮತ್ತು ಶ್ರಮಜೀವಿಗಳಲ್ಲಿ ಇರುವದಿದೇ ಮುಖ್ಯ ಭೇದ. ಧನಿಕರು ಕೆಲ ಶ್ರಮಿಕರನ್ನು ಮಾತ್ರ ದುಡಿಸಿ ತಮ್ಮ ಧನವನ್ನು ವರ್ಧಿಸಿಕೊಳ್ಳುತ್ತಾರೆ. ಅದೇ ಅಸಂಖ್ಯಾತ ಶ್ರಮಿಕರ ದುಡಿಮೆಯನ್ನು ಜಾಣತನದಿಂದ ಉಪಯೋಗಿಸಿಕೊಂಡದ್ದಾದರೆ ತಾನಾಗಿ ಅಪರಿಮಿತ ಧನ ವರ್ಧನವಾಗಿ ಅಸಂಖ್ಯಾತ ಜನರ ಹಿತ ಸಾಧಿಸುವದೇನಾಶ್ಚರ್ಯ? ಇದೇ ನಿಜವಾದ ಪ್ರಜಾರಾಜ್ಯದ ಪಂಚಾಯತ ರಾಜ್ಯದ ರಹಸ್ಯ. ಹಿಂದುಸ್ತಾನವು ಈ ಬಗೆಯ ರಚನಾತ್ಮಕ ಕಾರ್ಯದಲ್ಲಿ ತನ್ನ ಶಕ್ತಿಸರ್ವಸ್ವವನ್ನು ತೊಡಗಿಸದಿದ್ದರೆ, ಭಾರತ ಮಾತೆಯ ಪುತ್ರರು ಸದಾ ಅಶೋಭನವಾದ ವಿಕಾರವಾದ ಜಾತೀಯ ಗಲಭೆಯಲ್ಲಿಯೇ ತೊಡಗಿದ್ದಾದರೆ, ಅವರ ಅವಸ್ಥೆಯು ಹಳೆಯ ಕಾಲದ ಯಾದವರಂತೆ ಆಗಿ ಅವರಂತೆ ಇವರೂ ಕುಡಿದು ಸ್ತ್ರೀಲಂಪಟರಾಗಿ, ಜೂಜುಗಾರಿಕೆಗೆ ಮನಸೋತು ಒಬ್ಬರನ್ನೊಬ್ಬರು ಕೊಂದು ವಿನಷ್ಟರಾಗಿ ನಾಮಶೇಷರಾಗಿ ಹೋಗುವದು ಖಂಡಿತ.

ಬಿರ್ಲಾಭವನ, ಹೊಸದಿಲ್ಲಿ, ೨೨-೧೨-೪೭

ಭ್ರಷ್ಟಗೊಳಿಸಲಾಗದು

ಇಲ್ಲಿಂದ ೮ ಮೈಲು ದೂರದಲ್ಲಿ ಇಲ್ಲ, ಅಲ್ಲಿ ಕುತುಬುದ್ದೀನ ಬಖ್ತಿಯಾರ ಕಾಕಿ ಚಿಶ್ತಿ ಸಾಹೇಬ[illegible] ಜನ ಸ್ತಂಭವಿದೆ. ಅದು ಅಜ್ಮೀರದಲ್ಲಿರುವ ಸ್ತಂಭವನ್ನು ಬಿಟ್ಟರೆ ಅತ್ಯಂತ ಪವಿತ್ರವೆನಿಸಿದ್ದು. ಒಂದೇ ಸಮನಾದ ಭಕ್ತಿಯಿಂದ ಅದರೆಡೆನ್ನು ಮುಸ್ಲಿಮರು ಮಾತ್ರವಲ್ಲದೆ ಹಿಂದುಗಳೂ ಇತರ ಮುಸ್ಲಿಮೇತರರೂ ಸಂದರ್ಶಿಸುತ್ತಾರೆ. ಕಳೆದ ಸೆಪ್ಟೆಂಬರದ ಮೊದಲ ಭಾಗದಲ್ಲಿ ಆ ಪವಿತ್ರ ಸ್ಥಳವನ್ನು ಹಿಂದು ಕ್ರೋಧವು ಸಂದರ್ಶಿಸಿತು. ನಾಲ್ಕು ಶತಮಾನಗಳಿಂದ ತಮ್ಮದೆಂದು ತಿಳಿದುಕೊಂಡಿದ್ದ ತಮ್ಮ ಮನೆಗಳನ್ನು ಮುಸ್ಲಿಮರು ಬಿಟ್ಟು ಹೋಗಬೇಕಾಯಿತು. ಎಷ್ಟೋ ಭಕ್ತರೆನಿಸಿದ್ದರೂ ಅವರು ಇನ್ನೂ ಆ ಪವಿತ್ರ ಸ್ತಂಭವನ್ನು ಬಿಟ್ಟು ದೂರದಲ್ಲಿ ಇದ್ದಾರೆ. ಆ ಸ್ಥಳವಿಂದು ಬಿಕೋ ಎನ್ನುತ್ತಿದೆ. ಅದೊಂದು ದುರಂತ ಸಂಗತಿಯೆಂಬುದನ್ನು ಹೇಳುವುದು ಅನವಶ್ಯಕ. ಈ ಅಪಮಾನವನ್ನು ಅಳಿಸಿ ಈ ಸ್ಥಳವನ್ನು ಮೊದಲಿನಂತೆ ಮಾಡುವುದು ಅದಕ್ಕೆ ಸಂಬಂಧಿಸಿದ ಅಧಿಕಾರಿಗಳು, ಹಿಂದುಗಳು ಮತ್ತು ಶೀಖರಿಗೆ ಸೇರಿದ್ದು. ನಾನು ಹೇಳಿದ್ದು ದಿಲ್ಲಿಯಲ್ಲಿ ಮತ್ತು ಒಕ್ಕೂಟದ ಇತರ ಸ್ಥಳಗಳಲ್ಲಿಯ ಮುಸ್ಲಿಂ ಪುಣ್ಯಸ್ಥಳಗಳಿಗೂ ಅನ್ವಯಿಸುತ್ತದೆ. ಸಣ್ಣದಿರಲಿ, ದೊಡ್ಡದಿರಲಿ- ಪೂಜ್ಯಸ್ಥಲಗಳನ್ನು ಭ್ರಷ್ಟಗೊಳಿಸುವುದನ್ನು ನಾವು ಸಹಿಸುವುದಿಲ್ಲವೆಂದು ಎಲ್ಲರೂ ಅಧಿಕಾರಿಗಳೂ [illegible] ಬಹುಸಂಖ್ಯಾಕರಿಗೆ ತಮ್ಮ ದೃಢ [illegible] ಸ್ಪಷ್ಟಪಡಿಸುವುದನ್ನು ಆಗಲೇ ಮಾಡಬೇಕಾಗಿತ್ತು. ತಡಮಾಡದೆ ಅವುಗಳಿಗೆ ಕೊಟ್ಟ ನಷ್ಟವನ್ನೆಲ್ಲ ತುಂಬಿಕೊಡಬೇಕು.

ಒಕ್ಕೂಟದ ಮುಸ್ಲಿಮರ ಕರ್ತವ್ಯ

“ಇತ್ತೀಚೆಗೆ ಕರಾಚಿಯಲ್ಲಿ ಸೇರಿದ ಮುಸ್ಲಿಂ ಲೀಗು ಅಂಗೀಕರಿಸಿದ ನಿರ್ಣಯವನ್ನನುಲಕ್ಷಿಸಿ, ಮೌಲಾನಾ ಆಜಾದರ ಹೇಳಿಕೆಯಂತೆ ಲಖನೋದಲ್ಲಿ ಕೂಡಬಿರುವ ಸಭೆಯನ್ನು ಗಮನದಲ್ಲಿಟ್ಟುಕೊಂಡು, ಕೆಲವು ಮುಸ್ಲಿಂ ಗೆಳೆಯರು ತಾವು ಮುಸ್ಲಿಂ ಲೀಗಿನ ಸದಸ್ಯರಿದ್ದರೆ ಲಖನೋದ ಸಭೆಗೆ ಹೋಗಬೇಕೆ? ಮದ್ರಾಸಿನಲ್ಲಿ ನಡೆವ ಲೀಗ ಸದಸ್ಯರ ಸಭೆಗೂ ಹೋಗಬೇಕೆ? ಹೇಗೇಆಗಲಿ, ಒಕ್ಕೂಟದಲ್ಲಿಯ ಮುಸ್ಲಿಂ ಲೀಗ ಸದಸ್ಯರ ಧೋರಣವೇನಿರಬೇಕು— ಎಂದು ನನ್ನನ್ನು ಕೇಳಿದ್ದಾರೆ. ಅವರನ್ನು ವಿಶೇಷವಾಗಿ ಇಲ್ಲವೆ ಸಾರ್ವಜನಿಕವಾಗಿ ನಿಮಂತ್ರಿಸಿದಲ್ಲಿ ಲಖನೋದ ಸಭೆಗೂ ಮದರಾಸಿನ ಸಭೆಗೂ ಹೋಗತಕ್ಕದ್ದೆಂಬಲ್ಲಿ ನನಗೆ ಎಳ್ಳಷ್ಟೂ ಸಂಶಯವಿಲ್ಲ. ಪ್ರತಿಯೊಂದು ಸಭೆಯಲ್ಲೂ ಅವರು ತಮ್ಮ ಅಭಿಪ್ರಾಯಗಳನ್ನು ಧೈರ್ಯಾರ್ಜವದಿಂದ ಪ್ರಕಾಶಪಡಿಸಬೇಕು. ಭಾರತದಲ್ಲಿಯ ಮುಸ್ಲಿಂ ಅಲ್ಪಸಂಖ್ಯಾಕರು ಪಾಕಿಸ್ತಾನದ ಬಹುಸಂಖ್ಯಾಕರ ರಕ್ಷಣೆಯಿಲ್ಲದೆ ಇರುವುದೇನು ನಷ್ಟದ ಸಂಗತಿಯಲ್ಲ. ಯಾವಾಗ? ಅವರು ಕಳೆದ ೩೦ ವರ್ಷಗಳಿಂದ ಅಹಿಂಸಾತತ್ವವನ್ನು ಅನುಸರಿಸುತ್ತಿದ್ದವರಿದ್ದಾಗ. ಎಷ್ಟೇ ಸಣ್ಣದಿರಲಿ; ಒಂದು ಅಲ್ಪಸಂಖ್ಯಾಕ ಪಂಗಡವು ತನ್ನ ಮಾನ ಮತ್ತು ಮಾನವನಿಗೆ ಪ್ರಿಯವೂ ಪವಿತ್ರವೂ ಎನಿಸಿದ ಇತರ ವಸ್ತುಗಳನ್ನುಳಿಸಿಕೊಳ್ಳಲು ಭಯಪಡಲು ಕಾರಣವಿಲ್ಲವೆಂಬುದನ್ನು ತಿಳಿಯಲು ಅವರಿಗೆ ಅಹಿಂಸೆಯಲ್ಲಿ ಶ್ರದ್ಧೆಯಿರಬೇಕೆಂಬ ನಿಯಮವಿಲ್ಲ. ಅಲ್ಪಸಂಖ್ಯಾಕ ಪಂಗಡದವನೊಬ್ಬನು ತನ್ನನ್ನೂ ತನ್ನ ಸೃಷ್ಟಿಕರ್ತನನ್ನೂ ತನ್ನಂತೆಯೇ ಆತನು ತನ್ನನ್ನು (ಮಾನವನನ್ನು) ನಿರ್ಮಿಸಿದ್ದಾನೆಂಬಷ್ಟು ತಿಳಿದುಕೊಂಡರೆ ತಾನಲ್ಲದೆ ಅವನ ಸ್ವಾಭಿಮಾನವನ್ನು ಜಗತ್ತಿನ ಯಾವ ಶಕ್ತಿಯೂ ಕಸಿದುಕೊಂಡು ಹೋಗಲಾರದು. ಟ್ರಾನ್ಸ್‌ವಾಲಿನ ಬಲಿಷ್ಠ ಸರಕಾರದೊಡನೆ ನಾನು ಹೋರುತ್ತಿದ್ದಾಗ, ಜೋಹಾನ್ಸ ಬರ್ಗಿನ ಒಬ್ಬ ಪ್ರಿಯ ಆಂಗ್ಲ ಗೆಳೆಯನು ತಾನು ಯಾವಾಗಲೂ ಅಲ್ಪಸಂಖ್ಯಾಕರ ಕಡೆಗೇ ಇರುವವನು ಎಂದು ನನ್ನ ಹತ್ತಿರ ಹೇಳಿದನು. ಏಕೆಂದು ಕೇಳಿದರೆ, ಅವರು ಎಂದೂ ತಪ್ಪುವುದಿಲ್ಲ, ಒಂದು ವೇಳೆ ತಪ್ಪುಮಾಡಿದರೆ ಅದರಿಂದ ಅವರನ್ನು ಅತಿ ಸುಲಭವಾಗಿ ದೂರವಿಡಬಹುದು; ಆದರೆ ಬಹುಸಂಖ್ಯಾಕರ ಬಗೆ ಹಾಗಲ್ಲ. ಏಕೆಂದರೆ, ಅವರಿಗೆ ಅಧಿಕಾರ ಮದವಿರುತ್ತದೆ ಎಂದು ಉತ್ತರಿಸಿದ. ಆ ಗೆಳೆಯನು ಒಂದು ಮಹಾಸತ್ಯವನ್ನು ಹೇಳಿದ್ದಾನೆ. ಬಹುಸಂಖ್ಯಾಕರೆಂದರೆ ಒಂದು ಜನದ ಗುಂಪಿಗೆ ವಿಶೇಷತಃ ವಿನಾಶಕ ಆಯುಧಗಳನ್ನಿಟ್ಟುಕೊಂಡು ಸಮರ್ಥರಾಗಿರುವ ಸೊಕ್ಕು ಸಿಕ್ಕಿದಾಗ. ಇದನ್ನು ನಾವು ನಮ್ಮ ಕಟು ಅನುಭವದಿಂದ ತಿಳಿದಿದ್ದೇವೆ. ಒಂದು ಹಿಡಿಯಲ್ಲಡಗುವಷ್ಟು ಆಂಗ್ಲರು ಬಹುಸಂಖ್ಯಾಕರೆನಿಸಿ ಕೋಟಿಗಟ್ಟಲೆ ಭಾರತೀಯರನ್ನು ತಮ್ಮ ಪಾದಾಕ್ರಾಂತರನ್ನಾಗಿ ಮಾಡಿಟ್ಟುಕೊಂಡರು. ಹೇಗೆ? ಆಯುಧದ ಬಲದಿಂದ. ಆ ಆಯುಧಗಳು ಭಾರತೀಯರಿಗಿದ್ದಿಲ್ಲ; ಇದ್ದಿದ್ದರೂ ಅವುಗಳ ಬಳಕೆಯನ್ನವರು ಅರಿತಿದ್ದಿಲ್ಲ. ಆಂಗ್ಲರ ಅಧಿಕಾರ ನಮ್ಮ ದೇಶದಲ್ಲಿದ್ದಾಗ ಹಿಂದುಗಳಾಗಲಿ, ಮುಸಲ್ಮಾನರಾಗಲಿ ಈ ಪಾಠವನ್ನು ಕಲಿಯಲಿಲ್ಲವೆಂಬುದು ಅತ್ಯಂತ ಖೇದಕರವಾದುದು. ಒಕ್ಕೂಟದ ಮುಸಲ್ಮಾನರಿಂದು ಹಿಂದಿನಂತೆ ದಮನಕ್ಕೊಳ್ಳಪಡದೆ ಮುಕ್ತರಾಗಿ ಬಾಳುತ್ತಿದ್ದಾರೆ. ಆದರೆ ಪಶ್ಚಿಮ ಮತ್ತು ಪೂರ್ವದಲ್ಲಿ ಮುಸ್ಲಿಮರಿಗೆ ಬಹುಸಂಖ್ಯಾಕತ್ವವಿದೆಯೆಂದು ಸುಳ್ಳೆ ಜಂಭ ಕೊಚ್ಚುತ್ತಿದ್ದಾರೆ. ಅವರು ಅಲ್ಪಸಂಖ್ಯಾಕರಾಗಿರುವುದರ ಗುಣವನ್ನು ತಿಳಿದರೆ ತಮ್ಮ ಜೀವಿತಗಳ ಮೂಲಕ ಅವರಿಗೆ ಇಸ್ಲಾಮಿನಲ್ಲಿರುವ ಅತ್ಯುತ್ತಮ ತತ್ವಗಳನ್ನು ಪ್ರಕಾಶಪಡಿಸಬಹುದೆಂಬದನ್ನು ಅರಗಿಸಿಕೊಳ್ಳುತ್ತಾರೆ. ಪ್ರವಾದಿಯು ಮಕ್ಕಾದಲ್ಲಿ ಮಂತ್ರಿಯಾಗಿದ್ದಾಗ ಇಸ್ಲಾಂ ತನ್ನಲ್ಲಿಯ ಅತ್ಯಂತ ಮಹತ್ವದ ತತ್ವಸಾರವನ್ನು ಜಗತ್ತಿಗೆ ನೀಡಿತೆಂಬುದನ್ನು ಅವರುಬಲ್ಲರೆ? ಕಾನ್‌ಸ್ಟೆಂಟಾಯಿನ ಬಂದ ನಂತರ ಕ್ರೈಸ್ತಧರ್ಮದ ಅವನತಿ ಆರಂಭವಾಯಿತು. ಆದರೆ ಇಲ್ಲಿ ಈ ವಾದವನ್ನು ನಾನು ಮುಂದೊಯ್ಯಬಾರದು. ಅವರಲ್ಲಿಯೂ ಅಂತರ್ಗತ ಶ್ರದ್ಧೆಯ ಮೇಲೆಯೇ ನನ್ನ ಬುದ್ಧಿವಾದ ನಿಂತಿದೆ. ಆದುದರಿಂದ ನನ್ನ ಮುಸ್ಲಿಂ ಗೆಳೆಯರು ಈ ವಿಶ್ವಾಸದಲ್ಲಿ ಭಾಗಿಗಳಾಗದಿದ್ದಲ್ಲಿ ಅವರು ಈ ಬುದ್ಧಿವಾದವನ್ನು ಬಹುಶಃ ತ್ಯಜಿಸುವದೇ ಉತ್ತಮವೆನಿಸಬಹುದು.

([illegible])

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣಗಳು

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಕಾಂಗ್ರೆಸ್ಸಿನವರಾಗಿರಿ

ನನ್ನ ಮತದಂತೆ, ಕಾಂಗ್ರೆಸ್ಸಿಗೆ ಸೇರಲು ಒಪ್ಪದವರಾಗಿರಬೇಕು; ಅದರ ಸಂಪೂರ್ಣ ಸಮಾನಸ್ಕಂಧತೆಯಿಂದ ತೆರೆದಿದೆಯ ಸ್ವಾಗತ ನೀಡುವವರೆಗೆ ಅವರು ಪ್ರವೇಶಕ್ಕಾಗಿ ಅರ್ಜಿಹಾಕುವದನ್ನು ತಡೆಹಿಡಿಯಬೇಕು. ತತ್ವದಲ್ಲಾದರೂ ಕಾಂಗ್ರೆಸ್ಸಿಗೆ ಅಲ್ಪಸಂಖ್ಯಾಕ ಬಹುಸಂಖ್ಯಾಕ ಜಾತಿಗಳೆಂಬುದಿಲ್ಲ. ಅದಕ್ಕೆ ಧರ್ಮವಿಲ್ಲ ಇರುವುದೆಂದರೆ, ಮಾನವಧರ್ಮವೊಂದೇ. ಕಾಂಗ್ರೆಸ್ಸಿಗೆ ಪ್ರತಿಯೊಬ್ಬ ಗಂಡಸು ಇಲ್ಲವೆ ಹೆಂಗಸು ಉಳಿದ ಯಾವ ಗಂಡಸು ಇಲ್ಲವೆ ಹೆಂಗಸಿಗೂ ಕಡಿಮೆಯಾಗಿ ಕಾಣಲಿಕ್ಕಿಲ್ಲ. ಅದು ಶುದ್ಧ ಧರ್ಮೇತರ ರಾಜಕೀಯ, ರಾಷ್ಟ್ರೀಯ ಸಂಘಟನೆ. ಅದರಲ್ಲಿ ಹಿಂದು, ಮುಸ್ಲಿಂ, ಕ್ರೈಸ್ತ, ಪಾರಸಿ ಯಹೂದಿ ಎಲ್ಲರೂ ಸಮಾನರು. ಏಕೆಂದರೆ, ಕಾಂಗ್ರೆಸ್ಸು ಅನೇಕ ವೇಳೆ ತನ್ನ ತತ್ವದಂತೆ ನಡೆದುಕೊಳ್ಳುವಲ್ಲಿ ಸಮರ್ಥವಾಗಿಲ್ಲ! ಅದರಿಂದ ಅನೇಕ ಮುಸ್ಲಿಮರಿಗೆ ಅದೊಂದು ಸವರ್ಣ ಹಿಂದುಗಳ ಘಟಕವೆಂದು ತೋರುವಂತಾಯಿತು.

ಹೇಗೇ ಆಗಲಿ, ಬಿಗುವಿರುವವರೆಗೆ ಮುಸ್ಲಿಮರು ಗಂಭೀರವಾಗಿ ದೂರಿರುವುದು ಉತ್ತಮ. ಅವರ ಸೇವೆ ಕಾಂಗ್ರೆಸ್ಸಿಗೆ ಬೇಕಾದಾಗ ಅವರು ಕಾಂಗ್ರೆಸ್ಸಿನಲ್ಲಿ ಪ್ರವಿಷ್ಟರಾಗುವರು. ಈ ನಡುವೆ ನನ್ನಂತೆಯೇ ಅವರು ಕಾಂಗ್ರೆಸ್ಸಿನವರಾಗಬೇಕು. ೪ ಆಣೆಯ ಸದಸ್ಯನೂ ಅಲ್ಲದೆ ನನಗೆ ವರ್ಜಿಸ್ಸಿರಲು ಕಾರಣವೆಂದರೆ, ೧೯೧೫ ರಲ್ಲಿ ದ. ಆಫ್ರಿಕದಿಂದ ಬಂದಾಗಿನಿಂದ ನಾನು ಪ್ರಾಮಾಣಿಕವಾಗಿ ಅದಕ್ಕೆ ಸೇವೆ ಸಲ್ಲಿಸಿರುವುದೇ ಆಗಿದೆ. ಈಗಿನಿಂದಲೆ ಪ್ರತಿಯೊಬ್ಬ ಮುಸ್ಲಿಮನೂ ಹಾಗೆ ಮಾಡಬಲ್ಲನು; ಆಗ ನನ್ನ ಸೇವೆಯಷ್ಟು ತನ್ನ ಸೇವೆಗೂ ಬೆಲೆಯಿದೆಯೆಂಬುದನ್ನು ಅವನು ಅರಿತುಕೊಳ್ಳುವನು. ಇಂದು ಪ್ರತಿಯೊಬ್ಬ ಮುಸ್ಲಿಮನೂ ಲೀಗಿನವನೆಂದು ತಿಳಿದುಕೊಳ್ಳಲಾಗಿದೆ; ಆದುದರಿಂದ ಅವನು ಕಾಂಗ್ರೆಸ್ಸಿನ ಶತ್ರುವೆಂದು ಅರ್ಥ. ಲೀಗಿನ ಉಪದೇಶ, ದುರದೃಷ್ಟವಶಾತ್ ಅಂಥದ್ದಾಗಿದೆ. ಈಗ ಶತ್ರುತ್ವಕ್ಕೆ ಎಳ್ಳಷ್ಟು ಕಾರಣವಿಲ್ಲ. ಜಾತೀಯ ವಿಷದಿಂದ ಮುಕ್ತಿಹೊಂದಲು ೪ ತಿಂಗಳು ಬಹಳ ಕಡಿಮೆ. ಈ ಸಾವಿನ ದುರ್ಭಾಗ್ಯವಶದಿಂದ ಹಿಂದು ಮತ್ತು ಸಿಖರು ವಿಷವನ್ನು ಅಮೃತವೆಂದು ತಿಳಿದು ಭಾರತದ ಮುಸ್ಲಿಮರ ಶತ್ರುಗಳಾಗಿ, ನಿರ್ಲಜ್ಜತೆಯಿಂದ ಪ್ರತೀಕಾರವೆಸಗಿ ಪಾಕಿಸ್ತಾನದ ಮುಸ್ಲಿಮರಿಗೂ ಪಗೆಗೆಳೆಸಿಬಿಟ್ಟರು. ಆದುದರಿಂದ ಈ ವಿಷಮಯ ವಾತಾವರಣವನ್ನು ಮೀರಿ ನಿಲ್ಲಬೇಕೆಂದು ನಾನು ಮುಸ್ಲಿಂ ಅಲ್ಪಸಂಖ್ಯಾಕರಿಗೆ ಅಗ್ರಹಪೂರ್ವಕ ಬಿನ್ನವಿಸಿಕೊಳ್ಳುತ್ತೇನೆ. ಮಾನಸಿಕವಾದ ಹಿಡಿತಾಯವಿಲ್ಲದೆ ತಾವು ಒಕ್ಕೂಟದ ಸಂಪೂರ್ಣ ನಾಗರಿಕರೆಂದು ತಮ್ಮ ಆದರ್ಶ ನಡತೆಯಿಂದ ತೋರಿ, ಹುಚ್ಚು ಪೂರ್ವಗ್ರಹಗಳನ್ನು ಬಿಟ್ಟು ಬದುಕಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ. ಅದೊಂದೇ ಮಾನ್ಯ ಮಾರ್ಗ. ಹಿಂದು ಮಹಾಸಭೆ, ಸಿಖಸಭೆ ಇಲ್ಲವೆ ಪಾರಸಿ ಸಭೆ ಹೇಗೋ ಹಾಗೇ, ಈ ಕಾರಣದಿಂದ, ಲೀಗೊಂದು ರಾಜಕೀಯ ಸಂಘವಾಗಿ ಉಳಿಯಲಾರದು. ಧಾರ್ಮಿಕ ಆಂತರ ಸುಧಾರಣೆಗಳನ್ನು, ತಮ್ಮ ಧರ್ಮಗಳಲ್ಲಿಯ ಅಸ್ಪೃಶ್ಯತಾ ಮೊಂಡಗಳನ್ನು ಸಂಶೋಧಿಸಲು, ಅಸ್ಪೃಶ್ಯ ಮೊಂಡಗಳನ್ನು ಅರಗಿಸಿಕೊಳ್ಳಲು ಅವು ಧಾರ್ಮಿಕ ಸಂಸ್ಥೆಗಳಾಗಿ ಕೆಲಸ ಮಾಡಬಹುದು. ಆಗ ಅವರು ವಾತಾವರಣದ ವಿಷವನ್ನು ತೊಳೆದು ತೆಗೆದು ಶುದ್ಧಪಡಿಸುವರಲ್ಲದೆ ಸತ್ಕಾರ್ಯದಲ್ಲಿ ಒಬ್ಬರನ್ನೊಬ್ಬರು ಸ್ಪರ್ಧಿಸುತ್ತಾರೆ. ಅವರು ಪರಸ್ಪರ ಗೆಳೆಯರಾಗಿ ತನ್ಮೂಲಕ ಸರಕಾರಕ್ಕೆ ನೆರವಾಗುವರು. ಅವರು ಅದರಲ್ಲಿರಲಿ, ಇಲ್ಲದಿರಲಿ— ಅವರ ರಾಜಕೀಯ ಮಹತ್ವಾಕಾಂಕ್ಷೆಗಳು ಕಾಂಗ್ರೆಸ್ಸಿನ ಮೂಲಕವೇ ಸಾಧಿಸಲು ಸಾಧ್ಯ. [illegible] ಜನರನ್ನೇ ದೃಷ್ಟಿಯಲ್ಲಿಟ್ಟು [illegible] ಕಾಂಗ್ರೆಸ್ಸೊಂದು ರಾಜತಂತ್ರದಲ್ಲಿ [illegible] ಸ್ವಾರ್ಥ ಸಾಧಕರ [illegible] ಅವರೆಲ್ಲ ಬರುವಷ್ಟು ಜನರಿದ್ದಾರೆ. [illegible] ಅದಕ್ಕೆ ಅಪ್ರತಿಹತ ಸ್ಥಾನವಿತ್ತು. ಈಗ [illegible]. ಏಕೆಂದರೆ, ಸರಕಾರದ [illegible] ಹಿಂದುಸ್ತಾನವನ್ನು ಪ್ರತಿನಿಧಿಸಲು ಪ್ರಯತ್ನಿಸುತ್ತದೆ. ಈ ತತ್ತ್ವ ತುದಿಯವರೆಗೂ ಅದು ಸೇವೆ ಮಾಡುವ ಗುರಿಯುಳ್ಳದ್ದಾಗಿದೆ."

ಬಿರ್ಲಾಭವನ, ಹೊಸದಿಲ್ಲಿ ತಾ ೩೧-೧೨-೪೭

ಪ್ರಾರ್ಥನಾವಸರ

"ಚಳಿ ಹೆಚ್ಚುತ್ತಿರುವುದರಿಂದ ೫½ ಯ ಬದಲು ೫ ಗಂಟೆಗೆ ಪ್ರಾರ್ಥನೆಯನ್ನು ಪ್ರಾರಂಭಿಸಬಹುದು [illegible] ಬಂದ ಕಾರಣ ದಿನವೂ ಕ್ರಮವಾಗಿ ಉಪಸ್ಥಿತನಾಗುತ್ತೇನೆ, ಆದರೆ ಅವರ ಬಯಕೆಯನ್ನು ನಾನು ಮನ್ನಿಸುತ್ತೇನೆ. ಮುಂಚಿತವಾಗಿ ಪ್ರಾರ್ಥನೆ ನಡೆಯಬೇಕೆಂಬವರೆಲ್ಲರೂ ಕೈಯೆತ್ತಿರಿ. (ಕೈಯೆತ್ತಿದರು) ಬಹುಜನರು ಆ ಬಗ್ಗೆ ಕೈಯೆತ್ತಿದ್ದೀರಿ, ವಿರೋಧಕರೇ ವಿರಳ. ಆದುದರಿಂದ ಈ ಮೂಲಕ ಪ್ರಾರ್ಥನಾವೇಳೆಯನ್ನು ಅರ್ಧಗಂಟೆ ಹಿಂದಕ್ಕೆ ಸರಿಸಲಾಗುತ್ತದೆ."

ಭಾವಲ್ಪುರದಲ್ಲಿ ಮುಸ್ಲಿಮೇತರರು

